ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 28

ಜುಲೈ 6-12, 1998 ರೂ. 2.00

ಜನತೆಯ ಪ್ರತಿಭಟನೆ, ಕಾರ್ಮಿಕರ ಮುಷ್ಕರ, ನಿಲ್ಲದ ಎಐಎಡಿಎಂಕೆ ಬೆದರಿಕೆ

ಇನ್ನೆಷ್ಟು ದಿನ ಈ ಬಿಜೆಪಿ ನೇತೃತ್ವದ ದುರಾಡಳಿತ?

ಜುಲೈ 3 ರಂದು ದೇಶಾದ್ಯಂತ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ನೇತೃತ್ವದಲ್ಲಿ ಪ್ರತಿಭಟನಾ ದಿನಾಚರಣೆ, ಕಾರ್ಖಾನೆಗಳ, ಕಚೇರಿಗಳ ಎದುರು ಮತಪ್ರದರ್ಶನ, ಪಶ್ಚಿಮ ಬಂಗಾಳದಲ್ಲಿ ಸಂಪೂರ್ಣ ಮುಷ್ಕರ ಹಾಗೂ ಸಂಸತ್ತಿನೆದುರು ಎಡಪಕ್ಷಗಳ ಸಂಸತ್ ಸದಸ್ಯರ ಪ್ರತಿಭಟನಾ ಧರಣಿಯೊಂದಿಗೆ ಸಂಸತ್ತಿನ ಬಜೆಟ್ ಅಧಿವೇಶನ ಪುನರಾರಂಭವಾಗಿದೆ. ಅತ್ತ ಬಿಜೆಪಿ ಮಿತ್ರ ಪಕ್ಷ ಎಐಎಡಿಎಂಕೆಯ ಸದಸ್ಯರು ಸಂಸತ್ತಿನ ಕಲಾಪದಲ್ಲಿ ಭಾಗವಹಿಸದೆ ಬಿಜೆಪಿಯ 'ಸ್ಥಿರತೆ'ಯ, 'ಉತ್ತಮ ಆಡಳಿತೆ'ಯ ಟೊಳ್ಳುತನವನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ಇತ್ತೀಚೆಗೆ ಲೇಖನವೊಂದರಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ವರ್ಣಿಸಿದಂತೆ "ನೂರು ದಿನಗಳ ಹಿಂದೆ ಪತ್ರಿಕೆಗಳ ಮಂದಿಮಾಗಧರು ದೇಶ ಬಹಳದಿನದಿಂದ ನಿರೀಕ್ಷಿಸಿದ್ದ ಪ್ರಧಾನಿಯೆಂದು ವರ್ಣಿಸುತ್ತಿದ್ದ ವಾಜಪೇಯಿಯವರು ಜಯಲಲಿತಾರವರಿಂದ ಬೆಂಬಲದ ಪತ್ರ ನಿರೀಕ್ಷಿಸುತ್ತಿದ್ದರು....ಈಗಲೂ ವಾಜಪೇಯಿಯವರು ನಿರೀಕ್ಷಿಸುತ್ತಲೇ ಇದ್ದಾರೆ – ಈ ಬಾರಿ ನಡುಕದಿಂದ – ಅದೇ ಜಯಲಲಿತಾರವರಿಂದ ಬೆಂಬಲ ಹಿಂತೆಗೆದುಕೊಳ್ಳುವ ಪತ್ರ ಯಾವಾಗ ಬಂದುಬಿಡುತ್ತೋ ಎಂದು"

ಸಮರ್ಥ ನಾಯಕರಿಂದ ಸ್ಥಿರ ಸರ್ಕಾರ ನೀಡುವ, ಉತ್ತಮ ಆಡಳಿತ ನೀಡುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ವಾಜಪೇಯಿ ಸರಕಾರ ಕೇವಲ ಅಧಿಕಾರದ ರೊಟ್ಟಿ ತುಣುಕುಗಳನ್ನು ಹಂಚಿಕೊಳ್ಳಲು ಒಟ್ಟು ಸೇರಿದ ಪಕ್ಷಗಳ ಒಂದು ಕೂಟದ ಸರಕಾರ ಎಂದು ಬಿಜೆಪಿ - ಎಐಎಡಿಎಂಕೆ ನಾಯಕರ ವಾಗ್ಯುದ್ಧದಲ್ಲಿ ದಿನೇ ದಿನೇ ಸ್ಪಷ್ಟವಾಗುತ್ತಿದೆ. ಡಿಎಂಕೆ ಸರಕಾರವನ್ನು ವಜಾ ಮಾಡುವ ಶರತ್ತನ್ನು ಬಿಜೆಪಿ ಒಪ್ಪಿತ್ತೆಂದು ಎಐಎಡಿಎಂಕೆ ಮುಖಂಡರು ಒತ್ತಿ-ಒತ್ತಿ ಹೇಳುತ್ತಿದ್ದಾರೆ. ಬಿಜೆಪಿ ಮುಖಂಡರು ಕೆಲವೊಮ್ಮೆ 356ನೇ ಕಲಮನ್ನು ದುರುಪಯೋಗ ಮಾಡುವುದು ತನಗೆ ಇಷ್ಟವಿಲ್ಲವೆಂಬ ನೀತಿಬದ್ಧತೆಯ ನಾಟಕ ಮಾಡಿದರೆ, ಇನ್ನೊಮ್ಮೆ 356ನೇ ಕಲಮನ್ನು ಬಳಸಲು ಬೇಕಾದಷ್ಟು ಬಹುಮತದ ಶಕ್ತಿ ತನ್ನಲ್ಲಿಲ್ಲ ಎಂದು ಒಪ್ಪಿಕೊಳ್ಳುತ್ತದೆ. ಇಲ್ಲವಾದರೆ ಅದನ್ನು ಬಳಸಲು ತಾನು ಹಿಂಜರಿಯುತ್ತಿರಲಿಲ್ಲ ಎಂಬ ಇಂಗಿತ ನೀಡುತ್ತದೆ. ತನಿಖಾ ತಂಡಗಳನ್ನು ಕಳಿಸಿ ತನ್ನ ಮಿತ್ರಪಕ್ಷಗಳನ್ನು ಸಂತುಷ್ಟಗೊಳಿಸಲು ಸಂವಿಧಾನದ ಉಲ್ಲಂಘನೆ ಮಾಡಲೂ ಹೇಸದೆ ತನ್ನ ನೀತಿಬಾಹಿರತೆಯನ್ನು ತೋರಿಸಿಕೊಟ್ಟಿದೆ. ಒಂದೆಡೆ ಎಐಎಡಿಎಂಕೆ ಮುಖಂಡರನ್ನು ಸಂತುಷ್ಟಗೊಳಿಸಲು ಏನು ಮಾಡಲೂ ಸಿದ್ಧ ಎಂಬಂತೆ ವರ್ತಿಸಿದರೆ, ಇನ್ನೊಮ್ಮೆ ಎಐಎಡಿಎಂಕೆ ಕೈಕೊಟ್ಟರೂ ತಮ್ಮ ಸರಕಾರಕ್ಕೆ ಏನೂ ಅಪಾಯವಿಲ್ಲ ಎಂದು ಹೇಳುತ್ತಿದ್ದಾರೆ. ಮಹಿಳಾ ಮೀಸಲಾತಿಯ ಮಸೂದೆಯನ್ನು ಮೊದಲ ದಿನವೇ ಮಂಡಿಸುವ ಮಾತನ್ನೂ ಈ ಸರಕಾರ ಉಳಿಸಿಕೊಂಡಿಲ್ಲ. ಅದಕ್ಕೆ ಏನೇನೋ ನೆವ ಕೊಟ್ಟಿದೆ. ಒಟ್ಟಿನಲ್ಲಿ ದಿನೇ-ದಿನೇ ಈ ಕೂಟದ ಆಡಳಿತದ ಅಸಮರ್ಥತೆ ಹೆಚ್ಚೆಚ್ಚು ಜನಗಳ ಅರಿವಿಗೆ ಬರುತ್ತಿದೆ.

ಈ ಹಿನ್ನೆಲೆಯಲ್ಲಿ ಬಂದ ಬಿಜೆಪಿ ಸರಕಾರದ ಮೊದಲ ಬಜೆಟ್, ನಂತರ ಅದರಲ್ಲಿನ ರೆವಿನ್ಯೂ ಸಂಗ್ರಹದ ಹಲವು ಪ್ರಸ್ತಾಪಗಳನ್ನು ಹಿಂತೆಗೆದುಕೊಂಡದ್ದು, ಇದರಿಂದ ಆಗಲೇ ನಾಗಾಲೋಟ ಹೂಡಲಾರಂಭಿಸಿರುವ ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆ, ಜನಸಾಮಾನ್ಯರ ಬದುಕು ವಿಪರೀತವಾಗಿ ಹದಗೆಡುತ್ತಿದ್ದು ಜನ ಬೀದಿಗಿಳಿಯಲಾರಂಭಿಸಿದ್ದಾರೆ. ಜನತೆಯ ಈ ಕ್ರೋಧಕ್ಕೆ ಸಂಘಟಿತ ಸ್ವರೂಪ ಕೊಡಲು ಎಲ್ಲಾ ಜನವಿಭಾಗಗಳ ಪ್ರಾತಿನಿಧ್ಯ ಹೊಂದಿರುವ ರಾಷ್ಟ್ರೀಯ ವೇದಿಕೆ ಜುಲೈ 3 ರಂದು ಪ್ರತಿಭಟನಾ ದಿನದ ಆಚರಣೆಯೊಂದಿಗೆ ಒಂದು ಚಳುವಳಿಯನ್ನು ಆರಂಭಿಸಿದೆ. ಬಾಂಬ್ ಸ್ಫೋಟ, ಪಾಕಿಸ್ತಾನ-ಚೀಣಾದ ಬೆದರಿಕೆಗಳ ಗುಮ್ಮವನ್ನು ತೋರಿಸಿ, ವಿಹೆಚ್‌ಪಿ ಮೂಲಕ ಮತ್ತೆ ಅಯೋಧ್ಯೆಯ ಪ್ರಶ್ನೆ ಏಳುವಂತೆ ಮಾಡಿ ಜನಗಳ ಗಮನವನ್ನು ತಮ್ಮ ವೈಫಲ್ಯಗಳಿಂದ ಬೇರೆಡೆಗೆ ಸೆಳೆಯುವ ಬಿಜೆಪಿ ಮುಖಂಡರ ಪ್ರಯತ್ನವೂ ನಿರೀಕ್ಷಿತ ಫಲ ನೀಡಿಲ್ಲ. ರಾಷ್ಟ್ರೀಯ ವೇದಿಕೆಯ ಕರೆಗೆ ದೇಶಾದ್ಯಂತ ಉತ್ತಮ ಸ್ಪಂದನ ದೊರೆತಿದೆ. ಬೆಂಗಳೂರಿನಲ್ಲಿ ಸುರಿವ ಮಳೆಯಲ್ಲೂ ಪ್ರತಿಭಟನಾ ಧರಣಿ ನಡೆಯಿತು.

ಅತ್ತ ಸಂಸತ್ತಿನ ಬಾಗಿಲಲ್ಲಿ ಜನಗಳ ಈ ಕ್ರೋಧಕ್ಕೆ ದನಿ ನೀಡುತ್ತಾ ಎಡಪಕ್ಷಗಳ ಸದಸ್ಯರು ಧರಣಿ ಕೂತು ವಿಪರೀತ ಬೆಲೆಯೇರಿಕೆ, ನಿರುದ್ಯೋಗ ಹೆಚ್ಚಿಸುವ ಆರ್ಥಿಕ ನೀತಿಗಳು, ಸಾರ್ವಜನಿಕ ವಲಯವನ್ನು ಕಳಚಿಹಾಕುವ ಕ್ರಮಗಳನ್ನು, ರೂಪಾಯಿ ಬೆಲೆಯಲ್ಲಿ ಸತತ ಇಳಿತ, ಪರಮಾಣು ಪರೀಕ್ಷಣೆಯ ನಂತರ ವಿಶ್ವದಲ್ಲಿ ಭಾರತ ಎದುರಿಸಬೇಕಾದ ಸ್ಥಿತಿ, ಮತ್ತೆ ಅಯೋಧ್ಯೆ ಪ್ರಶ್ನೆಯನ್ನು ಉದ್ರೇಕಿಸುವ ಚಟುವಟಿಕೆಗಳು ಇವೆಲ್ಲದರ ವಿರುದ್ಧ ಘೋಷಣೆಗಳನ್ನು ಕೂಗಿದರು. 'ಸಾರ್ವಜನಿಕ ವಲಯದ ಮಾರಾಟ ಬೇಡ', 'ಜನತೆಯನ್ನು ದಬಾಯಿಸಲು ಬಂದಿದೆ ಬಿಜೆಪಿಯ ಬಜೆಟ್ ಬಾಂಬ್', 'ಬಿಜೆಪಿಯ ಕೋಮುವಾದಿ ಅಜೆಂಡಾಕ್ಕೆ ಧಿಕ್ಕಾರ' ಇತ್ಯಾದಿ ಘೋಷಣಾ ಫಲಕಗಳನ್ನು ಹಿಡಿದು ಪ್ರತಿಭಟನೆ ವ್ಯಕ್ತಮಾಡಿದ ಎಡಪಕ್ಷಗಳ ಸಂಸತ್ ಸದಸ್ಯರು ನಂತರ ಸದನಗಳೊಳಗೂ ಈ ಪ್ರಶ್ನೆಯನ್ನು ಎತ್ತಿದರು. ಸರಕಾರದ ತಪ್ಪು ನೀತಿಗಳಿಂದಾಗಿ ಈ ಬೆಲೆಯೇರಿಕೆಯಾಗಿದೆ ಎಂದು ಒತ್ತಿ ಹೇಳಿದ ಅವರು ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟವನ್ನು ನಿರ್ಣಯಿಸುವ ಮೊದಲು ಸಂಸತ್ತಿನ ಒಪ್ಪಿಗೆಯನ್ನು ಪಡೆಯದ ಬಗ್ಗೆ ಸರಕಾರವನ್ನು ತರಾಟೆಗೆ ತಗೊಂಡರು.

ಧರಣಿಯ ನಂತರ ಸಿಪಿಐ(ಎಂ) ಸಂಸದೀಯ ಸಮಿತಿ ಒಂದು ಹೇಳಿಕೆ ನೀಡಿ ಸಾರ್ವಜನಿಕ ವಲಯದ ಘಟಕಗಳ 74% ವರೆಗೆ ಶೇರುಗಳ ಮಾರಾಟದ ನಿರ್ಣಯವನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದೆ. ಏಕೆಂದರೆ ಇಂತಹ ಕ್ರಮ ರಾಷ್ಟ್ರೀಯ ಸ್ವಾವಲಂಬನೆಯ ಅಡಿಗಲ್ಲನ್ನೇ ಹಾಳುಗೆಡವುತ್ತದೆ, ಲಕ್ಷಾಂತರ ಕಾರ್ಮಿಕರನ್ನು ಬೀದಿಗೆಸೆಯುತ್ತದೆ ಎಂದು ಅದು ಹೇಳಿದೆ. ಬಜೆಟ್ ನಂತರದ ಬೆಲೆಯೇರಿಕೆ ಜನಗಳನ್ನು ಕಕ್ಕಾಬಿಕ್ಕಿಯಾಗಿಸಿದೆ. ಎಲ್ಲಾ ವಿಭಾಗದ ಜನಗಳನ್ನು ಇದು ತಟ್ಟಿದೆ ಎಂದಿರುವ ಈ ಹೇಳಿಕೆ ಸರಕಾರ ತಕ್ಷಣ ಮಧ್ಯಪ್ರವೇಶಿಸಿ ರೇಷನ್ ವ್ಯವಸ್ಥೆಯನ್ನು ಬಲಯುತಗೊಳಿಸಿ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಇಳಿಸಬೇಕು ಎಂದು ಆಗ್ರಹಿಸಿದೆ.

ಹಣಕಾಸು ಮಸೂದೆಯ ವಿವಿಧ ಅಂಶಗಳ ಮೇಲೆ 'ಕಡಿತ ಠರಾವು' ಗಳನ್ನು ತಂದು ಬಿಜೆಪಿ ನೇತೃತ್ವದ ಸರಕಾರ ಜನ-ವಿರೋಧಿ ಆರ್ಥಿಕ ನೀತಿಗಳನ್ನು ತಡೆಯಲು ಪ್ರಯತ್ನಿಸುವುದಾಗಿ ಎಡ ಪಕ್ಷಗಳು ಹೇಳಿವೆ. ○

ಮಹಿಳಾ ಮೀಸಲಾತಿ ಮಸೂದೆ ಮುಂದೂಡಿಕೆ

ಬಿಜೆಪಿಯ ಗೋಸುಂಬೆತನದ ಮತ್ತೊಂದು ಪ್ರದರ್ಶನ

ಬಜೆಟ್ ಅಧಿವೇಶನದ ಪುನರಾರಂಭದ ಮೊದಲ ದಿನವೇ ಮಂಡಿಸಲು ಪಟ್ಟಿ ಮಾಡಿದ್ದ ಮಹಿಳಾ ಮೀಸಲಾತಿ ಮಸೂದೆಯ ಮಂಡನೆಯನ್ನು ಕೊನೆ ಗಳಿಗೆಯಲ್ಲಿ ಮುಂದಾಡಲಾಗಿದೆ. ಇದಕ್ಕೆ ಸಂಸದೀಯ ವ್ಯವಹಾರಗಳ ಮಂತ್ರಿ ಕೊಟ್ಟ ಕಾರಣ - ಮುಲಾಯಂ ಸಿಂಗ್‌ರವರ ವಿರೋಧ. ಇದು ಹೊಸತೇನಲ್ಲ. ಇವೆಲ್ಲದರ ಬಗ್ಗೆ ಈಗಾಗಲೇ ಆಮೂಲಾಗ್ರ ಚರ್ಚೆ ನಡೆದು ಅವೆಲ್ಲದರ ನಂತರವೇ ಪ್ರಧಾನಮಂತ್ರಿಗಳು ಮಹಿಳಾ ಸಂಘಟನೆಗಳಿಗೆ ಈ ಆಶ್ವಾಸನೆ ನೀಡಿದ್ದರು. ಆದ್ದರಿಂದ ಈಗ ಮುಂದೂಡಿಕೆಗೆ ನೀಡಿರುವ ಕಾರಣ ಕೇವಲ ನೆವ ಎಂದು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಖಂಡಿಸಿವೆ. ಈ ಪ್ರಶ್ನೆಯ ಮೇಲೆ ಬಿಜೆಪಿಯ ಗೋಸುಂಬೆತನವನ್ನು ಇದು ಮತ್ತೊಮ್ಮೆ ಪ್ರದರ್ಶಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಬಿಜೆಪಿ ಸಂಸತ್ ಸದಸ್ಯರಲ್ಲಿ ಹಲವರು ಈ ಮಂಡನೆಯನ್ನು ವಿರೋಧಿಸಿದ್ದರು, ಈಗಲೂ ವಿರೋಧಿಸುತ್ತಿದ್ದಾರೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸರ್ಕಾರದ ನಿಷ್ಕ್ರಿಯತೆ ಒಂದೆಡೆ, ಮುಂಗಾರು ಪ್ರಕೋಪ ಮತ್ತೊಂದೆಡೆ

ಎನ್.ಕೆ.ಉಪಾಧ್ಯಾಯ

ಮುಂಗಾರು ಮಳೆಯಿಂದುಂಟಾಗಬಹುದಾದ ಅಪಾಯದಿಂದ ಜನರನ್ನು, ಪಶುಗಳನ್ನೂ, ಬೆಳೆಯನ್ನೂ ರಕ್ಷಿಸಲು ಸರಕಾರ ತುರ್ತು ಕ್ರಮ ಕೈಗೊಳ್ಳಬೇಕಾಗಿದೆ. 27 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೂ ನದಿ-ನಾಲೆ-ಗುಂಟೆ ಇರುವ ಜನರಿಗೂ ಎಚ್ಚರಿಕೆ ನೀಡುವ ಅಗತ್ಯವಿದೆ. ಅಕಾಸ್ಮಾತ್ತಾಗಿ ನೆರೆ ಹಾವಳಿಗೆ ತುತ್ತಾಗುವ ನೆರೆಪೀಡಿತ ಜನರಿಗೆ ಈಗಿಂದಲೇ ತುರ್ತು ಪರಿಹಾರೋಪಾಯಗಳ ಕುರಿತು ಕ್ರಮ ಕೈಗೊಳ್ಳುವುದಗತ್ಯ. ಹಾಗೆಯೇ ಪರಿಹಾರ ನಿಧಿಗೆ ಸಾಕಷ್ಟು ಹಣ ಮೀಸಲಿಡುವುದೂ ಅಷ್ಟೇ ಅಗತ್ಯ.

ಈ ವರ್ಷ ರಾಜ್ಯದಲ್ಲಿ ಮುಂಗಾರು ಮಳೆ ತಡವಾಗಿಯೇ ಪ್ರಾರಂಭವಾಗಿದೆ. ಮೇ ಕೊನೆವಾರ ಅಥವಾ ಜೂನ್ ಮೊದಲನೇ ವಾರದಲ್ಲೇ ರಾಜ್ಯವನ್ನು ಪ್ರವೇಶಿಸಬೇಕಿದ್ದ ಮುಂಗಾರು ಜೂನ್ ಕೊನೆ ವಾರದಲ್ಲಿ ಒಳನುಗ್ಗಿ ರೈತರಿಗೆ ಸಂತಸವನ್ನುಂಟು ಮಾಡಿದೆ, ಮಾತ್ರವಲ್ಲ ಜೊತೆಯಲ್ಲಿಯೇ ಹಾನಿಗೂ ಕಾರಣವಾಗಿದೆ. ಮುಂಗಾರು ಮಳೆಯ ಪ್ರಕೋಪದಿಂದಾಗಿ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು, ಕೊಡಗು ಜಿಲ್ಲೆಯಲ್ಲಿ ಒಬ್ಬರು ಹೀಗೆ ಐವರು ಬಲಿಯಾಗಿದ್ದಾರೆ. ಅತಿ ಬಿರುಸಿನಿಂದಲೇ ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗನ್ನೊಳಗೊಂಡ ಮಲೆನಾಡನ್ನು ಪ್ರವೇಶಿಸಿದ ಮುಂಗಾರು ಗಾಳಿ, ಮಳೆಯ ರಭಸದಿಂದ ಜನಸಾಮಾನ್ಯರಿಗೂ ಅಪಾರ ಹಾನಿಯನ್ನುಂಟು ಮಾಡಿದೆ. ಈ ಭಾಗದ ಜನರಿಗೆ ಈ ರೀತಿಯ ರಭಸದ ಗಾಳಿ-ಮಳೆಯೇನೂ ಹೊಸದೇನಲ್ಲ. ಪ್ರತಿವರ್ಷವೂ ಜೂನ್-ಜುಲೈ ತಿಂಗಳಲ್ಲಿ ಮುಂಗಾರು ಮಳೆ ಪ್ರಾರಂಭವಾದಾಗ ಮತ್ತು ಡಿಸೆಂಬರ್ - ಜನವರಿಯಲ್ಲಿ ಚಂಡಮಾರುತ ಅಪ್ಪಳಿಸಿದಾಗ ಈ ಜಿಲ್ಲೆಗಳ ಜನ ಬೆಳೆ ನಾಶ, ಮನೆ ಕುಸಿತ, ನೆರೆಹಾವಳಿಯಂಥ ಪ್ರಕೃತಿ ಪ್ರಕೋಪಕ್ಕೆ ತುತ್ತಾಗುತ್ತಲೇ ಇರುತ್ತಾರೆ. ಪರಿಹಾರಕ್ಕಾಗಿ ಕೈ ಚಾಚುತ್ತಿರುತ್ತಾರೆ.

ಕಳೆದ 2-3 ವರ್ಷಗಳಿಂದ ಮಳೆಯ ಅಭಾವದಿಂದಾಗಿ ರಾಜ್ಯಾದ್ಯಂತ ಪೇಟೆ ಮತ್ತು ಹಳ್ಳಿಗಾಡಿನ ಜನರು ವಿದ್ಯುತ್ ಮತ್ತು ಕುಡಿಯುವ ನೀರಿನ ಅಭಾವದಿಂದ ಹೇಳತೀರದಂಥ ಕಷ್ಟಗಳನ್ನನುಭವಿಸಬೇಕಾಗಿ ಬಂದಿತ್ತು. ಬಿಜಾಪುರದಂಥ ನಗರಗಳಲ್ಲಿ ತಿಂಗಳಿಗೆ ಎರಡೇ ಸಲ ಕುಡಿಯುವ ನೀರು ಒದಗಿಸುವಂಥ ಪರಿಸ್ಥಿತಿ ಉಂಟಾಗಿತ್ತು. ಹಳ್ಳಿಯ ಜನ 8-10 ಮೈಲು ದೂರ ಹೋಗಿ ಕೊಡ ತುಂಬಿ ನೀರು ತರುವಂಥ ಭೀಕರ ಪರಿಸ್ಥಿತಿಯನ್ನೆದುರಿಸುವಂಥಾಗಿತ್ತು. ಕಳೆದ 10-12 ವರ್ಷಗಳಿಂದ ಅಬ್ದುಲ್ ನಜೀರ್ ಸಾಹೇಬರ ಪ್ರಯತ್ನದಿಂದಾಗಿ ರಾಜ್ಯದ ಹಳ್ಳಿ-ಪಟ್ಟಣಗಳಲ್ಲೆಲ್ಲ ಬೋರ್‌ವೆಲ್‌ಗಳನ್ನು ತೋಡಿದ್ದರಿಂದಲೂ, ಮಳೆಯ ಅಭಾದಿಂದಲೂ ಭೂಮಿಯಡಿಯಲ್ಲಿಯ ನೀರು ಬಹಳ ಕೆಳಮಟ್ಟಕ್ಕೆ ಸರಿದು ಬೋರ್ ವೆಲ್‌ಗಳೂ ನೀರು ಒದಗಿಸದಂಥ ಪರಿಸ್ಥಿತಿ ಉಂಟಾಗಿತ್ತು. ವಿದ್ಯುತ್ ಮತ್ತು ನೀರಿನ ಅಭಾವದಿಂದಾಗಿ ಜನರಷ್ಟೇ ಸಂಕಷ್ಟಕ್ಕೊಳಗಾಗಿದ್ದರಲ್ಲದೆ, ಕೈಗಾರಿಕೆ, ಒಕ್ಕಲುತನಕ್ಕೂ ಕೆಟ್ಟ ಪರಿಣಾಮ ಬೀರಿತ್ತು. ವಿದ್ಯುತ್-ನೀರಿನ ಅಭಾವದಿಂದಾಗಿ ಕಾರ್ಖಾನೆಗಳು ನಡೆಯದಂತಾಗಿ, ಕೆಲಸಗಾರರಿಗೆ ಕೆಲಸ ಇಲ್ಲದಂತಾಗಿತ್ತು. ಅದೇ ಪರಿಸ್ಥಿತಿ ಕೃಷಿಕೂಲಿಗಾರರನ್ನು ಎದುರಿಸುತ್ತಿತ್ತು.


ತಡವಾಗಿಯಾದರೂ ಮುಂಗಾರು ಪ್ರಾರಂಭವಾಗಿರುವುದರಿಂದ ಮಲೆನಾಡಿನಲ್ಲಿ ಅಪಾರ ಮಳೆಯಾಗಿ ರೈತರಿಗೂ, ಸಾರ್ವಜನಿಕರಿಗೂ, ಕೈಗಾರಿಕೋದ್ಯಮಿಗಳಿಗೂ ಸ್ವಲ್ಪ ಮಟ್ಟಿಗೆ ಸಮಾಧಾನವಾಗಿದೆ. ಆದರೆ ರಭಸದಿಂದ ಮುನ್ನುಗ್ಗಿದ್ದ ಮುಂಗಾರು ಮಳೆ ದ.ಕ.ಜಿಲ್ಲೆಯ ಸುಬ್ರಮಣ್ಯದ ಹತ್ತಿರ ಇರುವ ಕುಮಾರಾಧಾರ ನದಿ, ಹಾಗೆಯೇ ಕಾವೇರಿ ನದಿ, ದ.ಕ. ಜಿಲ್ಲೆ ಮತ್ತು ಕೊಡಗಿನ ಹೆಮ್ಮಾಡು, ನೆಲ್ಲಿ ಹುಡಿಕೇರಿ ಮೊದಲಾದ ಪ್ರದೇಶಗಳಿಗೆ ನುಗ್ಗಿ ಅಪಾರ ಬೆಳೆ ಹಾನಿ ಉಂಟು ಮಾಡಿದೆ. ಕಾವೇರಿ, ಪಯಸ್ವಿನಿ, ಲಕ್ಷ್ಮಣತೀರ್ಥ ನದಿಗಳೆಲ್ಲ ತುಂಬಿ ಹರಿಯುತ್ತಿದ್ದು ಅಪಾಯವನ್ನುಂಟುಮಾಡುತ್ತಿದೆ. ಹೀಗೆ ತುಂಬಿ ಹರಿಯುವ ನೀರು ವಿದ್ಯುತ್ ಉತ್ಪಾದನೆಗೆ ಸಹಾಯಕವಾಗಿ ನೆಮ್ಮದಿಯನ್ನುಂಟುಮಾಡುತ್ತಿರುವಾಗಲೇ ನದಿಯ ಸುತ್ತಮುತ್ತಲಿರುವ ಪ್ರದೇಶಗಳಲ್ಲಿ ಹಾನಿಗೂ ಕಾರಣವಾಗುತ್ತಿದೆ.

ಹಾರಂಗಿ, ಲಿಂಗನಮಕ್ಕಿ, ಕೆ.ಆರ್.ಎಸ್., ಭದ್ರಾ ಜಲಾಶಯಗಳಲ್ಲಿ ನೀರಿನ ಮಟ್ಟ ಹೆಚ್ಚಿದೆ. ವಿದ್ಯುತ್ ಕೊರತೆ ನೀಗಿಸಲು ಸಹಾಯವಾಗಿದೆ. ರಾಜ್ಯದ 2-3 ಜಿಲ್ಲೆಗಳನ್ನು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಸಾಕಷ್ಟು ಮಳೆಯಾದ ವರದಿಗಳಿವೆ. ಮುಂಗಾರು ಬೆಳೆಗೆ ಸ್ವಲ್ಪ ತಡವಾದರೂ ಕೂಡ ಈ ವರ್ಷದ ಮುಂಗಾರು ಮಳೆ, ಬೆಳೆ ಮತ್ತು ವಿದ್ಯುತ್ ಪೂರೈಕೆಗೆ ಸಮಾಧಾನವನ್ನು ತರುವಂತಾಗಿದೆ.

ಮುಂಗಾರು ಮಳೆ ಜನರಲ್ಲಿ ಸಂತಸವನ್ನುಂಟುಮಾಡುತ್ತಿರುವಾಗಲೇ ರಾಜ್ಯದ ಜೆ.ಎಚ್.ಪಟೇಲ ಸರಕಾರದ ಆಡಳಿತೆ ಕುಸಿದು ಬಿದ್ದಂತಾಗಿ ಜನರಲ್ಲಿ ಅಸಮಾಧಾನದ ಅಲೆಯೆಬ್ಬಿಸಿದೆ. ಹೋದ ತಿಂಗಳು ಜೆ.ಎಚ್.ಪಟೇಲರು ತಮ್ಮ ಮಂತ್ರಿ ಮಂಡಲದಲ್ಲಿ ಆರು ಹೊಸ ಮಂತ್ರಿಗಳನ್ನು ಸೇರಿಸಿಕೊಂಡ ನಂತರ ಉದ್ಭವಿಸಿದ ಗೊಂದಲಕ್ಕೆ ಇನ್ನೂ ಪರಿಹಾರ ಸಿಕ್ಕಿಲ್ಲ. ಸಿದ್ರಾಮಯ್ಯನವರ ನೇತೃತ್ವದಲ್ಲಿ ಬಂಡಾಯವೆದ್ದು, ಪರಿಹಾರ ಕಂಡು ಹಿಡಿಯಲು ಎಲ್ಲಾ ನಿಗಮ-ಮಂಡಳಿಗಳ, ಎಲ್ಲಾ ಜನತಾದಳ ಜಿಲ್ಲಾಧ್ಯಕ್ಷರ ರಾಜೀನಾಮೆ ಪಡೆಯಲಾಯಿತು. ಮಂತ್ರಿ ಮಂಡಲವನ್ನೊಳಗೊಂಡು, ಎಲ್ಲಾ ನಿಗಮ-ಮಂಡಳಿ ಹಾಗೂ ಪಕ್ಷದ ಜಿಲ್ಲಾಧ್ಯಕ್ಷರ ಪುನರ್ರಚನೆಯಾಗಬೇಕಾಗಿದೆ. ದುರಾದೃಷ್ಟದಿಂದ ಮಂತ್ರಿಮಂಡಳದ ಪುನರ್ರಚನೆ ಮುಖ್ಯಮಂತ್ರಿ ಜೆ.ಹೆಚ್.ಪಟೇಲರ ಕೈಯೊಳಗಾಗಲೀ, ಪಕ್ಷದ ಪುನರ್ರಚನೆ ಅಧ್ಯಕ್ಷ ಬಿ.ಎಲ್.ಶಂಕರ್ ಅವರ ಕೈಯಲ್ಲಾಗಲೀ ಉಳಿದಿಲ್ಲ. ದೇವೇಗೌಡ ಮತ್ತು ಎಸ್.ಆರ್.ಬೊಮ್ಮಾಯಿಯವರೇ ಸೂತ್ರಧಾರಿಗಳಾಗಿರುವಂತೆ ಕಂಡುಬರುತ್ತದೆ. ಜುಲೈ 7 ರೊಳಗೆ ಆಗಬೇಕಾಗಿದ್ದ ಈ ಕೆಲಸ ಜುಲೈ 10 ರ ನಂತರ ನಡೆಯಲಿದೆಯಂತೆ. ದೇವೇಗೌಡ-ಬೊಮ್ಮಾಯಿಯವರ ಬರುವಿಕೆಗಾಗಿ ಪುನರ್ರಚನೆಯ ಕಾರ್ಯ ಸ್ಥಗಿತಗೊಂಡು ರಾಜ್ಯಾದ್ಯಂತ ನಿಗಮ-ಮಂಡಳಿಗಳು, ಸರಕಾರಿ ಕಚೇರಿಗಳು, ಜನತಾದಳ ಕಮಿಟಿಗಳೆಲ್ಲ ಸ್ಥಗಿತಾವಸ್ಥೆಯಲ್ಲಿರುವುದನ್ನು ಕಾಣಬಹುದಾಗಿದೆ. ಆಡಳಿತೆ ನಡೆಸುವವರೊಬ್ಬರು,

ಪುಟ 8 ನೋಡಿ

ಒಳಪುಟಗಳಲ್ಲಿ



ನೂರು ದಿನಗಳ ದುರಾಡಳಿತ

ಜಿ.ಎಸ್.ಮಣಿ

ಬಿಜೆಪಿಯು ನೇತೃತ್ವದ ಸರ್ಕಾರ ಅಧಿಕಾರದಲ್ಲಿ ನೂರು ದಿನಗಳನ್ನು ಕಳೆದಿದೆ. ಈ ನೂರು ದಿನಗಳ ಆಡಳಿತ ದುರಾಡಳಿತ ಎಂಬುದು ದೇಶದ ಇಂದಿನ ಸಮಸ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ. ರಾಮರಾಜ್ಯವನ್ನು ಕೊಡುತ್ತೇವೆಂದು ಭರವಸೆ ನೀಡಿ ಅಧಿಕಾರಕ್ಕೆ ಬಂದವರು ನೀಡಿರುವ ಆಡಳಿತ ತೀರ ಕೆಟ್ಟದ್ದು. ಸಮಸ್ಯೆಗಳ ಎಳೆ ಎಳೆಗಳನ್ನೇ ಹಿಡಿದು ಬಿಡಿಸಬೇಕಾದ ಸರ್ಕಾರ ಅವುಗಳ ಕಗ್ಗಂಟನ್ನೇ ಮಾಡಿದೆ. ಬಿಜೆಪಿ ನೇತೃತ್ವದ ಸರ್ಕಾರದ ಸಾಮರ್ಥ್ಯದ ಅಳತೆ ಇದು.

ಅಣ್ವಸ್ತ್ರ ಸಾಧನ ಪರೀಕ್ಷೆ ಮಾಡಿ ತನ್ನ ಸಮಸ್ಯೆಗಳ ಪರಿಹಾರ ಮಾಡಿಕೊಳ್ಳಲೆಳಸಿದ ಬಿಜೆಪಿ ಸರ್ಕಾರ ದೇಶಕ್ಕೆ ಆರ್ಥಿಕ ಸಂಕಷ್ಟಗಳ ಸಂಕೋಲೆಗಳನ್ನೇ ನೀಡಿವೆ. ಹಾಗೆ ಆರ್ಥಿಕ ದಿಗ್ಬಂಧನಗಳನ್ನು ಧೈರ್ಯವಾಗಿ ಎದುರಿಸಿ ದೇಶವನ್ನು ಸ್ವಾವಲಂಬನೆಯ ದಾರಿಯಲ್ಲಿ ಮುನ್ನಡೆಸುವುದು ಖಂಡಿತ ಸಾಧ್ಯವಿತ್ತು. ಆದರೆ ಸ್ವಾವಲಂಬನೆ ಬೆಳವಣಿಗೆ ಇವೆರಡನ್ನೂ ಬಿಜೆಪಿ ಸರ್ಕಾರ ಬಿಟ್ಟುಕೊಟ್ಟಿತು.

ಉದಾರೀಕರಣದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಮೀರಿಸುವಂತೆ ನಡೆದುಕೊಂಡ ಈ ಸರ್ಕಾರ 'ಸ್ವದೇಶಿ' ಎಂಬ ಕೂಗು ಹಾಕುವುದನ್ನು ಬಿಟ್ಟು ಬೇರೇನನ್ನೂ ಮಾಡಲಿಲ್ಲ. ಆಮದಿನ ಉದಾರೀಕರಣ ಮಾಡಿ ಹಲವು ಸರಕುಗಳ ಮೇಲಿನ ಆಮದು ಸುಂಕವನ್ನು ತೆಗೆದು ಹಾಕಿತು. ರಫ್ತನ್ನು ಹೆಚ್ಚಿಸುವ ಸಲುವಾಗಿ ತಂದ ಹಲವು ಕ್ರಮಗಳು ದೇಶದ ಒಟ್ಟಾರೆ ಹಿತಾಸಕ್ತಿಗಳಿಗೆ ಕೊಡಲಿ ಏಟು ನೀಡುವಂತಹವು.

ಬಿಜೆಪಿಯ ಬಜೆಟ್ಟು ಯಾವುದೇ ದಿಕ್ಕು ದೆಸೆಯಿಲ್ಲದ್ದು ಎಂಬುದು ಈಗಾಗಲೇ ಸ್ಪಷ್ಟವಾಗಿ ಹೋಗಿದೆ. ವಿಮಾ ರಂಗದ ರಕ್ಷಣೆ ಮಾಡುವ ಮಾತನ್ನಾಡಿದ ಬಿಜೆಪಿ ಸರ್ಕಾರ ಈಗ ಈ ರಂಗವನ್ನು ದೇಶೀ ಕಂಪನಿಗಳಿಗೆ ತೆರೆದು ಉದಾರೀಕರಣದ ಕಾರ್ಯವನ್ನು ಪ್ರಾರಂಭಿಸಿಬಿಟ್ಟಿದೆ. ಪೆಟ್ರೋಲ್ ಮತ್ತು ಯೂರಿಯಾಗಳ ಬೆಲೆ ಏರಿಸಿ ಮತ್ತೆ ಪ್ರತಿಭಟನೆ ತೀವ್ರವಾದಾಗ ಬೆಲೆಗಳನ್ನು ಇಳಿಸಿತು.

ರೈಲ್ವೆ ಬಜೆಟ್ಟಿನಲ್ಲಿ ಪ್ರಯಾಣ ದರಗಳನ್ನು ಮತ್ತು ಸಾಗಾಣಿಕೆ ದರಗಳನ್ನು ಏರಿಸಿ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸಿತು ಈ ಸರ್ಕಾರ.

ತೈಲ ವಲಯದ ಉದಾರೀಕರಣ, ವಿದ್ಯುತ್ ವಲಯದಲ್ಲಿ ಯಾವುದೇ ಬೆಳವಣಿಗೆ ಆಗಿಲ್ಲದೇ ಇರುವುದು, ನಾಗರಿಕ ವಿಮಾನ ಯಾನ ವಲಯದಲ್ಲಿ ಯಾವುದೇ ಸುಧಾರಣೆಯ ಪ್ರಯತ್ನಗಳಾಗಿಲ್ಲದೇ ಇರುವುದು ಹೀಗೆ ಹತ್ತು ಹಲವು ನ್ಯೂನತೆ ಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಅರವತ್ತಕ್ಕೇರಿಸಿದ ಬಿಜೆಪಿ, ಉದ್ಯೋಗಗಳನ್ನು ಹೆಚ್ಚಿಸಿ ನಿರುದ್ಯೋಗ ಕಡಿಮೆ ಮಾಡುವ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ.

ಇಷ್ಟೆಲ್ಲ ವೈಫಲ್ಯಗಳನ್ನು ಮರೆದ ಬಿಜೆಪಿ ಈಗ ನೂರು ದಿನಗಳನ್ನು ಪೂರೈಸಿದ ಖುಷಿಯಲ್ಲಿ ದೊಡ್ಡ ಶಬ್ದ ಮಾಡುತ್ತಿದೆ.

ಕಂಪನಿಗಳಿಗೇಕೋ ಕಂಪನ

ಭಾರತೀಯ ಕಂಪನಿಗಳಿಗೆ ಉದಾರೀಕರಣ ಅಪಾರ ಬೆಳವಣಿಗೆಯ ದಾರಿ ತೆರೆಯಬೇಕಾಗಿತ್ತು. ಆದರೆ ಲಾಭದ ಹೊಳೆ ಹರಿಸಬೇಕಾಗಿದ್ದ ಉದಾರೀಕರಣ ಹಾಗೆ ಮಾಡುವ ಬದಲು ಇರುವ ಲಾಭದ ಮಟ್ಟದಲ್ಲೇ ಶೇ.5 ರಷ್ಟು ಕುಸಿತ ಉಂಟಾಗುವ ಭಯದ ಕಂಪನ ಇವುಗಳಿಗೆ ಉಂಟಾಗಿದೆಯಂತೆ.

ಭಾರತದಾದ್ಯಂತ 1122 ಕಂಪನಿಗಳು ಸಮೀಕ್ಷೆಯೊಂದು ಇಂತಹ ಬೆಳವಣಿಗೆಯನ್ನು ಹೊರ ಹಾಕಿದೆ. ಈ ಸಮೀಕ್ಷೆಯ ಪ್ರಕಾರ ಈ ಕಂಪನಿಗಳ ಮಾರಾಟದಲ್ಲಿನ ಬೆಳವಣಿಗೆ ಹಿಂದಿನ ವರ್ಷದ ಶೇ.14 ರಷ್ಟರಿಂದ ಶೇ.8.6 ರಷ್ಟಕ್ಕಿಳಿದಿದೆಯಂತೆ.

ನಿವ್ವಳ ಲಾಭದ ಬೆಳವಣಿಗೆ ಈಗ ಸುಮಾರು ಶೇ.14.3 ರಷ್ಟು ಇರುವುದು ಶೇ.5 ಕ್ಕಿಂತ ಕೆಳಗಿಳಿಯಬಹುದೆಂಬ ಆತಂಕ ಕಂಪನಿಗಳಲ್ಲಿದೆಯಂತೆ.

ಮುಖ್ಯವಾಗಿ ಸಿಮೆಂಟು, ಉಕ್ಕು, ಆಟೋಮೊಬೈಲ್, ಟಯರುಗಳು, ಕಾಗದ ಮತ್ತಿತರ ಉದ್ದಿಮೆಗಳಲ್ಲಿ ಬೆಳವಣಿಗೆ ದರ ಕುಸಿದಿರುವುದರಿಂದ ಈ ಪರಿಸ್ಥಿತಿ ಉಂಟಾಗುತ್ತಿದೆಯಂತೆ.

ಉದಾರೀಕರಣದಿಂದಾಗಿ ಎಲ್ಲವೂ ಮೇಲ್ಮುಖವಾಗಿ ನೋಡುವುದನ್ನೇ ರೂಢಿಸಿಕೊಳ್ಳಬೇಕಾಗಿದ್ದ ಕಂಪನಿಗಳು ಈಗ ಕೆಳಮುಖವಾಗಿ ನೋಡುತ್ತಿರುವುದು ವಿಪರ್ಯಾಸವಲ್ಲವೇ?

ಮೇಲೆ ಮೇಲೆ ಬರುವ ಬಡತನದ ರೇಖೆ

ಬಡತನದ ರೇಖೆ ಎಂಬುದು ಒಂದು ಕಾಲ್ಪನಿಕ ರೇಖೆ. ಮನುಷ್ಯನ ತೀರ ಕನಿಷ್ಠ ಆವಶ್ಯಕತೆಗಳನ್ನು ಪೂರೈಸುವ ಆದಾಯವನ್ನು ಈ ಬಡತನದ ರೇಖೆ ಬರೆಯಲು ಬಳಸು ತ್ತಾರೆ. ಅಂದರೆ ಈ ರೇಖೆಗಿಂತ ಕೆಳಗಿರುವ ವರೆಂದರೆ ತಮ್ಮ ಕನಿಷ್ಠ ಅವಶ್ಯಕತೆ ಗಳನ್ನು (ಆಹಾರ, ಬಟ್ಟೆ, ಆಶ್ರಯ) ಪೂರೈಸಿಕೊಳ್ಳಲು ಬೇಕಾಗುವ ಆದಾಯಕ್ಕಿಂತ ಕಡಿಮೆ ಆದಾಯ ಬರುವವರು. ಈ ರೇಖೆಗಿಂತ ಕೆಳಗಿರುವವರು ತೀರ ಬಡವರು. ಆದ್ದರಿಂದಲೇ ಬಡತನ ರೇಖೆಗಿಂತ ಕೆಳಗೆ ಎಷ್ಟು ಶೇ. ಜನ ಇದ್ದಾರೆ ಎಂಬುದು ಆ ದೇಶದ ಅಭಿವೃದ್ಧಿಯ ಮಟ್ಟವನ್ನು ಹೇಳುವಂತಹದ್ದಾಗಿರುತ್ತದೆ.

ಭಾರತದಲ್ಲಿ ಈ ಬಡತನದ ರೇಖೆ ಮೇಲೆ ಮೇಲೆ ಬರುತ್ತಿದೆ. ಮೇಲೆ ಮೇಲೆ ಬರುತ್ತಿದೆ ಎಂದರೆ ಬಡವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು. ಈಗ ಸಿಐಐ ಎಂಬ ಭಾರತೀಯ ಉದ್ಯಮಗಳ ಸಂಸ್ಥೆ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ದೇಶದ ಜನತೆಯ ಶೇ 36.9 ರಷ್ಟು ಜನ ಬಡತನದ ರೇಖೆಗಿಂತ ಕೆಳಗಿದ್ದಾರೆ.

ಸಾಮಾಜಿಕ ಅಂತರ್‌ರಚನಾ ಸೌಲಭ್ಯಗಳು ಬೆಳದಿಲ್ಲದೇ ಇರುವುದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಪರಿಸ್ಥಿತಿ ಗಂಭೀರವಾಗಿದೆ ಎನ್ನುತ್ತದೆ ಈ ಸಮೀಕ್ಷೆ. ಆರ್ಥಿಕ ಉದಾರೀಕರಣದ ನಂತರದ ಅವಧಿಯಲ್ಲಿ ಗಮನಾರ್ಹ ಆರ್ಥಿಕ ಬೆಳವಣಿಗೆ ಆಗಿದೆ ಎಂದೂ ಅದು ಹೇಳುತ್ತದೆ. ಆ ಮಾತು ಬೇರೆ.

ಪಶ್ಚಿಮ ಭಾರತದ ರಾಜ್ಯಗಳಲ್ಲಿ ನಡೆಸಲಾಗಿರುವ ಈ ಸಮೀಕ್ಷೆ ಮಾನವ ಅಭಿವೃದ್ಧಿ ಸೂಚ್ಯಂಕ ಹಾಗೂ ಸಾಮಾಜಿಕ ಅಂತರ್‌ರಚನಾ ಸೌಲಭ್ಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಭಾರತೀಯ ಉದ್ಯಮಗಳ ಸಂಸ್ಥೆ ಉದಾರೀಕರಣದ ಪರವಾದ ಸಂಸ್ಥೆ. ಅದು ಆರ್ಥಿಕ ಸುಧಾರಣೆಗಳಿಂದ ದೇಶದ ಅಭಿವೃದ್ಧಿ ಆಗಿದೆ ಎಂದೇ ಹೇಳುತ್ತದೆ.

ಆದರೂ ಪರಿಸ್ಥಿತಿ ತೀರ ಹದಗೆಟ್ಟು ಹೋಗುತ್ತಿದೆ ಎಂಬುದನ್ನು ಈ ಸಿಐಐ ಮರೆ ಮಾಚಬೇಕೆಂದರೂ ಸಾಧ್ಯವಾಗುತ್ತಿಲ್ಲ.

ಸಾಲ ಸಿಕ್ಕಿದ್ದರಲ್ಲಿ ಅರ್ಧ ವಾಪಸ್ಸು

ನಮಲ್ಲಿಯ ಸಾಂಪ್ರದಾಯಿಕ ಲೇವಾದೇವಿಗಾರರು ಸಾಲ ನೀಡುವಾಗಲೇ ತಮ್ಮ ಬಡ್ಡಿಯನ್ನು ಹಿಡಿದುಕೊಂಡು ಸಾಲ ನೀಡುತ್ತಾರೆ. ಸಾಲ ಪಡೆವಾತ ಸಾಲದ ಮೊತ್ತಕ್ಕಿಂತ ಕಡಿಮೆ ಹಣವನ್ನೇ ಪಡೆಯ ಬೇಕಾಗುತ್ತದೆ. ಹಾಗೆಯೇ ಭಾರತ ಸಾಲ ಪಡೆವ ರೀತಿಯೂ ಆಗಿಬಿಟ್ಟಿದೆ.

ಕಳೆದ ವರ್ಷ ಭಾರತ ಪಡೆದ ವಿಶ್ವ ಬ್ಯಾಂಕ್ ಹಾಗೂ ಏಶ್ಯಾ ಅಭಿವೃದ್ಧಿ ಬ್ಯಾಂಕಿನ ಸಾಲದಲ್ಲಿ ಅರ್ಧಾಂಶ ಈ ಬ್ಯಾಂಕು ಗಳಿಂದ ಹಿಂದೆ ಪಡೆದ ಸಾಲದ ಬಡ್ಡಿ ತೀರಿಸುವುದಕ್ಕೇ ವೆಚ್ಚವಾಗಿದೆಯಂತೆ.

1996-97 ರಲ್ಲಿ ಈ ಎರಡು ಸಂಸ್ಥೆಗಳಿಂದ ದೊರೆತ ಹೊಸ ಸಾಲದ ಮೊತ್ತ 1.592 ಶತಕೋಟಿ ಡಾಲರುಗಳು. ಈ ಸಂಸ್ಥೆಗಳಿಗೆ ಆ ವರ್ಷದಲ್ಲಿ ಬಡ್ಡಿಯ ರೂಪದಲ್ಲಿ ವಾಪಸು ಕೊಟ್ಟ ಮೊತ್ತ 72.60 ಕೋಟಿ ಡಾಲರುಗಳು. ಇದರಲ್ಲಿ ವಿಶ್ವ ಬ್ಯಾಂಕಿನ ಕಡಿಮೆ ದರದ ಬಡ್ಡಿ ಸಾಲದ ಸಂಸ್ಥೆಗಳಾದ ಪುನರ್‌ನಿರ್ಮಾಣ ಹಾಗೂ ಅಭಿವೃದ್ಧಿಯ ಅಂತರ್‌ರಾಷ್ಟ್ರೀಯ ಬ್ಯಾಂಕ್ (ಐಬಿಆರ್‌ಡಿ) ಹಾಗೂ ಅಂತರ್‌ರಾಷ್ಟ್ರೀಯ ಅಭಿವೃದ್ಧಿ ನೆರವು ಸಂಸ್ಥೆ(ಐಡಿಬಿ)ಗೆ ಸಂದ ಬಡ್ಡಿ ರೂಪದ ಹಣ 60.93 ಕೋಟಿ ಡಾಲರುಗಳು.

ಏಷ್ಯಾ ಅಭಿವೃದ್ಧಿ ಬ್ಯಾಂಕಿನ ಸಾಲಕ್ಕೆ ಕೊಡಬೇಕಾದ ಬಡ್ಡಿ 96-97 ರಲ್ಲಿ 11.67 ಕೋಟಿ ಡಾಲರುಗಳು. ಅಂದರೆ ಇದು ಆ ವರ್ಷ ಭಾರತವು ಐಡಿಬಿಗೆ ಸಂದಾಯ ಮಾಡಿದ ಅಸಲಿನ ಮೊತ್ತದ ದುಪ್ಪಟ್ಟು.

ಎಡಿಬಿಯಿಂದ ಭಾರಕಕ್ಕೆ ದೊರೆತ ಸಾಲದ ಮೊತ್ತ 48.01 ಕೋಟಿ ಡಾಲರು. ಅದಕ್ಕೆ ದೇಶವು ವಾಪಸು ಕೊಟ್ಟ ಒಟ್ಟು ಹಣ 3.96 ಕೋಟಿ ಡಾಲರುಗಳು.

ಹೀಗೆ ಭಾರತ ಲೇವಾದೇವಿಗಾರರಿಂದ ಸಾಲ ಪಡೆದು ಬಡ್ಡಿ ತೆರುವಂತೆ ತೆರುತ್ತಿದೆ. ಹೀಗಿರುವಾಗ ದೇಶದ ಅಭಿವೃದ್ಧಿ ಎಂದಾದರೂ ಸಾಧ್ಯವೇ? ಉದಾರೀಕರಣ ಮತ್ತು ಜಾಗತೀಕರಣಗಳ ಅರ್ಥ ಇದು.

ಸಾಲ ಕೊಡುವ ಧಣಿಗಳ ಕುತಂತ್ರ

ಮೂಡೀಸ್ ಎಂಬ ಅಂತರ್‌ರಾಷ್ಟ್ರೀಯ ರೇಟಿಂಗ್ ಕಂಪನಿ ಭಾರತದ ರೇಟಿಂಗ್ ಅನ್ನು ಕಡಿಮೆ ಮಾಡಿ ಭಾರತದಲ್ಲಿ ಬಂಡವಾಳ ಹೂಡ ಬಯಸುವ ವಿದೇಶಿ ಯರಿಗೆ ಎಚ್ಚರಿಕೆ ನೀಡಿದೆ. ಇದರಿಂದಾಗಿ ವಿದೇಶಿ ಹೂಡಿಕೆ ಸ್ವಲ್ಪಮಟ್ಟಿಗೆ ಬತ್ತುತ್ತದೆ.

ಇದರ ಹಿಂದೆಯೇ ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳು ಭಾರತದ ಬಗ್ಗೆ ಒಂದು ಗಂಭೀರ ಚಿತ್ರಣ ನೀಡಿದೆಯಂತೆ. ಈ ವರದಿಗಳು ಇನ್ನೂ ಬಹಿರಂಗವಾಗ ಬೇಕಾಗಿದೆ ಅಷ್ಟೆ. ಐಎಂಎಫ್ ತನ್ನ ಅಭಿಪ್ರಾಯವನ್ನು ವಿಧಿ IV ರ ಸಮಾಲೋಚನೆಯೊಳಗೆ ಸೇರಿಸಿದರೆ ವಿಶ್ವಬ್ಯಾಂಕ್ ದೇಶದ ಆರ್ಥಿಕ ವಿಷಯಗಳ ವರದಿಯಲ್ಲಿ ಇಂತಹ ಚಿತ್ರಣವನ್ನು ಸೇರಿಸುತ್ತದೆ.

ಭಾರತದ ಬಜೆಟ್ ಮಂಡನೆಗಾಗಿ ಕಾಯುತ್ತಿದ್ದ ಈ ಎರಡು ಸಾಮ್ರಾಜ್ಯಶಾಹಿ ಸಂಸ್ಥೆಗಳು ಹಣಕಾಸು ಕೊರತೆಯ ಸಮಸ್ಯೆಗಳಿಂದ ಉಂಟಾಗುವ ದೌರ್ಬಲ್ಯ ಗಳನ್ನು ಪ್ರಸ್ತಾಪಿಸಿವೆ.

ಬಿಜೆಪಿಯ ಬಜೆಟ್ ಕ್ರಾಂತಿಕಾರಿಯಾದದ್ದೇನೂ ಅಲ್ಲ. ಆದರೆ ಈ ಎರಡು ಧಣಿಗಳು ನಿರ್ದೇಶಿಸಿದಂತ ಎಲ್ಲ ಅಂಶಗಳು ಬಜೆಟ್ಟಿನಲ್ಲಿಲ್ಲದ ಕಾರಣ ಅವು ಹೀಗಾಡುತ್ತಿವೆ.

ಭಾರತ ಸಾಮ್ರಾಜ್ಯಶಾಹಿ ದೇಶಗಳಿಗೆ ಅನುಕೂಲ ಮಾಡಿಕೊಡುವಂತಹ ಉದಾರೀಕರಣದ ಕ್ರಮಗಳನ್ನು ತರಬೇಕೆಂಬುದು ಫಂಡ್, ಬ್ಯಾಂಕ್‌ಗಳ ಉದ್ದೇಶ. ಅದಕ್ಕೆ ತಕ್ಕಂತೆ ಒತ್ತಡ ಹೇರುವ ಕೆಲಸವನ್ನೇ ಅವು ಮಾಡುತ್ತಿರುವುದು ಭಾರತ ಸ್ವಾವಲಂಬನೆಯತ್ತ ಏನೇ ಮಾಡಿದರೂ ಅದು ವ್ಯರ್ಥ ಖರ್ಚು ಎಂದು ಟೀಕಿಸುವುದು, ದೇಶದ ಬಡಜನರ ಕಲ್ಯಾಣಕ್ಕಾಗಿ ಮಾಡುವ ಖರ್ಚುಗಳೆಲ್ಲ ಆರ್ಥಿಕವನ್ನೇ ಹಾಳುಗೆಡವುತ್ತದೆ ಎನ್ನುವುದು ಇವೆಲ್ಲ ಅವುಗಳ ಕುತಂತ್ರಗಳು.

ಅದನ್ನೇ ಅವು ಈಗ ಮಾಡುತ್ತಿವೆ. ಬಿಜೆಪಿ ಸರ್ಕಾರ ಅಣ್ವಸ್ತ್ರ ಪರೀಕ್ಷೆಯ ಮೂಲಕ ವಿಶ್ವಬ್ಯಾಂಕ್, ಐಎಂಎಫ್‌ಗಳ ಇಂತ ಕುತಂತ್ರಗಳಿಗೆ ಹೆಚ್ಚಿನ ಅವಕಾಶಗಳನ್ನು ತೆರೆದುಕೊಟ್ಟಿದೆ.

ಪುಸ್ತಕ ಪರಿಚಯ

ಆರ್.ವಿ.ಭಂಡಾರಿ

ವೈಚಾರಿಕ ಸಾಹಿತ್ಯಕ್ಕೊಂದು ಮಹತ್ವದ ಸೇರ್ಪಡೆ

ಭಗವದ್ಗೀತೆ: ಒಂದು ವೈಚಾರಿಕ ಒಳನೋಟ
ಬಿ.ವಿ. ವೀರಭದ್ರಪ್ಪ
ನವಕರ್ನಾಟಕ ಪ್ರಕಾಶನ ಬೆಂಗಳೂರು.

ಬಿ.ವಿ. ವೀರಭದ್ರಪ್ಪನವರು ತಮ್ಮ ವೈಚಾರಿಕ ಬರಹಗಳಿಗಾಗಿ ಈಗಾಗಲೆ ನಾಡಿನಲ್ಲಿ ಪರಿಚಿತರಾಗಿದ್ದಾರೆ. ಅವರ ಲೇಖನಿಯಿಂದ ಬಂದ ಭಗವದ್ಗೀತೆ ಒಂದು ವೈಚಾರಿಕ ಒಳನೋಟ ಎಂಬ ಪುಸ್ತಕ ಕೆಲವು ಮುಖ್ಯವಾದ ಹೊಸ ಅಂಶವನ್ನು ತಿಳಿಸುತ್ತದೆ.

'ಭಗವದ್ಗೀತೆ' ಕ್ರೈಸ್ತರಿಗೆ ಬೈಬಲ್‌ನಂತೆ, ಮುಸ್ಲಿಂಮರಿಗೆ ಕುರಾನಿನಂತೆ ಹಿಂದುಗಳಿಗೆ ಭಗವದ್ಗೀತೆ ಪವಿತ್ರವಾಗಿದೆ. ಅದನ್ನು ಪಠಣ ಮಾಡುವುದು ಸಂಪ್ರದಾಯಕ ಹಿಂದುಗಳಿಗೆ ಒಂದು ಪುಣ್ಯದ ಕೆಲಸ ಮತ್ತು ಅಲ್ಲಿಯ ಸಂಗತಿಗಳು ಪ್ರಶ್ನಾತೀತ. ಒಂದೇ ಕಾಲಕ್ಕೆ ಗೀತೆ ಉಗ್ರಗಾಮಿ ತಿಲಕರಿಗೂ ಅಹಿಂಸಾವಾದಿ ಗಾಂಧೀಜಿಗೂ ಬೇರೆ ಬೇರೆ ದರ್ಶನ ಕೊಡುವ ಗ್ರಂಥ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂ ಉಗ್ರಗಾಮಿಗಳಿಗೂ ಸ್ಫೂರ್ತಿ ನೀಡಿದ ಗ್ರಂಥ. ಇಂಥ ಒಂದು ಗ್ರಂಥದ ಕುರಿತು ಮೇಲಿಂದ ಮೇಲೆ ವಿಚಾರ ವಿಮರ್ಶೆ ನಡೆಯುತ್ತಿರುವುದು ತೀರಾ ಸಹಜವಾಗಿದೆ.

ಈಗಿತ್ತಲಾಗಿನ ಸಾಂಸ್ಕೃತಿಕ ಸಂಗತಿಗಳನ್ನು -ತತ್ವಶಾಸ್ತ್ರವನ್ನು ಧರ್ಮ ಶಾಸ್ತ್ರವನ್ನು ಸೇರಿ ಸರ್ವತಂತ್ರ ಎಂದೇ ಗ್ರಹಿಸಿ ಅಭ್ಯಾಸ ಮಾಡುವ ಬದಲು ಅದನ್ನು ಒಂದು ಚಾರಿತ್ರಿಕ ಸನ್ನಿವೇಶದಲ್ಲಿಟ್ಟು ಅನ್ಯ ಶಾಸ್ತ್ರೀಯ ಶಿಸ್ತಿನೊಡನೆ ಅಭ್ಯಾಸ ಮಾಡುವ ಪದ್ಧತಿ ಹೆಚ್ಚು ಗ್ರಾಹ್ಯವಾಗುತ್ತಿದೆ. ಈ ದೃಷ್ಟಿಗೆ ಇತಿಹಾಸ ಮತ್ತು ತತ್ವಶಾಸ್ತ್ರದ ಅಭ್ಯಾಸದಲ್ಲೂ ಅನೇಕ ಹೊಸ ಕಾಣಿಕೆಯನ್ನು ಕೊಡಲು ಸಾಧ್ಯವಾಗಿದೆ. ಸಾಮಾಜಿಕವಾದ ಸಾಂಸ್ಕೃತಿಕ ಮತ್ತು ರಾಜಕೀಯದ ಅಭ್ಯಾಸದ ಸಂದರ್ಭದಲ್ಲಿ ಈ ಚಾರಿತ್ರಿಕ ದೃಷ್ಟಿ ಮಹತ್ವದ್ದಾಗಿದೆ. ಯಾಕೆಂದರೆ ತತ್ವಶಾಸ್ತ್ರ ಕೂಡ ಅಂತಿಮವಾಗಿ ವರ್ಗ ಮತ್ತು ವರ್ಣ ಹೋರಾಟದ ಅಸ್ತ್ರವೇ ಆಗಿದೆ ಎಂಬುದು ಗೊತ್ತಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತೀಯ ತತ್ವಶಾಸ್ತ್ರದ ಕುರಿತು ದೇವೀಪ್ರಾಸಾದ ಚಟ್ಟೋಪಾಧ್ಯಾಯ, ಡಿ.ಡಿ. ಕೊಸಾಂಬಿ, ಎಸ್.ಜಿ ಸರದೇಸಾಯಿ, ಭಗವತ್ ಶರಣ ಉಪಾಧ್ಯಾಯ ಅವರು ನಡೆಸಿದ ವೈಚಾರಿಕ ಮಾರ್ಗದಲ್ಲೇ ವೀರಭದ್ರಪ್ಪನವರು ಸಾಗಿದ್ದಾರೆ. ಮತ್ತು ಇದು ಕನ್ನಡದಲ್ಲಿ ಸ್ವತಂತ್ರ ಕೃತಿ ಎನ್ನುವುದೂ ಮಹತ್ವದ್ದು.

ಪ್ರಾರಂಭದಲ್ಲಿ ಭಾರತೀಯ ತತ್ವಜ್ಞಾನದ ಸ್ಥೂಲ ಪರಿಚಯವನ್ನು ಲೇಖಕರು ಕೊಡುತ್ತಾರೆ. ಬೌದ್ಧಕಾಲ ಮುಕ್ತ ಚಿಂತನೆಯ ಕಾಲವೆಂದು ಅವರು ಹೇಳುತ್ತಾರೆ. ಚಾರ್ವಕ, ಲೋಕಾಯತ ತತ್ವಜ್ಞಾನ ವೈದಿಕ ಪಂಥದ ಮೇಲೆ ಬಲವಾದ ಆಘಾತ ಮಾಡಿದವು. ಅವೆಲ್ಲ ಒಂದು ತಾರ್ಕಿಕ ಮತ್ತು ಸಾಂಘಿಕ ರೂಪದಲ್ಲಿ ಬೌದ್ಧ ಧರ್ಮದಲ್ಲಿ ವ್ಯಕ್ತವಾಯಿತು. ಬುದ್ಧನಂತೂ ನಿಮಗೆ ನೀವೆ ದಾರಿದೀಪ ಪರರ ಆಶ್ರಯಿಸ ಬೇಡಿ ಎಂದು ಹೇಳಿದ. ಬುದ್ಧನ ತತ್ವಗಳೆಲ್ಲ ಆಗಲೇ ಬಲವಾಗಿ ಪ್ರಚಾರ ಹೊಂದುತ್ತಿ ದ್ದವು. ಜಾತಿ ವರ್ಣ ಲಿಂಗಭೇದವನ್ನೆಲ್ಲ ತೊಡೆದುಹಾಕಿದ, ವೇದ ಅಪೌರುಷೆಯ ಎನ್ನುವುದನ್ನು ಮನ್ನಿಸದ ವೈಚಾರಿಕ ಪಂಥವನ್ನು ಹೊಡೆದುಹಾಕ ಬೇಕಿತ್ತು. ಅಂಥ ಒಬ್ಬನಿಗಾಗಿ ವೈದಿಕಶಾಹಿ ಕಾಯುತ್ತಿದ್ದ ಕಾಲದಲ್ಲಿ ಕೃಷ್ಣ ಭಗವದ್ಗೀತೆಯ ಮುಖಾಂತರ ಆ ಕೆಲಸ ಮಾಡಿದ ಎಂದು ಲೇಖಕರು ತಮ್ಮವಾದವನ್ನು ಮಂಡಿಸುತ್ತಾರೆ.

ಭಗವದ್ಗೀತೆ ಒಂದು ತತ್ವಜ್ಞಾನವನ್ನು ತರ್ಕಬದ್ಧವಾಗಿ ಮಂಡಿಸುವ ಗ್ರಂಥವಲ್ಲ. ಅದು ವಿವಿಧ ಸಾಂಪ್ರದಾಯಿಕ ಪಂಥಗಳನ್ನು ತಿರುಚುವ ಮೂಲಕ ಮತ್ತು ತನಗೆ ಬೇಕಾದ ಹಾಗೆ ಬಳಸಿಕೊಳ್ಳುತ್ತದೆ. ಅದರ ಮೂಲಕ ಗೀತೆಯ ಲೇಖಕ ಅವು ವೇದಾಂತಕ್ಕಿಂತ ಭಿನ್ನವೇನಲ್ಲ ಎಂಬುದಾಗಿ ತೋರಿಸಲು ಪ್ರಯತ್ನ ಪಟ್ಟಿದ್ದಾನೆ ಎಂಬ ನಿಲುವನ್ನು ಅವರು ಆಧಾರ ಸಹಿತ ಮಂಡಿಸುತ್ತಾರೆ, ಆನಂದವನ್ನು ಚಾರ್ವಾಕರಿಂದ, ಹೇತುವಾದವನ್ನು ಲೋಕಾಯತದಿಂದ, ನಿರ್ವಾಣವನ್ನು ಬೌದ್ಧರಿಂದ, ಕೈವಲ್ಯವನ್ನು ಜೈನರಿಂದ ತೆಗೆದುಕೊಂಡು ಅವುಗಳನ್ನು ತನ್ನ ಪ್ರೀತಿಗೆ ಪಾತ್ರವಾದ ವೇದಾಂತದ ವೈಭವಕ್ಕಾಗಿ ಉಪಯೋಗಿಸಿಕೊಂಡಿದ್ದಾನೆ ಎಂದೆನ್ನುತ್ತಾರೆ.

"ಶ್ರೀಕೃಷ್ಣ ದೈವಭಕ್ತರ ಗುಣಗಳನ್ನು ನಿರೂಪಿಸುತ್ತಾ ಅವುಗಳಲ್ಲಿ ಅಹಿಂಸೆ, ಸತ್ಯ, ಶಾಂತಿ, ಜೀವದಯೆ, ಕ್ಷಮೆ, ದ್ವೇಷರಾಹಿತ್ಯ, ನಿರಹಂಕಾರಗಳನ್ನು ಸೇರಿಸುತ್ತಾನೆ ಅದರೆ ಅವನೇಕೆ ಮೇಲಿಂದ ಮೇಲೆ ಅರ್ಜುನನನ್ನು ಭೀಕರ ಯುದ್ಧಮಾಡಲು ಪ್ರೇರೇಪಿಸುತ್ತಾನೆ ಎಂಬುದು ವಿದ್ವಾಂಸರಿಗೆ ಒಂದು ಸಮಸ್ಯೆಯಾಗಿದೆ?" ಎಂದು ಪ್ರಶ್ನಿಸಿ ಗೀತೆಯ ಲೇಖಕ ಉದ್ದಕ್ಕೂ ಪ್ರಗತಿಪರ ತಾತ್ವಿಕ ಸಿದ್ಧಾಂತಗಳನ್ನು ಅಲ್ಲಗಳೆದು ಅಥವಾ ವಿರೂಪಗೊಳಿಸಿ ದೇವರಲ್ಲಿ ಸಂಪೂರ್ಣ ಶರಣಾಗತಿಯಿಂದ ಮಾತ್ರ ಮುಕ್ತಿ ಸಾಧ್ಯ ಎಂಬ ತತ್ವವನ್ನು ಬಲವಾಗಿ ಪ್ರತಿಪಾದಿಸಿದ್ದಾನೆ. ಬೌದ್ಧಧರ್ಮದ ಪ್ರಾಬಲ್ಯದ ಕಾಲದಲ್ಲಿ ಹಿಂದೆ ಸರಿದಿದ್ದ ವೈದಿಕ ಧರ್ಮ ತನ್ನ ಕರ್ಮಸಿದ್ಧಾಂತ, ಯಜ್ಞ ತಪಸ್ಸು ಇತರ ಎಲ್ಲಾ ಆಚರಣೆಗಳ ಜೊತೆಗೆ ಹಿಂಬಾಗಿಲಿನಿಂದ ಪುನಃ ಪ್ರವೇಶ ಮಾಡುವಂತೆ ಮಾಡುವುದೇ ಗೀತೆಯ ಉದ್ದೇಶ ಎಂಬ ನಿರ್ಣಯಕ್ಕೆ ಬರುತ್ತಾರೆ.

ಭಗವದ್ಗೀತೆ ತನ್ನ ಸಂಯೋಜನಾ ಚಾತುರ್ಯದಿಂದ ಆಳುವವರ್ಗಗಳ (ರಾಜಕೀಯ, ಬೌದ್ಧಿಕ ಮತ್ತು ವಾಣಿಜ್ಯ ವರ್ಗಗಳ) ಹಿತಾಸಕ್ತಿಯನ್ನು ಹೇಗೆ ಕಾಪಾಡಿತು ಎಂಬುದನ್ನು ಲೇಖಕರು ಬಿಡಿಸಿ ಇಡುವಲ್ಲಿ ಸಫಲರಾಗಿದ್ದಾರೆ.

ಲೇಖಕರ ನಿರೂಪಣೆ ಸ್ಪಷ್ಟವಾದ ವೈಚಾರಿಕ ನಿಲುವಿನ ಹಿನ್ನೆಲೆಯಲ್ಲಿ ನಡೆದಿದೆ. ವೈಚಾರಿಕ ಗೊಂದಲವಿಲ್ಲ. ಗೀತೆಯ ಕುರಿತು ಪ್ರಮುಖವಾದ ಗ್ರಂಥಗಳನ್ನು ಪರಿಶೀಲಿಸಿದ್ದಾರೆ. ವಿಷಯ ಮಂಡನೆಯಲ್ಲಿ ಸಮಾಜ ಶಾಸ್ತ್ರೀಯ ದೃಷ್ಟಿ ಇದೆ. ಭಾಷೆ ತಿಳಿಯಾಗಿ ಹೃದ್ಯವಾಗಿದೆ.

ವೈಚಾರಿಕ ಪುಸ್ತಕಗಳ ಪ್ರಕಟಣೆಗೆ ಹೆಸರಾದ ನವಕರ್ನಾಟಕ ಪ್ರಕಾಶನ ಈ ಪ್ರಕಟಣೆಯನ್ನು ತಂದಿದೆ. ಕನ್ನಡದಲ್ಲಿಯ ವೈಚಾರಿಕ ಸಾಹಿತ್ಯಕ್ಕೆ ಇದೊಂದು ಮಹತ್ವದ ಸೇರ್ಪಡೆ.

ಕರ್ನಾಟಕದಲ್ಲಿ ಕಳೆದವಾರ

ಜೂನ್ 26

● ವರುಣಾನಾಲೆ ಕಾಮಗಾರಿ ವಿರುದ್ಧ ಕೃಷ್ಣರಾಜಸಾಗರ ಅಣೆಕಟ್ಟು ಪ್ರದೇಶದಲ್ಲಿ ಮಂಡ್ಯದ ರೈತರ ಪ್ರತಿಭಟನೆಯ ಸಂದರ್ಭದಲ್ಲಿ ಕಲ್ಲು ತೂರಾಟ, ಗಲಭೆ, ಗಾಳಿಯಲ್ಲಿ ಗುಂಡು.

● ಆಲೂಗೆಡ್ಡೆ ಬಿತ್ತನೆ ಬೀಜದ ಹಠಾತ್ ಬೆಲೆಯೇರಿಕೆಯಿಂದ ಕುಪಿತರಾದ ನೂರಾರು ರೈತರಿಂದ ಹಾಸನದ ಎ.ಪಿ.ಎಮ್.ಸಿ. ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಬಿತ್ತನೆ ಬೀಜ ಲೂಟಿ.

ಜೂನ್ 27

● ರಾಜ್ಯ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ಲೋಕಶಕ್ತಿಗೆ ಎರಡು, ಬಿ.ಜೆ.ಪಿ.ಗೆ ಒಂದು ಪಕ್ಷೇತರ ಅಭ್ಯರ್ಥಿಗೆ ಒಂದು ಸ್ಥಾನ.

ಜೂನ್ 28

● ಬೆಂಗಳೂರಿಗೆ ಕಾವೇರಿ ನೀರನ್ನು ಒದಗಿಸುವ ಯೋಜನೆಗೆ ಜಪಾನಿ ನೆರವಿನ ನಿಲುಗಡೆಯಿಲ್ಲ ಎಂದು ಜಪಾನು.

ಜೂನ್ 29

● ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ತೀವ್ರ ಮುಂಗಾರು. ದ.ಕ. ಜಿಲ್ಲೆಯಲ್ಲಿ ನಾಲ್ವರ ಬಲಿ.

● ಯಾವುದೇ ಕಾರಣಕ್ಕೆ ವರುಣಾ ನಾಲೆ ಕಾಮಗಾರಿ ನಿಲ್ಲುವುದಿಲ್ಲ ಎಂದು ಉಪಮುಖ್ಯಮಂತ್ರಿಗಳು. ಜನತೆಯನ್ನು ಈ ವಿಷಯದಲ್ಲಿ ಎತ್ತಿಕಟ್ಟಲಾಗುತ್ತಿದೆ ಎಂದು ಅವರ ವಿಷಾದ.

ಜೂನ್ 30

● ಹಾರಂಗಿ ಜಲಾನಯನ ಪ್ರದೇಶದಲ್ಲಿ ಒಂದೇ ದಿನದಲ್ಲಿ ಎಂಟು ಅಡಿಯಷ್ಟು ನೀರು ಹೆಚ್ಚಳ

ಜುಲೈ 1

● ಜಲವಿದ್ಯುತ್ ಕೇಂದ್ರಗಳ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿ ನೀರಿನ ಒಳಹರಿವು ಉತ್ತಮಗೊಂಡರೆ ಒಂದು ವಾರದಲ್ಲಿ ವಿದ್ಯುತ್ ಖೋತಾ ರದ್ದು ಮಾಡಲಾಗುವುದೆಂದು ಕೆ.ಇ.ಬಿ. ಅಧ್ಯಕ್ಷರು.

● ಪೋಲಿಸ್ ಇಲಾಖೆಯಲ್ಲಿ ಭಾರೀ ವರ್ಗಾವಣೆ. 41 ಐ.ಪಿ.ಎಸ್. ಅಧಿಕಾರಿಗಳ ವರ್ಗಾವಣೆ.

ಜುಲೈ 2

● ಲೋಡ್ ಶೆಡ್ಡಿಂಗ್‌ನ್ನು ಒಂದು ಗಂಟೆಯಷ್ಟು ಕಮ್ಮಿ ಮಾಡಲು ಕೆ.ಇ.ಬಿ. ನಿರ್ಧರಿಸಿದೆ ಎಂದು ವಿದ್ಯುತ್ ಮಂತ್ರಿಗಳು.

● ರಾಜ್ಯದ 9 ಪ್ರಾಥಮಿಕ ಹಾಗೂ 4 ಪ್ರೌಢಶಾಲಾ ಶಿಕ್ಷಕರು ರಾಷ್ಟ್ರ ಪ್ರಶಸ್ತಿಗೆ ಆಯ್ಕೆ.

ರೈತ ಸಂಘದಿಂದ ಧರಣಿ, ಸತ್ಯಾಗ್ರಹ



ಮಂಗಳೂರು: ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಕರೆಯ ಮೇರೆಗೆ ಮಂಗಳೂರು ತಾಲೂಕು ಸಮಿತಿ ನೇತೃತ್ವದಲ್ಲಿ ನೂರಾರು ರೈತರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ತಾಲೂಕು ಕಛೇರಿ ಮುಂದೆ ಜೂನ್ 22 ರಂದು ಧರಣಿ ಸತ್ಯಾಗ್ರಹ ನಡೆಸಿದರು.

ಆತ್ಮಹತ್ಯೆ ಪ್ರಕರಣಕ್ಕೆ ಒಳಗಾದ ರೈತರಿಗೆ ತುರ್ತಾಗಿ ಪರಿಹಾರ ನೀಡುವಂತೆ, ಸರ್ಕಾರಿ ನಿವೇಶನಗಳಲ್ಲಿ ಮನೆ ಕಟ್ಟಿರುವವರಿಗೆ ಹಕ್ಕುಪತ್ರ ಕೊಡಬೇಕೆಂದು, ಕೇಂದ್ರದ ಹೊಸ ವಿದ್ಯುತ್ ನೀತಿಯನ್ನು ವಾಪಸ್ಸು ಪಡೆಯುವಂತೆ, ರೈತರ ಪಂಪ್ ಸೆಟ್ಟುಗಳಿಗೆ ರಿಯಾಯಿತಿ ದರದ ವಿದ್ಯುತ್ ಪೂರೈಕೆ ಕೋರಿ ತೋಡುಗಳಲ್ಲಿ ತುಂಬಿದ ಹೂಳನ್ನು ತೆಗೆಯಬೇಕು. ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕು. ಸಮಗ್ರ ಬೆಳೆ ವಿಮಾ ಯೋಜನೆ ಜಾರಿಗೆ ತರಬೇಕೆಂಬ ಬೇಡಿಕೆಗಳ ನಿಟ್ಟುಸಿರು ರೈತರು ಬೃಹತ್ ಮೆರವಣಿಗೆ ಮುಖಾಂತರ ಧರಣಿ ಸತ್ಯಾಗ್ರಹ ನಡೆಸಿದರು. ಸಭೆಯನ್ನು ದ್ದೇಶಿಸಿ ರಾಮಚಂದ್ರ ಉಚ್ಚಿಲ್ ಮಾತನಾಡಿದ್ದರು.

ರೈತ ಮುಖಂಡರಾದ ಜನಾರ್ಧನ ನಾಯಕ್, ಪೌಲ್ ಡಿಸೋಜ, ಕಾರ್ಮಿಕ ಮುಖಂಡ ಬಿ. ಲೋಕಯ್ಯ, ಬಿ.ಬಾಬು ಪೂಜಾರಿ, ಕೃಷ್ಣಮೂಲ್ಯ ಮುಂತಾದವರ ನೇತೃತ್ವದಲ್ಲಿ ತಹಸಿಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಸಂಕಪ್ಪ ಅಸ್ಸೆಗೋಳಿ, ವಾಸುದೇವ ಆಚಾರಿ, ಮಂಜಪ್ಪ ಅಂಬೋಡಿ, ಕೋಣಾಜೆ ಪಂಚಾಯತ್ ಅಧ್ಯಕ್ಷ ಹಿಲ್ಡಾ ಡಿಸೋಜ, ಜಿಲ್ಲಾ ಪಂಚಾಯತ್ ಸದಸ್ಯರಾದ ಪದ್ಮಾವತಿ ಎನ್.ಶೆಟ್ಟಿ, ಶ್ರೀನಿವಾಸ ಅಳ್ಳ, ಪದ್ಮನಾಭ ಮಂಜೇಶ್ವರ ಹಾಗೂ ಗಂಗಯ್ಯಗಟ್ಟಿ ಪಿಲಾರು ಹಾಗೂ ಹಲವಾರು ಮುಖಂಡರು ನೇತೃತ್ವ ವಹಿಸಿದ್ದರು.

ಬೀದರ್‌ನಲ್ಲಿ ನಾಟಕೋತ್ಸವ

ರಂಗಭೂಮಿ ಮುಂದಿರುವ ಸವಾಲುಗಳನ್ನು ಎದುರಿಸುವ ಮೂಲಕ ಸಾರ್ಥಕತೆ ಪಡೆದು ಕೊಂಡು ವೈಚಾರಿಕತೆಯ ಹಾದಿಯಲ್ಲಿ ಸಾಗಬೇಕಿದೆ ಎಂದು ರಾಜ್ಯ ನಾಟಕ ಅಕಾಡೆಮಿಯ ಅಧ್ಯಕ್ಷ ಡಾ।। ಕೆ. ಮರುಳುಸಿದ್ದಪ್ಪ ಹೇಳಿದರು. ಅವರು ರಾಜ್ಯ ನಾಟಕ ಅಕಾಡೆಮಿ, ಜಿಲ್ಲಾ ಪಂಚಾಯತ್ ಹಾಗೂ ಸಮುದಾಯ ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಮೂರು ದಿನಗಳ ನಾಟಕೋತ್ಸವ ಜೂನ್ 5 ರಂದು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚಂದ್ರಶೇಖರ್ ಪಾಟೀಲ್ ಒಂದು ಸಿನಿಮಾವನ್ನು ಕೋಟಿ ಗಟ್ಟಲೆ ಖರ್ಚುಮಾಡಿ ಜಗತ್ತಿನಾದ್ಯಂತ ಎಷ್ಟು ಬಾರಿ ಬೇಕಾದರೂ ಪ್ರದರ್ಶಿಸಬಹುದಾಗಿದೆ. ಆದರೆ ನಾಟಕ ಮಾಧ್ಯಮ ಪ್ರತಿ ಪ್ರದರ್ಶನವೂ ತ್ರಾಸದಾಯಕವಾಗಿದ್ದು ಪರಿಣಾಮಕಾರಿಯಾಗಿ ಪ್ರದರ್ಶಿಸುವ ಮೂಲಕ ಯಶಸ್ವಿಯಾಗಬೇಕೆಂದರು.

ನಾಟಕ ಅಕಾಡೆಮಿಯ ರಿಜಿಸ್ಟರ್ ಬಿ.ಟಿ ಮುನಿರಾಜಯ್ಯ ಅತಿಥಿಗಳಾಗಿ ಭಾಗವಹಿಸಿ ದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ರಾಜೇಶ್ರೀ ಶ್ರೀಕಾಂತಸ್ವಾಮಿ ಮಾತನಾಡುತ್ತಾ ಇತ್ತೀಚಿನ ದಿನಗಳಲ್ಲಿ ಎಲ್ಲೆಡೆ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ ನಡೆಯುತ್ತಿರುವ ಬಗ್ಗೆ ವಿಷಾದಿಸಿ ಇಂದು ರಂಗಭೂಮಿ ಅವಕಾಶ ವಂಚಿತ ವಾಗಿ ಸೊರಗಿದೆ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲೆಯ ರಂಗ ಕರ್ಮಿಗಳಾದ ಪಂಚಶೀಲ ಗಾಯಕರುಗಳು, ಮಂಜೀಂದ್ರನಾಥ ಕಾಂಬಳ, ಮಾಧವರಾವ್ ಜನವಾಡಕರ್, ಜಕ್ಕಪಾಲ್ ಸಿಂಗ್ ಪವಾರ್, ದತ್ತಾ ಮೈಲೂರಕರ್, ದೇಶಾಂತ ಹುಡುಗಿ, ಎಂ.ಎಸ್ ಮನೋಹರ, ನೀಲಾ.ಕೆ, ಚಂದ್ರಶೇಖರ ಚಕ್ಕಿ ಇವರುಗಳನ್ನು ಸನ್ಮಾನಿಸುವುದರ ಜೊತೆಗೆ ಡಾ।। ಮರುಳು ಸಿದ್ದಪ್ಪ ಹಾಗೂ ಪ್ರೊ।। ಚಂದ್ರಶೇಖರ್ ಪಾಟೀಲ್ ಹಾಗೂ ಬಿ.ಟಿ.ಮುನಿರಾಜಯ್ಯ ರನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸನ್ಮಾನಿಸಿದರು. ನೆಹರು ಯುವಕ ಕೇಂದ್ರದ ಜಮಾದಾರ ವಂದನೆ ಸಲ್ಲಿಸಿದರು.

ನಾಟಕೋತ್ಸವದ ಅಂಗವಾಗಿ 'ಬೆಟ್ಟಕ್ಕೆ ಚಳಿಯಾದರೆ', 'ರೊಟ್ಟಿಋಣ' ಮುಂತಾದ ನಾಟಕಗಳ ಪ್ರದರ್ಶನವಾಯಿತು.

ಧಾರವಾಡದಲ್ಲಿ ಪಾರ್ಟಿ ಶಾಲೆ

ಸಿ.ಪಿ.ಐ.(ಎಂ) ಸದಸ್ಯರಿಗೆ ಧಾರವಾಡದಲ್ಲಿ ಜೂನ್ 20 ಮತ್ತು 21 ರಂದು ಪಾರ್ಟಿ ಶಾಲೆ ನಡೆಸಲಾಯಿತು. ಧಾರವಾಡ, ಹುಬ್ಬಳ್ಳಿ, ಗದಗ ಪ್ರದೇಶ ವಿಮಾ, ಕೈಗಾರಿಕಾ, ನೇಕಾರ, ಶಿಕ್ಷಕ, ವಿದ್ಯಾರ್ಥಿ, ಯುವಜನ ಕ್ಷೇತ್ರಗಳ ಮೂವತ್ತು ಜನ ಪಕ್ಷದ ಸದಸ್ಯರು ಎರಡು ದಿನಗಳ ಈ ಶಾಲೆಯಲ್ಲಿ ಹಾಜರಿದ್ದರು. ಹಿರಿಯ ಸಂಗಾತಿಗಳಾದ ಡಾ।।ವಿ.ಎನ್. ದೇಶಪಾಂಡೆ ಜೂನ್ 20 ರಂದು ಪಾರ್ಟಿ ಶಾಲೆಯನ್ನು ಉದ್ಘಾಟಿಸಿ ಸದ್ಯದ ಪರಿಸ್ಥಿತಿಯಲ್ಲಿ ಸದಸ್ಯರಿಗೆ ರಾಜಕೀಯ ಸೈದ್ಧಾಂತಿಕ ವಿಷಯಗಳಲ್ಲಿ ಕ್ಲಾಸು ನಡೆಯುವುದರ ಮಹತ್ವವನ್ನು ತಿಳಿಸಿದರು.

ಪ್ರಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ನಿತ್ಯಾನಂದ ಸ್ವಾಮಿ, ಪ್ರಸಕ್ತ ರಾಜಕೀಯ ಪರಿಸ್ಥಿತಿ ಮತ್ತು ಪಕ್ಷದ ಕಾರ್ಯಕ್ರಮದ ಕುರಿತು ಪಾಠ ಮಾಡಿದರು.

ಇತ್ತೀಚೆಗೆ ಬಿ.ಜೆ.ಪಿ ನೇತೃತ್ವದ ಸರಕಾರ ಅಣುಬಾಂಬ್ ಪರೀಕ್ಷೆ ನಡೆಸಿದ ನಂತರ ಸಂಭವಿಸಿದ ರಾಜಕೀಯ ಮತ್ತು ಆರ್ಥಿಕ ದುಷ್ಪರಿಣಾಮಗಳ ಕುರಿತೂ ನಿತ್ಯಾನಂದ ಸ್ವಾಮಿ ತಿಳಿಸಿದರು. ಸ್ವಾತಂತ್ರ್ಯ ನಂತರ ಭಾರತದಲ್ಲಿ ಗುತ್ತೇದಾರಿ ಬಂಡವಾಳ ಶಾಹಿ ನೇತೃತ್ವದಲ್ಲಿ ಬಂಡವಾಳಶಾಹಿ ಭೂಮಾಲಿಕ ವರ್ಗದ ಪ್ರಭುತ್ವ ನಡೆದು ಬಂದಿದ್ದು, ಅದು ಇತ್ತೀಚಿನ ವರೆಗೆ ಕಾಂಗ್ರೆಸ್‌ನ್ನು ಬೆಂಬಲಿಸುತ್ತಾ ಬಂದಿದ್ದು, ಈಗ ಕಾಂಗ್ರೆಸ್ ಬಲಗುಂದುತ್ತಿರುವಾಗ ಅದು ಬಿ.ಜೆ.ಪಿ.ಗೆ ಹೆಚ್ಚು ಬೆಂಬಲಿಸುತ್ತಿರುವ ಹಿನ್ನೆಲೆಯಲ್ಲಿ ಪಕ್ಷವು ಬಿಜೆಪಿಯ ವಿರುದ್ಧ ತನ್ನ ಹೋರಾಟವನ್ನು ಹರಿತಗೊಳಿಸುವ ಚಾರಿತ್ರಿಕ ಅವಶ್ಯಕತೆಯ ಕುರಿತು ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಜಿ.ಎನ್. ನಾಗರಾಜ್ ಸ್ಪಷ್ಟಪಡಿಸಿದರು. ಮುಂದುವರಿದ ಅವರು ತಮ್ಮ ಪಾಠದಲ್ಲಿ ಕೋಮುವಾದ, ಫ್ಯಾಸಿಸಂ ಮತ್ತು ಆರ್.ಎಸ್.ಎಸ್.ನ ಗುಣ ಲಕ್ಷಣಗಳನ್ನು ಸುದೀರ್ಘವಾಗಿ ಮನಮುಟ್ಟುವಂತೆ ತಿಳಿಸಿದರು. ಬಿಜೆಪಿ, ಸಂಘ ಪರಿವಾರದ ಫ್ಯಾಸಿಸ್ಟ್ ಧೋರಣೆಗಳ ವಿರುದ್ಧ ಹೋರಾಡಲು ಯೋಗ್ಯ ಮನೋಭೂಮಿಕೆಯನ್ನು ರಚಿಸಿಕೊಟ್ಟರು.

ದಿ 21 ರಂದು ಕಾ।। ವಿ.ಎನ್. ದೇಶಪಾಂಡೆ 'ಕಮ್ಯುನಿಸ್ಟ್ ಘೋಷಣೆ: ಅಂದು-ಇಂದು' ಎಂಬ ಕುರಿತು ಪಾಠ ಮಾಡಿದರು.

ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಸಿ.ಆರ್. ಭಟ್ 'ಸಾಮೂಹಿಕ ಸಂಘಟನೆಗಳಲ್ಲಿ ರಾಜಕೀಯ ಕೆಲಸ ಮತ್ತು ಪಕ್ಷ ಕಟ್ಟುವುದು' ಕುರಿತು ಪಾಠ ಮಾಡಿದರು. ಪಕ್ಷದ ಪತ್ರಿಕೆ ಹಾಗೂ ಸಾಹಿತ್ಯಗಳ ಪ್ರಸಾರ ಹೆಚ್ಚಿಸುವುದು, ಇತ್ಯಾದಿ ಕರ್ತವ್ಯಗಳನ್ನು ನಿರ್ವಹಿಸಲು ಪಕ್ಷದ ಸದಸ್ಯರನ್ನು ಭಟ್ ಪ್ರೇರೇಪಿಸಿದರು.

ಹುಬ್ಬಳ್ಳಿ, ಧಾರವಾಡ ಮಹಾನಗರದಲ್ಲಿ ಕೆಲವು ವಾರ್ಡ್‌ಗಳನ್ನು ಆರಿಸಿಕೊಂಡು ಅಲ್ಲಿಯ ಜನರ ನಾಗರಿಕ ಸೌಲಭ್ಯಗಳ ಕುರಿತು ಅಧ್ಯಯನ ಹಾಗೂ ಹೋರಾಟಗಳನ್ನು ರಚಿಸಿ ನಮ್ಮ ಪಕ್ಷ ಕಟ್ಟಿ ಬೆಳೆಸಲು ಶಾಲೆಗೆ ಹಾಜರಾದ ಪಕ್ಷದ ಸದಸ್ಯರು ಹಲವಾರು ಉಪಯುಕ್ತ ಸಲಹೆಗಳನ್ನು ನೀಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಡಿ.ಜೆ. ಗೊಂದಕರ್ ವಂದಿಸಿದರು. ಬಿ.ಐ. ಈಳಿಗೇರ ಮತ್ತು ಸಂಗಡಿಗರು ಎರಡು ದಿನಗಳಲ್ಲಿ ಮಧ್ಯ ಮಧ್ಯ ಹೋರಾಟದ ಹಾಡುಗಳನ್ನು ಹಾಡಿ ಸ್ಫೂರ್ತಿ ತುಂಬಿದರು. ಮುಂದೆ ಹಾನಗಲ್ ತಾಲೂಕು, ರಾಣೆ-ಬೆನ್ನೂರು, ಹರಿಹರ, ದಾವಣಗೆರೆ ಪ್ರದೇಶಗಳ ಸದಸ್ಯರಿಗೆ ಎರಡು ಪ್ರತ್ಯೇಕ ಪಾರ್ಟಿ ಶಾಲೆಗಳನ್ನು ನಡೆಸಲು ತೀರ್ಮಾನಿಸಲಾಯಿತು.

ಕೇಂದ್ರ ಕಾವಿ ಶಿಕ್ಷಣ ನೀತಿ ವಿರುದ್ಧ ಜುಲೈ 9 ರಿಂದ ರಾಜ್ಯಾದ್ಯಂತ ಎಸ್.ಎಫ್.ಐ ಪ್ರತಿಭಟನೆ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಶಿಕ್ಷಣ ವ್ಯಾಪಾರೀಕರಣ ಹಾಗೂ ಕೋಮುವಾದೀಕರಣದ ಸಂಕೇತ ವಾಗಿರುವ ಮಾನವ ಸಂಪನ್ಮೂಲ ಸಚಿವ ಮುರುಳಿ ಮನೋಹರ ಜೋಷಿಯವರ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಬೋಧನ ಶುಲ್ಕ ಹೆಚ್ಚಿಸುವ ಹೇಳಿಕೆ ಹಾಗೂ ಉನ್ನತ ಶಿಕ್ಷಣವನ್ನು ಅರ್ಹತಾ ಯೋಗ್ಯ ವಲ್ಲದ ಪಟ್ಟಿಯಲ್ಲಿಟ್ಟು ಅದಕ್ಕೆ ನೀಡುತ್ತಿದ್ದ ಸಬ್ಸಿಡಿಯನ್ನು ಶೇ. 90 ರಿಂದ 50ಕ್ಕೆ ಇಳಿಸಿ ಮುಂದಿನ ವರ್ಷಗಳಲ್ಲಿ ಶೇ. 25 ಕ್ಕೆ ಇಳಿಸುವ ಜೋಷಿಯವರ ಪ್ರಸ್ತಾವನೆಯನ್ನು ಖಂಡಿಸಿರುವ ಎಸ್.ಎಫ್.ಐ, ಜುಲೈ 9 ರಂದು ರಾಜ್ಯಾದ್ಯಂತ ಈ ಕಾವಿ ಶಿಕ್ಷಣ ನೀತಿಯ ವಿರುದ್ಧ ಪ್ರತಿಭಟಿಸಲು ವಿದ್ಯಾರ್ಥಿಗಳಿಗೆ ಕರೆ ನೀಡಿದೆ.

ಅಭಿವೃದ್ಧಿ ಶುಲ್ಕ ಕಡಿತಕ್ಕಾಗಿ ಡಿ.ವೈ.ಎಫ್.ಐ ನಿಂದ ಯಶಸ್ವಿ ಹೆದ್ದಾರಿ ತಡೆ

ಬೆಂಗಳೂರು: ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಡಿ.ವೈ.ಎಫ್.ಐ ನೇತೃತ್ವದಲ್ಲಿ ಕಳೆದ ಆರು ತಿಂಗಳುಗಳಿಂದ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ನಗರ ಸಭೆಗಳ ಅಭಿವೃದ್ಧಿ ಶುಲ್ಕ ಹೆಚ್ಚಳ ವಿರುದ್ಧ ಭಾರಿ ಪ್ರತಿಭಟನೆ ನಡೆಯುತ್ತಿದ್ದು ಅದರ ಭಾಗವಾಗಿ ಶುಲ್ಕ ಕಡಿಮೆಗೊಳಿಸುವಂತೆ ಒತ್ತಾಯಿಸಿ ಜೂನ್ 27 ರಂದು ನಗರದ ಹೆದ್ದಾರಿಗಳನ್ನು ಸಾವಿರಾರು ಜನರು ತಡೆದು ಯಶಸ್ವಿಗೊಳಿಸಿದರು.

ಕೃಷ್ಣರಾಜಪುರ ರೈಲ್ವೆ ನಿಲ್ದಾಣ, ತುಮಕೂರು ರಸ್ತೆ, ದಾಸರಹಳ್ಳಿ ನಗರಸಭೆ ಕಛೇರಿ ಹತ್ತಿರ, ಹೊಸೂರು ರಸ್ತೆ, ಬೊಮ್ಮನಹಳ್ಳಿ, ಮೈಸೂರು ರಸ್ತೆ ನಾಯಂಡಹಳ್ಳಿಗಳಲ್ಲಿ ಸಾವಿರಾರು ನಿವಾಸಿಗಳು ರಸ್ತೆ ತಡೆ ನಡೆಸಿದರು.

ಪ್ರತಿ ಚದುರ ಗಜಕ್ಕೆ 100ರೂ. ವಿಧಿಸಿರುವುದು ಅವೈಜ್ಞಾನಿಕವಾಗಿದ್ದು ಇದನ್ನು ರೂ. 50ಕ್ಕೆ ಇಳಿಸುವಂತೆ ಪ್ರತಿಭಟನಾಕಾರರು ಸರ್ಕಾರವನ್ನು ಒತ್ತಾಯಿಸಿದರು.

ಬೊಮ್ಮನಹಳ್ಳಿಯಲ್ಲಿ ನಡೆದ ರಸ್ತೆ ತಡೆಯಲ್ಲಿ ಸಿಪಿಐ(ಎಂ) ಜಿಲ್ಲಾ ಮುಖಂಡ ಕೆ. ಪ್ರಕಾಶ್ ಮಾತನಾಡಿ ಲಕ್ಷಾಂತರ ಜನರನ್ನು ಬಾಧಿಸುವ ಈ ಶುಲ್ಕವನ್ನು ಕೂಡಲೇ ಕಡಿತಗೊಳಿಸಿ ಕಂತುಗಳಲ್ಲಿ ಸಂಗ್ರಹಿಸಬೇಕೆಂದು ಆಗ್ರಹಿಸಿದರು. ಶಾಮಣ್ಣರೆಡ್ಡಿ, ಜಿ.ರಾಮಯ್ಯ, ಲಕ್ಷ್ಮಣ್ ಕುಮಾರ್ ಮುಂತಾದವರು ಮಾತನಾಡಿದರು.

ಕೃಷ್ಣರಾಜಪುರದಲ್ಲಿ 800 ಕ್ಕು ಹೆಚ್ಚು ನಾಗರಿಕರು ಭಾಗವಹಿಸಿ ಅರ್ಧ ಘಂಟೆಗಿಂತ ಹೆಚ್ಚುಕಾಲ ರಸ್ತೆ ತಡೆ ನಡೆಸಿದರು. ಗೋಪಾಲಗೌಡ, ಜಯರಾಮ್, ಚಲುವರಾಜ್ ರಾಮಚಂದ್ರ ಮುಂತಾದವರ ನೇತೃತ್ವದಲ್ಲಿ ನಡೆಯಿತು.

ಟಿ. ದಾಸರಹಳ್ಳಿ ಹಾಗೂ ಮೈಸೂರು ರಸ್ತೆ ತಡೆ ಕಾರ್ಯಕ್ರಮದಲ್ಲಿ ಸಾವಿರಾರು ಜನ ನಾಗರಿಕರು ಜಮಾಯಿಸಿ ರಸ್ತೆ ತಡೆ ನಡೆಸಿದಾಗ ನೂರಾರು ಜನರನ್ನು ಪೋಲೀಸರು ಬಂಧಿಸಿದರು. ಪಿ.ಕೆ. ಸುಬ್ರಮಣಿ, ರಾಮಕೃಷ್ಣ, ಗೋಪಾಲಕೃಷ್ಣ, ಗಂಗರಾಜು, ವರಲಕ್ಷ್ಮಿ, ಕೆ. ಎಸ್.ಲಕ್ಷ್ಮಿ, ಶ್ರೀನಿವಾಸ್ ಹಾಗೂ ಇತರ ಸಂಘಗಳ ಪ್ರತಿನಿಧಿಗಳು ಮಾತನಾಡಿದರು.

ಸರ್ಕಾರ ಈ ಅವೈಜ್ಞಾನಿಕ ಶುಲ್ಕವನ್ನು ಕಡಿತಗೊಳಿಸದಿದ್ದರೆ ಮುಂದೆ ಕ್ರೋಢೀಕರಿಸಿದ ಐಕ್ಯ ಹೋರಾಟ ನಡೆಸಲಾಗುವುದೆಂದು ಡಿ.ವೈ.ಎಫ್.ಐ ಮುಖಂಡರು ಎಚ್ಚರಿಸಿದ್ದಾರೆ.

ಡಿ.ವೈ.ಎಫ್.ಐ.ನ ಸತತ ಹೋರಾಟದಿಂದಾಗಿ ಶುಲ್ಕ ಸಂಗ್ರಹ ಗಡುವನ್ನು 6 ತಿಂಗಳಿಗೆ ವಿಸ್ತರಿಸಿರುವುದು ಹೋರಾಟದ ಪ್ರತೀಕವೆಂದು ವಿಶ್ಲೇಷಿಸಬಹುದಾಗಿದೆ.

ಭಾರತದ ಸಂವಿಧಾನವನ್ನು ಸಂಪೂರ್ಣವಾಗಿ ಉಲ್ಲಂಘಿಸಿ ರಾಜ್ಯಗಳಿಗೆ ಕೇಂದ್ರದ ಅಧಿಕಾರಿಗಳ ತಂಡಗಳನ್ನು ಕೇಂದ್ರ ಗೃಹಮಂತ್ರಿಗಳು ಮೊದಲು ತಮಿಳುನಾಡಿಗೆ, ನಂತರ ಬಿಹಾರಿಗೆ, ಆಮೇಲೆ ಪಶ್ಚಿಮ ಬಂಗಾಳಕ್ಕೂ ಕಳಿಸಿದ್ದಾರೆ. ಕಾನೂನು-ವ್ಯವಸ್ಥೆಯ ಪರಿಶೀಲನೆಯ ಹೆಸರಲ್ಲಿ ಸಂವಿಧಾನದ ೩೫೫ನೇ ಕಲಮಿನ ಮರೆಯಲ್ಲಿ ಬಿಜೆಪಿ ಆಳ್ವಿಕೆಯ ಉತ್ತರ ಪ್ರದೇಶ, ಮಹಾರಾಷ್ಟ್ರ, ದಿಲ್ಲಿ ಮತ್ತು ರಾಜಸ್ತಾನಕ್ಕೆ ಕಳಿಸದೆ ಕೇವಲ ತನ್ನ ಮಿತ್ರ ಪಕ್ಷಗಳ ಸಂಕುಚಿತ ಹಿತಾಸಕ್ತಿಗಳಿರುವ ರಾಜ್ಯಗಳಿಗೆ ಮಾತ್ರ ಕಳಿಸುತ್ತಿರುವುದು ಅಡ್ವಾಣಿಯವರ ಗೋಸುಂಬೆತನವನ್ನು, ಬಿಜೆಪಿಯ ಸರ್ವಾಧಿಕಾರಿಶಾಹಿ ಪ್ರವೃತ್ತಿಯನ್ನು ಬಟಾಬಯಲುಗೊಳಿಸಿದೆ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಈ ವಿಶ್ಲೇಷಣೆಯಲ್ಲಿ. ತುರ್ತುಪರಿಸ್ಥಿತಿಯನ್ನು ಕಿತ್ತೆಸೆದ ಭಾರತೀಯ ಜನತೆ ಈ ಗೋಸುಂಬೆತನವನ್ನು, ಪಕ್ಷಪಾತದ ಆಟಗಳನ್ನು ಸಹಿಸಬೇಕೆ? ಖಂಡಿತಾ ಇಲ್ಲ.

ಸೀತಾರಾಂ ಯೆಚೂರಿ

ಅಧಿಕಾರಕ್ಕೆ ಅಂಟಿಕೊಂಡಿರಲು ಎಂತೆಂತಾ ಆಟಗಳು!

ಕೇಂದ್ರದಲ್ಲಿ ಹೇಗಾದರೂ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಅತ್ಯಂತ ಕೀಳು ಸಮಯಸಾಧಕತನಕ್ಕೆ ಇಳಿಯಲೂ ಹೇಸುತ್ತಿಲ್ಲ. ತನ್ನ ಮಿತ್ರ ಪಕ್ಷಗಳ ಒತ್ತಾಯಗಳಿಗೆ ಮಣಿದು ಸಂವಿಧಾನವನ್ನು ಬುಡಮೇಲು ಮಾಡಲು, ಹಿಂದೆ ಯಾವ ಸರಕಾರವೂ ಪ್ರದರ್ಶಿಸದ ಸರ್ವಾಧಿಕಾರಿ ಪ್ರವೃತ್ತಿಯನ್ನೀಗ ಪ್ರದರ್ಶಿಸಲೂ ಅದು ಹೇಸುತ್ತಿಲ್ಲ. ಈ ಅಲುಗಾಡುತ್ತಿರುವ ಕೂಟವನ್ನು ಕಲೆ ಹಾಕಿದ ಬಿಜೆಪಿ ಎಐಎಡಿಎಂಕೆ, ಸಮತಾ, ತೃಣಮೂಲ ಕಾಂಗ್ರೆಸ್ಸಿನಂತಹ ಸಣ್ಣ ಗುಂಪುಗಳನ್ನು ಅವಲಂಬಿಸಿದೆ. ಚುನಾವಣೆಗಳಲ್ಲಿ ಎಐಎಡಿಎಂಕೆಯೊಂದಿಗೆ ಮೈತ್ರಿ ಸಾಧಿಸಲು ಒಂದು ಚುನಾಯಿತ ಸರಕಾರವನ್ನು ವಜಾ ಮಾಡುವ ಭರವಸೆಯನ್ನು ಈ ಬಿಜೆಪಿ ಮುಖಂಡರು ನೀಡಿದ್ದಾರೆಂಬುದು ಜಯಲಲಿತಾರವರ ಮಾತುಗಳಿಂದ ಸ್ಪಷ್ಟವಾಗುತ್ತದೆ. ಬಿಜೆಪಿ ಮುಖಂಡರ ಪ್ರಜಾಪ್ರಭುತ್ವ ಎಂತಹದ್ದು ಎಂಬುದಕ್ಕೆ ಇನ್ನೇನು ಪುರಾವೆ ಬೇಕು?

ಹಿಂದೆ ತಮಿಳುನಾಡು, ನಂತರ ಬಿಹಾರ ಹಾಗೂ ಈಗ ಬಂಗಾಳಕ್ಕೆ ಕೇಂದ್ರದ ಅಧಿಕಾರಿಗಳ ತನಿಖಾ ತಂಡಗಳನ್ನು ಕಳಿಸುವ ಸಂವಿಧಾನವನ್ನು ಸಂಪೂರ್ಣವಾಗಿ ಉಲ್ಲಂಘಿಸುವ ಕ್ರಮವನ್ನು ವಿರೋಧಿಸಿದ ಪಶ್ಚಿಮ ಬಂಗಾಳ ಸರಕಾರ ಇಂತಹ ಕೇಂದ್ರ ತಂಡವನ್ನು ಕಾಣಲು ನಿರಾಕರಿಸಿತು. ಏಕೆಂದರೆ ಈ ತಂಡ ಕಳಿಸಲು ಅಡ್ವಾಣಿಯವರು ನೀಡಿದ ಕಾರಣ ಎಷ್ಟು ಕ್ಷುಲ್ಲಕವೆಂದರೆ ಅದು ಯಾವುದೇ ಕಾನೂನಿನ ಪರೀಕ್ಷೆಯೆದುರು ನಿಲ್ಲುವಂತದ್ದಲ್ಲ. ಅಡ್ವಾಣಿಯವರು ಸಂವಿಧಾನದ 355ನೇ ಕಲಮಿನ ಪ್ರಕಾರ ತಾನು ಮಾಡಿದ್ದು ಸರಿ ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ಕಲಂ ಏನು ಹೇಳುತ್ತದೆ ನೋಡೋಣ.

"ರಾಜ್ಯಗಳನ್ನು ಬಾಹ್ಯ ಆಕ್ರಮಣದಿಂದ ಹಾಗೂ ಆಂತರಿಕ ಗಲಭೆಗಳಿಂದ ರಕ್ಷಿಸುವ ಕೇಂದ್ರದ ಕರ್ತವ್ಯ............ ಪ್ರತಿಯೊಂದು ರಾಜ್ಯವನ್ನು ಬಾಹ್ಯ ಆಕ್ರಮಣದಿಂದ ಮತ್ತು ಆಂತರಿಕ ಗಲಭೆಗಳಿಂದ ರಕ್ಷಿಸಿ ಪ್ರತಿಯೊಂದು ರಾಜ್ಯದ ಆಡಳಿತವನ್ನು ಈ ಸಂವಿಧಾನದ ಪ್ರಕಾರ ನಡೆಸಿಕೊಂಡು ಹೋಗುವಂತೆ ಮಾಡುವುದು ಕೇಂದ್ರದ ಕರ್ತವ್ಯ"

ಕೇವಲ ನೆಪ

ಅಂದರೆ ರಾಜ್ಯ ಸರಕಾರ ಸಂವಿಧಾನದ ಪ್ರಕಾರ ಕಾರ್ಯ ನಿರ್ವಹಿಸುತ್ತಿದೆಯೇ ಎಂಬುದನ್ನು ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು ಎಂದು ಇಲ್ಲಿ ಸ್ಪಷ್ಟವಾಗುತ್ತದೆ. ತೃಣಮೂಲ ಕಾಂಗ್ರೆಸ್ ಎಡರಂಗದ ವಿರುದ್ಧ ಸೃಷ್ಟಿಸಿದ ದೂರಿನ ಸ್ವರೂಪವೇನೇ ಇರಲಿ ಪಶ್ಚಿಮ ಬಂಗಾಳದಲ್ಲಿ ಸಂವಿಧಾನದ ಪ್ರಕಾರ ಚಟುವಟಿಕೆ ನಡೆಯುತ್ತಿಲ್ಲ ಎಂದು ಯಾವ ರೀತಿಯಲ್ಲೂ ಯಾರೂ ಹೇಳಲು ಸಾಧ್ಯವಿಲ್ಲ. ಅಥವಾ ವಿದೇಶೀ ಆಕ್ರಮಣದ ಬೆದರಿಕೆಯೂ ಏನಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವ ಅಗತ್ಯ ಏನೂ ಇಲ್ಲ. ಹೀಗಿರುವಾಗ ಅಡ್ವಾಣಿಯವರು ಏಳು ಮಂದಿ ತೃಣಮೂಲ ಕಾಂಗ್ರೆಸ್ ಸಂಸತ್ ಸದಸ್ಯರ ಬೆಂಬಲವನ್ನು ಉಳಿಸಿಕೊಳ್ಳಲಿಕ್ಕಾಗಿಯಷ್ಟೇ ಈ ಕಲಮಿನ ನೆಪ ಹೂಡಿದ್ದಾರೆಂಬುದನ್ನು ಮರೆ ಮಾಚಲು ಸಾಧ್ಯವಿಲ್ಲ. ಬೆಂಬಲ ಉಳಿಸಿಕೊಳ್ಳಲು ಅವರು ಸಂವಿಧಾನವನ್ನೂ ಉಲ್ಲಂಘಿಸಲೂ ಸಿದ್ಧವಾಗಿದ್ದಾರೆ.

ಕೇಂದ್ರ ತನಿಖಾ ತಂಡಗಳನ್ನು ಕಳಿಸಿದ ರಾಜ್ಯಗಳೆಲ್ಲವೂ ಪ್ರತಿಪಕ್ಷಗಳ ಆಡಳಿತದಲ್ಲಿರುವುದಾಗಲೀ, ಈ ಮೂರು ರಾಜ್ಯಗಳಲ್ಲಿ ಬಿಜೆಪಿಯ ಮಿತ್ರ ಪಕ್ಷಗಳ ಹಿತಾಸಕ್ತಿಗಳಿರುವುದಾಗಲೀ ಕೇವಲ ಕಾಕತಾಳೀಯವಲ್ಲ. ನಿಜವಾಗಿಯೂ ಕೇಂದ್ರ ಗೃಹ ಮಂತ್ರಿಗಳಿಗೆ ಕಾನೂನು-ವ್ಯವಸ್ಥೆಯ ಬಗ್ಗೆ ಆತಂಕ ವಿದ್ದರೆ, ಒಂದು ರಾಜ್ಯ ಸರಕಾರ ಸಂವಿಧಾನದ ಪ್ರಕಾರ ನಡೆಯುತ್ತಿಲ್ಲ ಎಂಬ ಆತಂಕ ವಿದ್ದಿದ್ದರೆ ಅವರು ಗಮನ ಕೊಡಬೇಕಾದ ಮೊದಲ ರಾಜ್ಯವೆಂದರೆ ಉತ್ತರ ಪ್ರದೇಶ.

ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವ ಕೆಲಸಕ್ಕೆ ಸಂಬಂಧಪಟ್ಟಂತೆ ಚಟುವಟಿಕೆಗಳನ್ನು ಉದ್ದೇಶಪೂರ್ವಕವಾಗಿ ಉತ್ತರ ಪ್ರದೇಶ ಮತ್ತು ರಾಜಸ್ತಾನದ ಹಲವು ವರ್ಕ್‌ಶಾಪ್‌ಗಳಲ್ಲಿ ತ್ವರಿತಗೊಳಿಸುತ್ತಿರುವುದು ಕೊನೆಗೆ ಭಾರತೀಯ ಸಂವಿಧಾನವನ್ನೇ ಬುಡಮೇಲು ಮಾಡುವ ಬೆಳವಣಿಗೆ. ಇದರ ವಿರುದ್ಧ ಸಾರ್ವಜನಿಕ ಆಕ್ರೋಶ ಹಾಗೂ ಸಾರ್ವತ್ರಿಕ ಖಂಡನೆ ವ್ಯಕ್ತವಾದರೂ ಬಿಜೆಪಿ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೆ ತರಲು ಕಟಿಬದ್ಧವಾದಂತಿದೆ. ಈ ಮೂಲಕ ಸ್ವತಃ ಸುಪ್ರೀಂ ಕೋರ್ಟ್ ಸಂವಿಧಾನದ ಒಂದು ಮೂಲಭೂತ ಲಕ್ಷಣ ಎಂದು ನಿರ್ವಚಿಸಿದ ಜಾತ್ಯಾತೀತತೆಯನ್ನೇ ಎಸೆದು ಬಿಡಲು ಅದು ಸಿದ್ಧವಾಗುತ್ತಿದೆ. ನಿಜವಾಗಿ ಸಂವಿಧಾನದ 355ನೇ ಕಲಮನ್ನು ಪ್ರಯೋಗಿಸಲು ಅತ್ಯಂತ ಸೂಕ್ತವಾದ ರಾಜ್ಯವೆಂದರೆ ಉತ್ತರ ಪ್ರದೇಶ. ಅಲ್ಲಿ ಈ ಕಲಮನ್ನು ಬಳಸಿ ಕೇಂದ್ರ ಸರಕಾರ ಮಧ್ಯಪ್ರವೇಶಿಸುವ ಅಗತ್ಯವಿದೆ.

ಬಿಜೆಪಿ ರಾಜ್ಯಗಳಲ್ಲೇ ಕಾನೂನು-ಅವ್ಯವಸ್ಥೆಯ ಈ ಪರಿ!

ಆದರೆ ಅಡ್ವಾಣಿ ಇದನ್ನು ನಿರ್ಲಕ್ಷಿಸುತ್ತಾರೆ. ಏಕೆಂದರೆ ಅವರೇ ಸ್ವತಃ ಈ ಕೋಮುವಾದಿ ಅಜೆಂಡಾದ ಭಾಗವಾಗಿರುವವರು. ಇದನ್ನು ಬಿಡೋಣ -ಕಾನೂನು-ವ್ಯವಸ್ಥೆಯ ಸನ್ನಿವೇಶವನ್ನು ಪರಿಗಣಿಸಿದರೂ ಉತ್ತರ ಪ್ರದೇಶದ ಸ್ಥಿತಿ ಎಂತಹದು? ಪ್ರತಿದಿನ 21 ಜನಗಳ ಕೊಲೆಯಾಗುತ್ತಿದೆ. ಪ್ರತಿದಿನ ಗಲಭೆಗಳಾಗುತ್ತಿವೆ. ಪ್ರತಿದಿನ ಹತ್ತಾರು ಜನಗಳ ಲೂಟಿಗಳಾಗುತ್ತಿವೆ, ಕನಿಷ್ಟ 2-3 ಮನೆಗಳನ್ನು ಡಕಾಯಿತರು ಲೂಟಿ ಮಾಡುತ್ತಾರೆ.ಡಕಾಯಿತಿಗಳಲ್ಲಿ 20.97% ಹೆಚ್ಚಳವಾಗಿದ್ದರೆ, ಲೂಟಿಗಳಲ್ಲಿ 19.72 ಶೇ ಕೊಲೆಗಳಲ್ಲಿ 8.65%, ಗಲಭೆಗಳಲ್ಲಿ 40.97% ದರೋಡೆಗಳಲ್ಲಿ 25.05% ಹೆಚ್ಚಳವಾಗಿದೆ. (ಇದು ಹಿಂದೀ ದೈನಿಕ 'ಹಿಂದುಸ್ತಾನ್' ನ ವರದಿ)

ಇನ್ನು ಮಹಾರಾಷ್ಟ್ರವಂತೂ ಪ್ರತಿದಿನ ಗ್ಯಾಂಗ್‌ವಾರ್‌ಗಳು ಹೆಚ್ಚುತ್ತಿರುವ ಸ್ಥಳ. ದತ್ತಾ ಸಾಮಂತ್‌ರಂತಹ ರಾಜಕೀಯ ಮುಖಂಡರನ್ನು ಹಾಡುಹಗಲೇ ಕೊಲೆ ಮಾಡಲಾಗುತ್ತಿದೆ. ಶ್ರೀ ಕೃಷ್ಣ ಆಯೋಗದ ಇಡೀ ವರದಿ ಗಲಭೆಕೋರತನ, ಮಾನಭಂಗ, ಡಕಾಯಿತಿ, ದರೋಡೆಗಳ ಪ್ರಕರಣಗಳಿಂದ ತುಂಬಿಹೋಗಿದೆಯಷ್ಟೇ ಅಲ್ಲ, ಇವೆಲ್ಲದರಲ್ಲಿ ಬಿಜೆಪಿ-ಶಿವಸೇನೆಯ ಮುಖಂಡರು ಸಿಲುಕಿಕೊಂಡಿದ್ದಾರೆ. ಆದ್ದರಿಂದಲೇ ರಾಜ್ಯ ಸರಕಾರ ಈ ವರದಿಯನ್ನು ವಿಧಾನಸಭೆಯ ಮುಂದಿಡುತ್ತಿಲ್ಲ.

ಇನ್ನೊಂದು ಬಿಜೆಪಿ ಆಳ್ವಿಕೆಯ ರಾಜ್ಯವಾದ ದಿಲ್ಲಿಯಂತೂ ಮಹಿಳೆಯರ ಮೇಲಿನ ಅಪರಾಧಗಳ ಪಟ್ಟಿಯಲ್ಲಿ ಸರ್ವಪ್ರಥಮ! ದೇಶದಲ್ಲಿ ನಡೆಯುವ ಪ್ರತಿ 100 ಅತ್ಯಾಚಾರ ಪ್ರಕರಣಗಳಲ್ಲಿ 38 ದಿಲ್ಲಿಯದ್ದು. ದರೋಡೆಗಳ ಹೆಚ್ಚಳದ ಪ್ರಮಾಣದಲ್ಲೂ ದಿಲ್ಲಿಗೆ ಮೊದಲ ಸ್ಥಾನ. 1995 ರಲ್ಲಿ 1757 ದರೋಡೆಗಳು ನಡೆದಿದ್ದರೆ 1996 ರಲ್ಲಿ 2124 ದರೋಡೆಗಳು ನಡೆದವು. ಅಂದರೆ 21% ಹೆಚ್ಚಳ. ದೇಶದ ಒಟ್ಟು ಅಪಹರಣಗಳಲ್ಲಿ ಮೂರನೇ ಒಂದು ಭಾಗ ಪಾಲು ದಿಲ್ಲಿಯದ್ದೇ. ದೇಶದಲ್ಲಿ ವರದಿಯಾಗಿರುವ 100 ಅಪರಾಧಗಳಲ್ಲಿ ದಿಲ್ಲಿಯೊಂದರ ಪಾಲೇ 21!

ಇವನ್ನೆಲ್ಲಾ ನೋಡಿದಾಗ ಅಡ್ವಾಣಿಯವರು ರಾಜ್ಯಗಳಿಗೆ ತನಿಖಾ ತಂಡಗಳನ್ನು ಕಳಿಸುವುದಕ್ಕೂ ಕಾನೂನು ವ್ಯವಸ್ಥೆಗೂ ಏನೇನೂ ಸಂಬಂಧವಿಲ್ಲ. ಪಶ್ಚಿಮ ಬಂಗಾಳದಲ್ಲೂ ಇತ್ತೀಚೆಗೆ ಪಂಚಾಯತ್ ಚುನಾವಣೆಯಲ್ಲಿ ವರದಿಯಾಗಿರುವ ಹಲ್ಲೆಗಳೆಂದರೆ ಬಿಜೆಪಿ-ತೃಣಮೂಲ ಕಾಂಗ್ರೆಸ್ ಕೂಟ ಸಿಪಿಐ(ಎಂ) ಮತ್ತು ಎಡರಂಗ ಬೆಂಬಲಿಗರ ಮೇಲೆ ಮಾಡಿರುವ ಹಲ್ಲೆಗಳೇ. ಅವರ ಬಳಿಯಿರುವ ಅಪಾರ ಹಣ, ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಇವೆಲ್ಲಾ ಕೇಂದ್ರ ಗೃಹ ಇಲಾಖೆಯ ಗುಪ್ತಚರ ವಿಭಾಗದ ಬಗ್ಗೆ ಸಾಕಷ್ಟು ಹೇಳುತ್ತದೆ. ಇಂತಹ ಬಿಜೆಪಿ ಬೆಂಬಲಿಗರನ್ನು ರಕ್ಷಿಸುವುದೇ ಅವರ ಕೆಲಸವಾಗಿರುವಂತಿದೆ.

ಇದು ಕೇವಲ ಅಧಿಕಾರದಲ್ಲಿ ಉಳಿಯುವುದಕ್ಕಾಗಿ ಸಂವಿಧಾನವನ್ನೇ ಬುಡಮೇಲು ಮಾಡುವ, ರಾಜಕೀಯ ಹಗೆ ಸಾಧನೆಯ ಒಂದು ಸ್ಪಷ್ಟ ಪ್ರಕರಣವಲ್ಲದೆ ಮತ್ತಿನ್ನೇನು? **ಪಶ್ಚಿಮ ಬಂಗಾಳದ ಎಡರಂಗಕ್ಕೆ ಅಧಿಕಾರದಲ್ಲಿರುವ ಯೋಗ್ಯತೆ ಬಿಜೆಪಿಗಿಂತ ಎಷ್ಟೋ ಪಟ್ಟು ಹೆಚ್ಚು ಎಂಬುದನ್ನು ಅಡ್ವಾಣಿಯವರಿಗೆ ನೆನಪಿಸಬೇಕಾಗಿದೆ.** ಎಡರಂಗ ಸರ್ಕಾರ ಕಳೆದ ಎರಡು ದಶಕಗಳಲ್ಲಿ ಸತತವಾಗಿ 5 ಸಾರ್ವತ್ರಿಕ ಚುನಾವಣೆಗಳಲ್ಲಿ 50% ಕ್ಕೂ ಹೆಚ್ಚು ಮತ ಪಡೆದು ಅಧಿಕಾರಕ್ಕೆ ಬಂದಿದ್ದರೆ ಬಿಜೆಪಿ ಕೇವಲ ಕಾಲಂಶ ಪಡೆದು ಅಧಿಕಾರದಲ್ಲಿದೆ. ಇಂತಹ ಒಂದು ಅಲ್ಪಮತದ ಸರಕಾರ, ಭಾರತೀಯ ಸಂವಿಧಾನದ ಬಗ್ಗೆ ತುಸುವಾದರೂ ಗೌರವವಿಲ್ಲದ ಪಕ್ಷಗಳ ಮೇಲೆ ಅವಲಂಬಿಸಿರುವ ಒಂದು ಸರಕಾರ ಪ್ರಜಾಪ್ರಭುತ್ವವನ್ನು, ಕಾನೂನಿನ ಆಳ್ವಿಕೆಯನ್ನು ಬುಡಮೇಲು ಮಾಡಲು ಬಿಡಬಾರದು.

ನಾಯ್ಡು, ಬರ್ನಾಲ ಏಕೆ ಮೌನವಾಗಿದ್ದಾರೆ?

ಇಲ್ಲೊಂದು ವಿಚಿತ್ರವೆಂದರೆ ರಾಜ್ಯಗಳ ಹಕ್ಕುಗಳ ಬಗ್ಗೆ ಬಹಳವಾಗಿ ಮಾತನಾಡುತ್ತಿದ್ದ ಅಕಾಲಿದಳ, ತೆಲುಗುದೇಶಂನಂತಹ ಕೆಲವು ಬಿಜೆಪಿ ಮಿತ್ರ ಪಕ್ಷಗಳು ಈಗ ಬಾಯಿ ಮುಚ್ಚಿ ಕೂತಿವೆ. ತನ್ನ ಮಾವ ಎನ್.ಟಿ.ರಾಮರಾವ್‌ರವರನ್ನು ಇಂದಿರಾಗಾಂಧಿ ಕಾನೂನು ಬಾಹಿರವಾಗಿ ವಜಾ ಮಾಡಿ ಒಂದು ಪಕ್ಷಾಂತರಿಗಳ ಸರ್ಕಾರವನ್ನು ಪ್ರತಿಷ್ಠಾಪಿಸಿದಾಗ ಒಂದು ಬೃಹತ್ ಜನತಾ ಆಂದೋಲನ ಕೇಂದ್ರ ಸರಕಾರ ಮತ್ತೆ ತೆಲುಗುದೇಶಂ ಸರಕಾರವನ್ನು ಅಧಿಕಾರದಲ್ಲಿ ಇಡುವಂತೆ ಮಾಡುವಂತೆ ಒತ್ತಡ ತಂದಿತು ಎಂಬುದನ್ನು ಚಂದ್ರಬಾಬು ನಾಯ್ಡು ಮರೆತಂತಿದೆ. ಇನ್ನೂ ನಗ್ನ ರೀತಿಯಲ್ಲಿ ಸಂವಿಧಾನವನ್ನು ಈಗ ಉಲ್ಲಂಘಿಸುತ್ತಿರುವಾಗ ಶ್ರೀಯುತ ನಾಯ್ಡು ಮೌನವಾಗಿದ್ದಾರೆ.

ರಾಜ್ಯಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕು ಎಂದು ಪ್ರತಿಪಾದಿಸುತ್ತಿದ್ದ ಪಕ್ಷ ಅಕಾಲಿದಳ. ಒಂದು ಸಮಯದಲ್ಲಿ ಸ್ವತಃ ಬರ್ನಾಲ ಇಂದಿರಾಗಾಂಧಿಯವರ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟದ ಪ್ರತೀಕವಾಗಿದ್ದರು. ಈ ಹಿಂದೆ ಕರುಣಾನಿಧಿ ಸರಕಾರವನ್ನು ವಜಾ ಮಾಡಬೇಕೆಂಬ ಸಲಹೆಯನ್ನು ಧಿಕ್ಕರಿಸುವ ಮಟ್ಟಕ್ಕೂ ಹೋದವರು ಅವರು. ಆದರೆ ಈಗ ಅವರೂ ಮೌನವಾಗಿದ್ದಾರೆ. ಇಂತಹ ರಾಜಕೀಯ ಪಕ್ಷಗಳು ಹೇಗಾದರೂ ಅಧಿಕಾರದಲ್ಲುಳಿದು ಕೊಂಡು, ಅಧಿಕಾರದ ರೊಟ್ಟಿ ತುಣುಕುಗಳಿಗಾಗಿ ತಮ್ಮ ನೀತಿಗಳನ್ನು ಕೈಬಿಡಲೂ ಸಿದ್ಧವಾಗಿದ್ದಾರೆ ಎಂಬುದು ಪ್ರಸಕ್ತ ರಾಜಕೀಯ ರಾಜಕಾರಣದ ದುರಂತವೆನ್ನಬೇಕು.

ಈ ಬೆಳವಣಿಗೆಗಳು ಭಾರತೀಯ ಪ್ರಜಾಪ್ರಭುತ್ವಕ್ಕೆ ಅನಿಷ್ಟದ ಸಂಕೇತಗಳು. ಭಾರತೀಯ ಜನತೆ ತುರ್ತು ಪರಿಸ್ಥಿತಿಯಲ್ಲಿ ಸರ್ವಾಧಿಕಾರಶಾಹಿಯಡಿ ನರಳಿದರು. ಆದರೆ ನಂತರ ಒಟ್ಟಾಗಿ ಎದ್ದು ನಿಂತು ದೇಶದ ಹಲವೆಡೆ ತುರ್ತು ಪರಿಸ್ಥಿತಿಯನ್ನು ಹೇರಿದ ಶಕ್ತಿಗಳನ್ನು ಸೋಲಿಸಿ ತುರ್ತುಪರಿಸ್ಥಿತಿಯ ಪರಿಕರಗಳನ್ನು ಕಳಚಿಹಾಕಿದರು.

ಬಿಜೆಪಿಗೆ ಈ ಅನುಭವವನ್ನು ಭಾರತದ ಜನ ನೆನಪಿಸಬೇಕಾಗಿದೆ. ಇಷ್ಟೊಂದು ನಿರ್ಭಿಡೆಯಿಂದ ಭಾರತೀಯ ಸಂವಿಧಾನವನ್ನು ಬುಡಮೇಲು ಮಾಡಲು ಯಾವುದೇ ಸರಕಾರಕ್ಕೆ ಅವಕಾಶ ನೀಡಬಾರದು. ಯಾವುದಕ್ಕೂ ಹೇಸದ, ನಿಜವಾಗಿ ದೇಶವನ್ನು ಆಳುವ ಜನಾದೇಶವೇ ಇಲ್ಲದ ಅಲ್ಪಮತದ ಸರಕಾರವನ್ನಂತೂ ಬಿಡಲೇಬಾರದು. ○

ಅಯೋಧ್ಯೆಯಲ್ಲಿ ಮತ್ತೊಮ್ಮೆ ಸಂವಿಧಾನವನ್ನು ಬುಡಮೇಲು ಮಾಡುವ ಸಿದ್ಧತೆ ನಡೆದಿದ್ದು 355ನೇ ಕಲಮು ಬಳಸಲು ಉತ್ತರ ಪ್ರದೇಶ ಅತ್ಯಂತ ಅರ್ಹ. ಕಾನೂನು-ವ್ಯವಸ್ಥೆ, ಪರಿಸ್ಥಿತಿ ಕಂಡರೂ ಅದರ 'ಅರ್ಹತೆ' ಕಮ್ಮಿಯಾಗಿರುವುದಿಲ್ಲ!
ಮಹಾರಾಷ್ಟ್ರ ಗ್ಯಾಂಗ್‌ವಾರ್‌ಗಳ ಸ್ಥಳ.
ದಿಲ್ಲಿ ಅಪರಾಧಗಳ ಪಟ್ಟಿಯಲ್ಲಿ ದೇಶದಲ್ಲೇ ಸರ್ವಪ್ರಥಮ! ದೇಶದಲ್ಲಿ ವರದಿಯಾಗುವ 100 ಅಪರಾಧಗಳಲ್ಲಿ ದಿಲ್ಲಿಯೊಂದರ ಪಾಲೇ 21!
ಆದರೂ ಅಡ್ವಾಣಿಯವರ ತನಿಖಾ ತಂಡ ಅಲ್ಲಿಗೆ ಹೋಗುವುದಿಲ್ಲ, ಏಕೆಂದರೆ ಕಾನೂನು-ವ್ಯವಸ್ಥೆಗೂ ಈ ತನಿಖಾ ತಂಡಗಳಿಗೂ ನಿಜವಾಗಿಯೂ ಏನೇನೂ ಸಂಬಂಧವಿಲ್ಲ

ಯುದ್ಧದಾಚೆ ನೋಡಲಾರದ ಈ 'ರಕ್ಷಣಾ ವಿಶ್ಲೇಷಕರು'



ಟೈಂಸ್ ಆಫ್ ಇಂಡಿಯಾದಲ್ಲಿ ಲಕ್ಷ್ಮಣ್

'ರಕ್ಷಣಾ ವಿಶ್ಲೇಷಕರು'!, 'ಸಾಮರಿಕ ತಜ್ಞರು'!- ಮೇ ೧೧ ಪೋಖ್ರಾನ್ ಸ್ಫೋಟದ ನಂತರ ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ರಾರಾಜಿಸುತ್ತಿರುವ ಇವರು ವಾಸ್ತವಿಕವಾಗಿ ವಿಶ್ಲೇಷಕರೂ ಅಲ್ಲ, ತಜ್ಞರೂ ಅಲ್ಲ. ಮಿಲಿಟರಿ ಆಡಳಿತದ ಭಾಗಗಳಿಗಷ್ಟೇ ಇವರು, ಸ್ವತಂತ್ರ ವಿಶ್ಲೇಷಕರಲ್ಲ, ಪರಮಾಣು ಶಸ್ತ್ರಾಸ್ತ್ರಗಳ ಪ್ರಶ್ನೆಯ ಎಲ್ಲಾ ಆಯಾಮಗಳನ್ನು ಪರಿಶೀಲಿಸುವ ಸಾಮರ್ಥ್ಯ ಇವರಲ್ಲಿಲ್ಲ ಎಂದು ಎಚ್ಚರಿಸುತ್ತಾರೆ ಒಬ್ಬ ಸಮಾಜ ವಿಜ್ಞಾನಿ ಪ್ರಬೀರ್ ಪುರಕಾಯಸ್ತ. ವಿಶ್ವದಲ್ಲಿ ಪರಮಾಣು ಶಸ್ತ್ರಾಸ್ತ್ರಗಳ ಪೈಪೋಟಿಗೆ ಇಂಧನ ಪೂರೈಸಿದವರು ಅಮೆರಿಕಾದ ಇಂತಹ 'ರಕ್ಷಣಾ ವಿಶ್ಲೇಷಕರು' ಎಂಬುದನ್ನು ಅವರು ನಮಗೆ ನೆನಪಿಸಿದ್ದಾರೆ. ಈಗಲೂ ಇಲ್ಲಿಯೂ ಅವರು ಹೇಳುತ್ತಿರುವುದೆಲ್ಲಾ ಮಿಲಿಟರಿ ವ್ಯವಸ್ಥೆಯ ಪ್ರಯೋಜನಕ್ಕಾಗಿಯೇ ಹೊರತು, ದೇಶದ ಭದ್ರತೆಗಾಗಿ ಅಲ್ಲ.

ಅಮೆರಿಕಾ ಹಿರೋಶಿಮಾ ಮತ್ತು ನಾಗಸಾಕಿಯ ಮೇಲೆ ಬಾಂಬು ಹಾಕಿದ್ದು ಎರಡನೇ ಜಾಗತಿಕ ಯುದ್ಧವನ್ನು ಕೊನೆಗೊಳಿಸಲಿಕ್ಕಾಗಿ ಅಲ್ಲ, ಯುದ್ಧಾನಂತರದ ವಿಶ್ವ ಸನ್ನಿವೇಶದಲ್ಲಿ ಏಕೈಕ ಪರಮಾಣು ಶಸ್ತ್ರಾಸ್ತ್ರ ಶಕ್ತಿಯಾಗಿ ಪ್ರಾಬಲ್ಯ ಮೆರೆಸಲು. ಸದ್ಯ ಭವಿಷ್ಯದಲ್ಲಂತೂ ಅಮೆರಿಕಾದ ಪರಮಾಣು ಗುತ್ತೇದಾರಿಕೆಯನ್ನು ಮುರಿಯಲು ಯಾರಿಗೂ ಸಾಧ್ಯವಿಲ್ಲ ಎಂದು ಆಗ ಸಾರಿದರು ಮಿಲಿಟರಿ ತಜ್ಞರು.

ಆದರೆ 1949 ರಲ್ಲಿ ಅವರ ಮಾತು ಸುಳ್ಳಾಯಿತು. ಸೋವಿಯತ್ ಒಕ್ಕೂಟ ಈ ಗುತ್ತೇದಾರಿಕೆಯನ್ನು ಮುರಿಯಿತು. ಆಗ ಈ ಮಿಲಿಟರಿ ತಜ್ಞರು ತಮ್ಮ ಯುದ್ಧದಾಟವನ್ನು ಮುಂದುವರಿಸಲು ಮತ್ತೊಂದು ತರ್ಕ ಸೃಷ್ಟಿಸಿದರು. ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸಿ ಒಂದುದೇಶವನ್ನು ನಾಶಮಾಡಬಹುದು. ಯುದ್ಧವನ್ನು ಗೆಲ್ಲಬಹುದು ಎಂದು. ಇದಕ್ಕಾಗಿ ಇನ್ನಷ್ಟು, ಮತ್ತಷ್ಟು ಪರಮಾಣು ಶಸ್ತ್ರಾಸ್ತ್ರಗಳನ್ನು, ಕ್ಷಿಪಣಿಗಳನ್ನು ತಯಾರಿಸುವಂತೆ ಪ್ರೋತ್ಸಾಹಿಸಿದರು. ಇದರ ಪರಿಣಾಮವಾಗಿ 1980 ರ ದಶಕದ ವೇಳೆಗೆ 50,000 ಪರಮಾಣು ಯುದ್ಧಾಸ್ತ್ರಗಳು ಅಮೆರಿಕಾ ಮತ್ತು ಸೋವಿಯತ್ ಒಕ್ಕೂಟದಲ್ಲಿ ರಾಶಿ ಬಿದ್ದವು- ವಿಶ್ವವನ್ನು ಒಂದು ಬಾರಿಯಲ್ಲ, ನೂರು ಬಾರಿ ನಾಶಮಾಡುವಷ್ಟು ದೊಡ್ಡ ಪ್ರಮಾಣದಲ್ಲಿ. ವಿಶ್ವ ಎಂತಹ ವಿಕಟ ಪರಿಸ್ಥಿತಿಯ ಅಂಚಿನಲ್ಲಿ ಬಂದು ನಿಂತಿತೆಂದರೆ ಮಿಲಿಟರಿ ಮಂದಿಯ ಒಂದು ಸಣ್ಣ ತಪ್ಪಿನಿಂದ ವಿಶ್ವವೇ ನಾಶವಾಗುವ ಆತಂಕ ಉಂಟಾಗಿತ್ತು.

ವಿಜ್ಞಾನಿಗಳ ಭಿನ್ನ ಪ್ರತಿಕ್ರಿಯೆ

ಈ ಪರಮಾಣು ಅಸ್ತ್ರಗಳ ಬಗ್ಗೆ, ಕ್ಷಿಪಣಿಗಳ ಬಗ್ಗೆ ಆಮೂಲಾಗ್ರವಾಗಿ ತಿಳಿದಿದ್ದ ಇನ್ನೊಂದು ವಿಭಾಗವೆಂದರೆ ವಿಜ್ಞಾನಿಗಳದ್ದು. ಅವರು ಪರಮಾಣು ಅಸ್ತ್ರಗಳಿಗೆ ಪ್ರತಿಕ್ರಿಯಿಸಿದ ರೀತಿ ಆ 'ಮಿಲಿಟರಿ ಪರಿಣತ'ರಿಗಿಂತ ಸಂಪೂರ್ಣ ಭಿನ್ನವಾಗಿತ್ತು. ಸಾಮಾನ್ಯವಾಗಿ ವಿಜ್ಞಾನಿಗಳೆಲ್ಲಾ ಪರಮಾಣು ಶಸ್ತ್ರಾಸ್ತ್ರಗಳನ್ನು ಎಂದೂ ಬಳಸಬಾರದು ಎಂದು ಎಚ್ಚರಿಸಿದರು. ಹಿರೋಶಿಮಾ, ನಾಗಸಾಕಿಯ ಮೇಲೆ ಹಾಕಿದ ಬಾಂಬಿನ ಯೋಜನೆಯಲ್ಲಿ ದುಡಿದ ತಂಡ (ಇದನ್ನು ಮ್ಯಾನ್‌ಹಟ್ಟನ್ ತಂಡ ಎನ್ನುತ್ತಾರೆ - ಮ್ಯಾನ್‌ಹಟ್ಟನ್ ಯೋಜನೆಯಲ್ಲಿ ಕೆಲಸ ಮಾಡಿದ ತಂಡ) ಕೂಡಾ ಇದೇ ಎಚ್ಚರಿಕೆ ನೀಡಿತು.

'ಪರಮಾಣು ಯುದ್ಧದಲ್ಲಿ ಯಾರೂ ವಿಜೇತರಿರುವುದಿಲ್ಲ' ಎಂದು ವಿಜ್ಞಾನಿಗಳು ಸಾಬೀತುಪಡಿಸಿದರು. ಮೊದಲು ಯಶಸ್ವಿಯಾಗಿ ಪರಮಾಣು ಧಾಳಿ ನಡೆಸಿ ಒಂದು ದೇಶ ಪರಮಾಣು ಯುದ್ಧದಲ್ಲಿ ಗೆದ್ದೆನೆನಿಸಿದರೂ, ಇಂತಹ ಪರಮಾಣು ಸ್ಫೋಟಗಳಿಂದ ಎದ್ದ ಅಪಾರ ಧೂಳಿನ ಮೋಡ 'ಪರಮಾಣು ಚಳಿಗಾಲ' ವನ್ನು ತರುತ್ತದೆ. ಇದು ಭೂಮಿಯ ಮೇಲಿನ ಜೀವಜಂತುಗಳನ್ನೆಲ್ಲಾ ನಿರ್ಮೂಲ ಮಾಡಿಬಿಡುತ್ತದೆ ಎಂದು ತೋರಿಸಿ ಕೊಟ್ಟರು. ಪರಮಾಣು ಯುದ್ಧದಲ್ಲಿ ಗೆಲ್ಲಬಹುದು ಎಂಬ ಮಿಲಿಟರಿ ತಜ್ಞರ ಹೇಳಿಕೆ ಮೂರ್ಖತನದ್ದು ಎಂದು ಅವರು ತೋರಿಸಿಕೊಟ್ಟರು.

ಮಿಲಿಟರಿ ತಜ್ಞರು ಮೊದಲು ಇದನ್ನು ಪ್ರಶ್ನಿಸಿದರು. ನಂತರ ಸಣ್ಣ-ಸಣ್ಣ ಬಾಂಬುಗಳು ಇಂತಹ ಪರಮಾಣು ಮೋಡ ಸೃಷ್ಟಿಸುವುದಿಲ್ಲವಾದ್ದರಿಂದ 'ಪರಮಾಣು ಚಳಿಗಾಲ' ವನ್ನು ತಡೆಯುಬಹುದು ಎಂದರು. ಆದರೆ ಇಂತಹ ಸಣ್ಣ-ಸಣ್ಣ ಬಾಂಬುಗಳನ್ನು ಪ್ರಯೋಗಿಸುವವರು ಯುದ್ಧ ಕ್ಷೇತ್ರದಲ್ಲಿನ ಕಮಾಂಡರುಗಳಾದ್ದರಿಂದ ಇವು ವಿಪರೀತವಾಗಿ ಹೆಚ್ಚಿ ವಿಜ್ಞಾನಿಗಳು ಹೇಳಿದ 'ಪರಮಾಣು ಚಳಿಗಾಲ'ದ ದೃಶ್ಯವೇ ಸೃಷ್ಟಿಯಾಗುತ್ತದೆ ಎಂದಾಗ ಮಿಲಿಟರಿ ತಜ್ಞರು ಬಾಯಿ ಮುಚ್ಚಿಕೊಂಡರು. ಆದರೆ ಅಷ್ಟಕ್ಕೇ ಬಿಡಲಿಲ್ಲ. ಪರಮಾಣು ಶಸ್ತ್ರಾಸ್ತ್ರಗಳು ಯುದ್ಧವಾಗದಂತೆ ತಡೆಯುವ (deterrence) ಸಾಧನಗಳು ಎಂದು ಪ್ರತಿಪಾದಿಸಲಾರಂಭಿಸಿದರು. ಇಂತಹ ಶಾಂತಿಸ್ಥಾಪನಾ ಅಣ್ವಸ್ತ್ರಗಳು ಕೇವಲ ಕೆಲವೇ 'ಪ್ರೌಢ' ದೇಶಗಳ ಬಳಿಯಿರಬೇಕಾಗುತ್ತದೆ. ಇತರ ದೇಶಗಳು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲೇಬಾರದು ಎಂದು ಈ ತಜ್ಞರು ಪ್ರತಿಪಾದಿಸಲಾರಂಭಿಸಿದರು. ಅಮೆರಿಕಾ ಪರಮಾಣು ಶಸ್ತ್ರಾಸ್ತ್ರಗಳಿಲ್ಲದ ದೇಶದ ಮೇಲೂ ತಾನೇ ಮೊದಲು ಈ ಶಸ್ತ್ರಗಳನ್ನು ಬಳಸುವುದಿಲ್ಲ ಎಂಬ ಭರವಸೆ ನೀಡಲು ಕೂಡಾ ನಿರಾಕರಿಸಿದ್ದು ಈ ವಿಶೇಷಜ್ಞರಿಗೆ ವಿಶೇಷ ಸಂಗತಿಯೆನಿಸಲಿಲ್ಲ! ಅಮೆರಿಕಾದ ವೈಮಾನಿಕ ದಳ ಮತ್ತು ನಾವಿಕದಳಗಳ ಪರಮಾಣು ವಿಭಾಗದ ಸೇನಾಪತಿಯಾಗಿದ್ದ ಜನರಲ್ ಲೀ ಬುಥರ್ ನಂತರ ಸಂಪೂರ್ಣ ಪರಮಾಣು ನಿಶ್ಶಸ್ತ್ರೀಕರಣದ ಪ್ರತಿಪಾದಕರಾದದ್ದು ಮಿಲಿಟರಿ ತಜ್ಞರ ಇಂತಹ ಗೋಸುಂಬೆತನಗಳಿಂದಾಗಿ. ಮಿಲಿಟರಿ ತಜ್ಞರ ಆ ನಂಬಿಕೆಗಳು ದೇಶಕ್ಕೇನೂ ಒಳಿತು ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಲೇಬೇಕೆಂದು ನನ್ನ ಕರ್ತವ್ಯ' ಎಂದು ಈಗ ಹೇಳುತ್ತಾರೆ ಈ ಸೇನಾಪತಿ.

ಹಣ ಕೊಡುವವರ ಮರ್ಜಿ

ಶಸ್ತ್ರಾಸ್ತ್ರ ಪೈಪೋಟಿಯಲ್ಲಿ ಈ ಮಿಲಿಟರಿ ತಜ್ಞರು ಇಂತಹ ಪಾತ್ರವನ್ನೇಕೆ ವಹಿಸುತ್ತಾರೆ? ಏಕೆಂದರೆ ಈ ಮಿಲಿಟರಿ ತಜ್ಞರಿಗೆ ಹಣ ಒದಗಿಸುವವರು ಮಿಲಿಟರಿ ಆಡಳಿತವೇ. ಭಾರೀ ದೊಡ್ಡ ಮಿಲಿಟರಿ ಬಜೆಟ್‌ನಿಂದ ಸಮೃದ್ಧಿ ಹೊಂದಿದ 'ಮಿಲಿಟರಿ ಕೈಗಾರಿಕಾ ಕೂಟ'ವೇ ಈ ತಜ್ಞರಿಗೆ ಆಸರೆಯಾಗಿ ನಿಂತದ್ದು.

ಹೀಗೆ ಮಿಲಿಟರಿ ತಜ್ಞರು ಮಿಲಿಟರಿ ವ್ಯವಸ್ಥೆಯೊಂದಿಗೆ ಹಾಗೂ ಮಿಲಿಟರಿ ಕೈಗಾರಿಕಾ ಕೂಟದೊಂದಿಗೆ ಹೊಂದಿರುವ ಸಂಬಂಧದಿಂದಾಗಿಯೇ ಅವರ ಅಭಿಪ್ರಾಯಗಳು ಇತರ ಜನವಿಭಾಗಗಳ ಅಭಿಪ್ರಾಯಗಳಿಗಿಂತ ಭಿನ್ನವಾಗಿರುವುದು. ಅದೇನೇ ಇರಲಿ, ಈ ಮಿಲಿಟರಿ ವಿಶ್ಲೇಷಕರಿಗೆ ಯುದ್ಧದಾಚೆ ನೋಡುವ ಸಾಮರ್ಥ್ಯ ಎಳ್ಳಷ್ಟೂ ಇಲ್ಲ. ಮಿಲಿಟರಿಯ ಕಣ್ಣೋಟವೇ ಈ 'ತಜ್ಞರ' ಕಣ್ಣೋಟ.

ಈಗ ಭಾರತ ಪರಮಾಣು ಶಸ್ತ್ರಾಸ್ತ್ರಹೊಂದಬೇಕು-ಎಂದು ವಾದಿಸುವ ಮಿಲಿಟರಿ ತಜ್ಞರು ಈ ಹಿಂದೆ ಅಮೆರಿಕಾದಲ್ಲಿ ಶೀತಲಯುದ್ಧ ವ್ಯವಸ್ಥೆಯನ್ನು ಬೆಂಬಲಿಸಿದವರ ಹಾದಿಯಲ್ಲೇ ಸಾಗುವವರು. ದಕ್ಷಿಣ ಏಶ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಯಿರಬೇಕಾದರೆ ಪರಮಾಣು ಅಸ್ತ್ರಗಳು ಅಗತ್ಯ ಎನ್ನುವುದು ಇವರ ವಾದ. ಪಾಕಿಸ್ತಾನ ಹಾರಿಸುವ ಪರಮಾಣು ಕ್ಷಿಪಣಿ ಭಾರತದ ರಾಜಧಾನಿಯನ್ನು ತಲುಪಲು, ಭಾರತ ಹಾರಿಸುವ ಪರಮಾಣು ಕ್ಷಿಪಣಿ ಪಾಕಿಸ್ತಾನ ರಾಜಧಾನಿಯನ್ನು ತಲುಪಲು ಬೇಕಾದ ಸಮಯ ಕೇವಲ 3 ನಿಮಿಷ. ಆದರೂ ಇದರಿಂದ ಈ ಉಪಖಂಡದ ಶಾಂತಿ ಮತ್ತು ಭದ್ರತೆ ಹೆಚ್ಚಿದೆಯೆನ್ನುತ್ತಾರೆ ಈ ವಿಶೇಷಜ್ಞರು.

ಈ ತಜ್ಞರು ಸೃಷ್ಟಿಸಿರುವ ಮಿಥ್ಯೆಯೆಂದರೆ ಪಾಕಿಸ್ತಾನದ ಕ್ಷಿಪಣಿ ಕಾರ್ಯಕ್ರಮದಿಂದಾಗಿ ಭಾರತದ ಭದ್ರತೆಗೆ ಅಪಾಯ ಬಂದಿದೆ. ಆದ್ದರಿಂದಾಗಿ ಪರಮಾಣು ಶಸ್ತ್ರಾಸ್ತ್ರವನ್ನು ನಾವು ಹೊಂದಬೇಕಾಗುತ್ತದೆ! ಇದೇ ತಜ್ಞರು ಇನ್ನೊಂದೆಡೆ ಭಾರತದ ಕ್ಷಿಪಣಿ ತಂತ್ರಜ್ಞಾನ ಪಾಕಿಸ್ತಾನಕ್ಕಿಂತ ಬಹಳ ಮುಂದಿದೆ ಎನ್ನುತ್ತಾರೆ. ಹಾಗಿದ್ದರೆ ಪಾಕಿಸ್ತಾನದ ಕ್ಷಿಪಣಿ ಕಾರ್ಯಕ್ರಮದ ನೆಪವೊಡ್ಡುವುದು ಏತಕ್ಕೆ? ಇದಕ್ಕೆ ಉತ್ತರ ನೀಡುವುದಿಲ್ಲ. ಒಟ್ಟಿನಲ್ಲಿ ಇನ್ನಷ್ಟು ಕ್ಷಿಪಣಿಗಳನ್ನು, ಪರಮಾಣು ಶಸ್ತ್ರಾಸ್ತ್ರಗಳು ಬೇಕೆನ್ನುವ ಮಿಲಿಟರಿ ವ್ಯವಸ್ಥೆಗೆ ಬೆಂಬಲ ನೀಡುವ ಉದ್ದೇಶವೇ ಇಲ್ಲಿ ಎದ್ದು ಕಾಣುತ್ತದೆಯಲ್ಲವೇ?

ಮಿಲಿಟರಿ ಪರಿಣತರು ಅಥವಾ ರಕ್ಷಣಾ ಪರಿಣತರ ಆಟವೆಂದರೆ ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿ ತರುವುದು. ಆದ್ದರಿಂದ ಪರಮಾಣು ಅಸ್ತ್ರಗಳು ಒಂದು ದೇಶ ಹೆಚ್ಚಿನ ಭದ್ರತೆ ನೀಡುವ ಅಸ್ತ್ರ ಎಂಬ ಮಿಥ್ಯೆಯನ್ನು ಒಡೆಯಬೇಕಾಗಿದೆ. ಈ ಪರಿಣತರ ಪ್ರಕಾರವೂ ಪರಮಾಣು ಅಸ್ತ್ರ ತಡೆ ಅಸ್ತ್ರವಾದ್ದರಿಂದ ಅವನ್ನೆಂದೂ ಉಪಯೋಗಿಸುವುದಿಲ್ಲ. ಇಂತಹ ಉಪಯೋಗಿಸದ ಅಸ್ತ್ರ ಭದ್ರತೆಯನ್ನು ಹೆಚ್ಚಿಸುವುದು ಹೇಗೆ?

ದಕ್ಷಿಣ ಏಶ್ಯಾದಲ್ಲಿನ ಗಂಭೀರ ಸೆಳೆತದ ಪರಿಸ್ಥಿತಿಯಲ್ಲಿ ಪರಮಾಣು ಭಾರತ ಮತ್ತು ಪರಮಾಣು ಪಾಕಿಸ್ತಾನ ಆಕಸ್ಮಿಕ ಕಣ್ತಪ್ಪಿನಿಂದಲೂ (ಈ ಹಿಂದೆ ಬಾತುಕೋಳಿಯ ಹಾರಾಟ, ಪೂರ್ಣಚಂದ್ರ ಇತ್ಯಾದಿಗಳನ್ನೂ 'ಕ್ಷಿಪಣಿ ಧಾಳಿ' ಎಂದು ರಾಡಾರ್‌ಗಳು ತಪ್ಪಾಗಿ ಗುರುತಿಸಿದ ಪ್ರಕರಣಗಳಿವೆ)ಭಾರತ, ಪಾಕಿಸ್ತಾನಗಳು ಪರಸ್ಪರ ಪರಮಾಣು ಘರ್ಷಣೆಗಿಳಿಯಬಹುದು. ಇನ್ನು ಮುಂದೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಘರ್ಷಣೆ ಸಂಭವಿಸಿದಾಗಲೆಲ್ಲಾ ಉಪಖಂಡದ ಮೇಲೆ ಪರಮಾಣು ಸ್ಫೋಟದ ಕರಿನೆರಳು ಕಾಣುತ್ತದೆ. ಭಾರತ ಮತ್ತು ಪಾಕಿಸ್ತಾನಗಳಲ್ಲಿ ಆಡಳಿತ ಅತಿ ಬಲಪಂಥೀಯ ಪಕ್ಷಗಳ, ಕೂಟಗಳ ಕೈಯಲ್ಲಿದ್ದರಂತೂ ನಮ್ಮೆರಡೂ ದೇಶಗಳ ವಿನಾಶದ ಭಯ ಸದಾ ಕಾಡುತ್ತಿರುತ್ತದೆ. ಆದ್ದರಿಂದ ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳ ಜನತೆ ತಮ್ಮನ್ನು ಕಾಡುವ ಈ ಪರಮಾಣು ಶಸ್ತ್ರಾಸ್ತ್ರಗಳ ಬೆದರಿಕೆಯ ವಿರುದ್ಧ ಒಂದಾಗಿ ಒಂದು ಶಾಂತಿ ಆಂದೋಲನ ಬೆಳಸಬೇಕಾದ ಅಗತ್ಯವಿದೆ. ○

ಪಾಕಿಸ್ತಾನದ ಕ್ಷಿಪಣಿಗಳಿಂದ ಭಾರತಕ್ಕೆ ಅಪಾಯವಿದೆಯೇ?

ಇದೆ ಎಂದು ನಂಬಿಸಲು 'ಮಿಲಿಟರಿ ತಜ್ಞ'ರು ಪಾಕಿಸ್ತಾನದ ಕ್ಷಿಪಣಿ ವ್ಯವಸ್ಥೆಯತ್ತ ತೋರಿಸುತ್ತಾರೆ. ಈ ಕೆಳಗೆ ಎರಡೂ ದೇಶಗಳ ಕ್ಷಿಪಣಿ ವ್ಯವಸ್ಥೆಯ ವಿವರಗಳಿವೆ

ಭಾರತ

ಕ್ಷಿಪಣಿ	ವ್ಯಾಪ್ತಿ ಕಿ.ಮಿ.	ಕಾರ್ಯಸಾಮರ್ಥ್ಯ ಕೆ.ಜಿ.ಗಳಲ್ಲಿ	
ಪೃಥ್ವಿ-1	150	1000	ಆಗಲೇ ಕೆಲಸ ಮಾಡುತ್ತಿದೆ.
ಪೃಥ್ವಿ-2	250	500	"
ಪೃಥ್ವಿ-3	350	500	ಅಭಿವೃದ್ಧಿ ಪಡಿಸಲಾಗುತ್ತಿದೆ
ಸಾಗರಿಕಾ	300	ಗೊತ್ತಿಲ್ಲ	"
ಅಗ್ನಿ	2500	1000	1500 ಕಿ.ಮಿ. ವ್ಯಾಪ್ತಿಯ ಪರೀಕ್ಷಣೆ ಆಗಿದೆ.
ಎಎಸ್‌ಎಲ್‌ವಿ	4500	1000	ಉಪಗ್ರಹ ಉಡಾವಣೆಗೆ ಬಳಸಲಾಗಿದೆ
ಪಿಎಸ್‌ಎಲ್‌ವಿ	8000	1000	"
ಜಿಎಸ್‌ಎಲ್‌ವಿ	14000	ಗೊತ್ತಿಲ್ಲ	"

ಪಾಕಿಸ್ತಾನ

ಕ್ಷಿಪಣಿ	ವ್ಯಾಪ್ತಿ (ಕಿ.ಮಿ)	ಕಾರ್ಯಸಾಮರ್ಥ್ಯ (ಕೆ.ಜಿ.ಗಳಲ್ಲಿ)	
ಹಫ್ತ್1	100	500	ಆಗಲೇ ಕೆಲಸ ಮಾಡುತ್ತಿದೆ
ಹಫ್ತ್2	300	500	"
ಹಫ್ತ್3	600	500	ಅಭಿವೃದ್ಧಿ ಪಡಿಸಲಾಗುತ್ತಿದೆ
ಎಂ-II	300	800	ಕೆಲಸ ಮಾಡುತ್ತಿದೆ
ಘೋರಿ	1200	700	ಪರೀಕ್ಷಿಸಲಾಗಿದೆ

ಈ ಹೋಲಿಕೆಯನ್ನು ನೋಡಿದಾಗ ಕೇವಲ ದೇಶಭಕ್ತಿಯ ಹೆಸರಲ್ಲಿ ಸುಳ್ಳು ಭಯ ಹುಟ್ಟಿಸಿ ತಮ್ಮ ಸ್ವಾರ್ಥ ಸಾಧಿಸುವ ಪ್ರಯತ್ನವೆಂಬುದು ಸ್ಪಷ್ಟವಾಗುವುದಿಲ್ಲವೇ?

'ಇಂಡಿಯಾ ಟುಡೇ'ಯಲ್ಲಿ ರವಿಶಂಕರ್ ವ್ಯಂಗ್ಯ



ದೇಶದೊಳಗೆ

ವಿಶ್ವ

ಆಂಧ್ರ: ರೈತ-ಕೃಷಿಕಾರ್ಮಿಕರ ಮೇಲೆ ದಬ್ಬಾಳಿಕೆ

ಭೂಸಮಸ್ಯೆ, ಕನಿಷ್ಠ ಕೂಲಿ, ಕೃಷಿ ಕೂಲಿಕಾರರಿಗೆ ಕೇಂದ್ರ ಕಾನೂನು ರಚನೆ ಮುಂತಾದ ವಿಷಯಗಳನ್ನು ಮುಂದಿಟ್ಟು ಆಂಧ್ರ ಪ್ರದೇಶ ವಿಧಾನ ಸಭೆಯ ಮುಂದೆ ಶಾಂತಿಯುತವಾಗಿ ಚಳುವಳಿ ನಡೆಸುತ್ತಿದ್ದ ರೈತರು, ಕೃಷಿಕೂಲಿಗಾರರ ಮೇಲೆ ರಾಜ್ಯದ ತೆಲುಗುದೇಶಂ ಸರಕಾರ ದೌರ್ಜನ್ಯವೆಸಗಿದೆ.

ಜೂನ್ 19 ರಂದು ಪಿಕೆಟಿಂಗ್ ನಡೆಸುತ್ತಿದ್ದ ಸಾವಿರಾರು ಜನರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ್ದರಿಂದ ಹಲವಾರು ಮಹಿಳೆಯರ ಸಹಿತ ಸುಮಾರು 50 ಜನರು ಗಾಯಗೊಂಡರು. ದೌರ್ಜನ್ಯಕ್ಕೀಡಾದವರಲ್ಲಿ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ರಾಜ್ಯ ಕಾರ್ಯದರ್ಶಿ ಪಿ. ಮಧು ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಬಿ.ರಾಘವಲು ಸೇರಿದ್ದಾರೆ. ಶಾಸಕರು ಮತ್ತು ರಾಜ್ಯದ ಕೃಷಿಕಾರ್ಮಿಕರ ಆಂದೋಲನದ ಹಲವು ಹಿರಿಯ ಮುಖಂಡರಿಗೂ ಲಾಠಿ ಪೆಟ್ಟಿನಿಂದ ಗಾಯಗಳಾಗಿವೆ.

ರಾಜಧಾನಿ ಹೈದರಾಬಾದಿನಲ್ಲಿ ಸಚಿವಾಲಯದ ಮುಂದೆ ನಡೆದ ಶಾಂತ ಚಳವಳಿಯಲ್ಲಿ ಸಾವಿರಾರು ರೈತರು-ಕೃಷಿ ಕೂಲಿಗಾರರು ಭಾಗವಹಿಸಿದ್ದರು. ಸಾಮಾಜಿಕ ಸಮಾನತೆ, ಮನೆ ನಿವೇಶನ ಮತ್ತಿತರ ಬೇಡಿಕೆಗಳನ್ನು ಈ ಸಂದರ್ಭದಲ್ಲಿ ಮಂಡಿಸಲಾಗಿತ್ತು. ಈ ಎಲ್ಲ ಬೇಡಿಕೆಗಳನ್ನು ಮುಂದಿಟ್ಟು ಹಲವು ವರ್ಷಗಳಿಂದ ಚಳುವಳಿ ನಡೆಸಲಾಗುತ್ತಿದೆ.

ತಮ್ಮ ಜೀವನವನ್ನು ಸುಧಾರಿಸುವತ್ತ ಕ್ರಮ ಕೈಗೊಳ್ಳಿ ಎಂದು ಮೊರೆಯಿಡಲು ಬಂದ ರೈತ-ಕೃಷಿ ಕೂಲಿಗಾರರ ಮೇಲೆ ತೆಲುಗುದೇಶಂ ಸರಕಾರ ಹೇಯ ದಬ್ಬಾಳಿಕೆ ನಡೆಸಿರುವುದನ್ನು ಅಖಿಲ ಭಾರತ ಕೃಷಿಕೂಲಿಗಾರರ ಸಂಘದ ಜಂಟಿ ಕಾರ್ಯದರ್ಶಿ ಕಾ।। ಸುನೀತ್ ಚೋಪ್ರಾ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ಎನ್.ಕೆ. ಶುಕ್ಲಾ ತೀವ್ರವಾಗಿ ಖಂಡಿಸಿದ್ದಾರೆ.

"ಕ್ರಿಯಾಶೀಲರಾದ" ನಿಷ್ಕ್ರಿಯ ಪೊಲೀಸರು!

ಹೈದರಾಬಾದಿನಲ್ಲಿ ಈಚಿಗೆ ಸಂಭವಿಸಿದ ಕೋಮುಗಲಭೆಗಳ ವೇಳೆ ಕ್ರಿಮಿನಲ್ ನಿಷ್ಪೆಯತೆ ತೋರಿದ್ದ ಪೊಲೀಸರು ಕೃಷಿ ಕಾರ್ಮಿಕರ ಮೇಲೆ ಹೇಯ ದೌರ್ಜನ್ಯಕ್ಕೆ ಇಳಿದಿದ್ದಾರೆ ಎಂದು ಈ ಮುಖಂಡರು ಹೇಳಿದ್ದಾರೆ.

ಲೂಟಿಕೋರರು, ಮುಗ್ಧ ಜನರ ಹಂತಕರು ಮತ್ತು ಮನೆಗಳನ್ನು ಸುಡುವವರು ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಶಾಂತ ರೀತಿಯ ಚಳುವಳಿ ನಡೆಸುತ್ತಿರುವವರಿಗಿಂತ ಹೆಚ್ಚು ಸ್ವೀಕಾರ್ಹರು ಎಂದು ಚಂದ್ರಬಾಬು ನಾಯ್ಡು ಸರಕಾರ ಭಾವಿಸಿರುವಂತಿದೆ ಎಂದು ಈ ನಾಯಕರು ಲೇವಡಿ ಮಾಡಿದ್ದಾರೆ.

ನಗರವನ್ನು ಉದ್ವಿಗ್ನ ಗೊಳಿಸಲು, ಕೋಮುವಾದಿ ಶಕ್ತಿಗಳಿಗೆ ಪೂರ್ಣ ಸ್ವಾತಂತ್ರ ನೀಡಲಾಗಿದೆ. ಆದರೆ ಶಾಂತಿಯುತ ಪ್ರಜಾಸತ್ತಾತ್ಮಕ ಪ್ರತಿಭಟನೆಯನ್ನು ಹೇಯವಾಗಿ ದಮನಿಸಲಾಗುತ್ತಿದೆ ಎಂದು ಟೀಕಿಸಿದ್ದಾರೆ.

ಇಂಥ ಸ್ಥಿತಿಯನ್ನು ಮುಂದುವರಿಯಲು ನಾವು ಬಿಡುವುದಿಲ್ಲ ಎಂದಿರುವ ಸಂಘಟನೆಯ ನಾಯಕರು, ದೌರ್ಜನ್ಯದ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ, ತಪ್ಪಿತಸ್ಥರನ್ನು ಶಿಕ್ಷಿಸುವಂತೆ ಒತ್ತಾಯಿಸಿದ್ದಾರೆ.

ಬಿಜೆಪಿ ಹುನ್ನಾರಗಳ ವೈಫಲ್ಯಕ್ಕೆ ಕರೆ ಕೊಟ್ಟ ಬೃಹತ್ ಸಮಾವೇಶ

ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಜನವಿರೋಧಿ ಆರ್ಥಿಕ ನೀತಿಗಳನ್ನು ತಡೆಯಲು ಹಾಗೂ ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ನಾಶಗೊಳಿಸುವ ಬಿಜೆಪಿ ಹುನ್ನಾರವನ್ನು ವಿಫಲಗೊಳಿಸಲು ಬೃಹತ್ ಜನಾಂದೋಲನ ಈಗ ಅಗತ್ಯವಾಗಿದೆ. ಹೀಗೆಂದು ಹೇಳಿದವರು ಸಿಪಿಐ(ಎಂ) ಪಾಲಿಟ್‌ಬ್ಯೂರೊ ಸದಸ್ಯ ಸೀತಾರಾಮ ಯೆಚೂರಿ.

ಇಂಥ ಆಂದೋಲನದ ನಿಟ್ಟಿನಲ್ಲಿ ತ್ರಿಪುರಾ ರಾಜಧಾನಿ ಅಗರ್ತಲಾದಲ್ಲಿ ನಡೆದ ರಾಜಮಟ್ಟದ ಸಮಾವೇಶವೊಂದರಲ್ಲಿ ಅವರು ಮಾತನಾಡುತ್ತಿದ್ದರು.

ನಮ್ಮ ದೇಶವನ್ನು ಭಾರೀ ರಾಷ್ಟ್ರೀಯ ದುರಂತದಿಂದ ಪಾರು ಮಾಡಬೇಕಾದರೆ ಇಂಥ ಶಕ್ತಿಗಳು ತಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರದಂತೆ ಯಾವುದೇ ಬೆಲೆ ತೆತ್ತಾದರೂ ತಡೆಯುವುದು ದೇಶಭಕ್ತ ಕರ್ತವ್ಯವಾಗಿದೆ ಎಂದು ಕಾ।। ಯೆಚೂರಿ ಹೇಳಿದರು.

ತ್ರಿಪುರಾ ಎಡರಂಗ ಸಮಿತಿ ಏರ್ಪಡಿಸಿದ್ದ, ಜನರಿಂದ ಕಿಕ್ಕಿರಿದಿದ್ದ ಸಮಾವೇಶದ ಅಧ್ಯಕ್ಷತೆಯನ್ನು ಹಿರಿಯ ಸಿಪಿಐ(ಎಂ) ನಾಯಕ ಬೀರೇಶ ದೇವವರ್ಮ ವಹಿಸಿದ್ದರು.

ಪ್ರಸ್ತಾವಿತ ಚಳವಳಿ ಎಡಪಕ್ಷಗಳ ರಾಷ್ಟ್ರವ್ಯಾಪ್ತಿ ಆಂದೋಲನದ ಭಾಗವಾಗಿದೆಯೆಂದು ಯೆಚೂರಿ ಹೇಳಿದರು. ಬಿಜೆಪಿಯ ರಾಷ್ಟ್ರ ವಿರೋಧಿ ಹಾಗೂ ಜನ ವಿರೋಧಿ ಕ್ರಮಗಳ ವಿರುದ್ಧದ ಹೋರಾಟದಲ್ಲಿ ನಾವು ವಿಫಲವಾದರೆ ಅದು ಅಲೆಯಾಗಿ ನಮ್ಮ ದೇಶವನ್ನು ಮುಕ್ತವಾಗಿ ಲೂಟಿ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಹಾದಿ ಮಾಡಿಕೊಡುತ್ತದೆ ಎಂದು ಎಚ್ಚರಿಸಿದರು.

ಎಡರಂಗ ಸಂಚಾಲಕ ಬೈದ್ಯನಾಥ ಮಜುಂದಾರ್, ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ಸಿಪಿಐ(ಎಂ) ನಾಯಕ ಪ್ರಶಾಂತ ಕಪಾಲಿ, ಫಾರ್ವರ್ಡ್‌ಬ್ಲಾಕ್ ಮುಖಂಡ ಬ್ರಜಗೋಪಾಲ್ ರಾಯ್ ಮತ್ತು ಆರ್‌ಎಸ್‌ಪಿ ನೇತಾರ ಸುದರ್ಶನ್ ಭಟ್ಟಾಚಾರ್ಜಿ ಅವರೂ ಸಮಾವೇಶದಲ್ಲಿ ಭಾಷಣ ಮಾಡಿದರು.

ದಲಿತರಿಗೆ ಭೂಮಿ ನೀಡಲು ಆಗ್ರಹ

ಪಟ್ಟಾ ಇದ್ದರೂ ಸಾಗುವಳಿ ಮಾಡಲು ಜಮೀನುದಾರರಿಂದ ಅಡ್ಡಿ ಎದುರಿಸುತ್ತಿರುವ ರೈತರಿಗೆ ಆಂಧ್ರ ಸರಕಾರ ತಕ್ಷಣವೇ ಜಮೀನನ್ನು ನೀಡಬೇಕು ಎಂದು ಕೃಷಿಕೂಲಿಗಾರರ ಸಂಘ ಮತ್ತು ಕಿಸಾನ್ ಸಭಾ ಒತ್ತಾಯಿಸಿದೆ.

ಕನಿಷ್ಠ ಕಾನೂನುಗಳನ್ನು ಸರಕಾರದ ಇಲಾಖೆಗಳೇ ಅನುಷ್ಠಾನಕ್ಕೆ ತರುತ್ತಿಲ್ಲ. ಇಂಥ ನಾಚಿಕೆಗೇಡಿನ ಶೋಷಣೆಯನ್ನು ಮುಚ್ಚಿಹಾಕಲು ಕೇಂದ್ರದಲ್ಲಿ ಸಿಕ್ಕಿರುವ ಹೊಸ ಗೆಳೆಯರ (ಬಿಜೆಪಿ ಕೂಟ) ಜೊತೆ ಸೇರಿ ಆಂಧ್ರ ಸರಕಾಢ ಧಬ್ಬಾಳಿಕೆಯ ಹಾದಿ ಹಿಡಿದಿದೆ. ಇದನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲ ಎಂದು ಉಭಯ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಒತ್ತಡ ತಂತ್ರಕ್ಕೆ ಎಡರಂಗ ವಿರೋಧ

ಕಾನೂನು ಮತ್ತು ಸುವ್ಯವಸ್ಥೆಯ ಪರಿಶೀಲನೆಗೆಂದು ಕೇಂದ್ರ ತಂಡಗಳನ್ನು ಕಳಿಸುವ ಮೂಲಕ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಮೇಲೆ ಒತ್ತಡ ತರುವ ಬಿಜೆಪಿ ನೇತೃತ್ವದ ಸರಕಾರದ ಇತ್ತೀಚಿನ ಕುಟಿಲೋಪಾಯಗಳನ್ನು ಎಡರಂಗದ ರಾಜ್ಯ ನಾಯಕತ್ವ ಪ್ರಬಲವಾಗಿ ಖಂಡಿಸಿದೆ. ಪಶ್ಚಿಮ ಬಂಗಾಳದ ಬಗ್ಗೆ ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾಣಿ ನೀಡಿರುವರೆನ್ನಲಾದ ಹೇಳಿಕೆಗಳನ್ನು ನಾಯಕತ್ವ ಪ್ರತಿಭಟಿಸಿದೆ.

ಪಶ್ಚಿಮ ಬಂಗಾಳ ಬಹುಶಃ ದೇಶದಲ್ಲೇ ಅತ್ಯಂತ ಉತ್ತಮ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಹೊಂದಿರುವ ರಾಜ್ಯವಾಗಿದೆ. ಅಂಥದ್ದರಲ್ಲಿ ರಾಜ್ಯಕ್ಕೆ ತರಾತುರಿಯಲ್ಲಿ ಪರಿಶೀಲನೆ ತಂಡಗಳನ್ನು ಕೇಂದ್ರ ಸರ್ಕಾರ ಏಕೆ ಕಳಿಸುತ್ತಿದೆಯೋ ಎಂಬುದು ತಮಗೆ ಗೊತ್ತಾಗುತ್ತಿಲ್ಲ ಎಂದು ಮುಖ್ಯಮಂತ್ರಿ ಜ್ಯೋತಿಬಸು ದಂಕುನಿಯಲ್ಲಿ ಬಹಿರಂಗ ಸಭೆಯೊಂದರಲ್ಲಿ ಮಾತನಾಡುತ್ತಾ ಆಶ್ಚರ್ಯ ವ್ಯಕ್ತಪಡಿಸಿದರು. ಸಂವಿಧಾನದ ರಾಜ್ಯಪಟ್ಟಿಗೆ ಸೇರಿರುವ ಯಾವುದೇ ವಿಷಯದ ಸಂಬಂಧ ಕೇಂದ್ರದ ಹಸ್ತಕ್ಷೇಪ ಸಹಿಸಿಕೊಳ್ಳಲಾಗುವುದಿಲ್ಲ ಎಂದು ಬಸುಎಚ್ಚರಿಸಿದರು.

ಗುಜರಾತಿನ ಬಿರುಗಾಳಿಯಲ್ಲಿ ಪ್ರಕಟಗೊಂಡ ಬಿಜೆಪಿಯ ನಿರ್ಲಕ್ಷತನ

ಕೇಂದ್ರದಲ್ಲಿ ಬಿ.ಜೆ.ಪಿ. ನೇತೃತ್ವದ ಸರಕಾರವಿದ್ದರೂ, ರಾಜ್ಯದಲ್ಲಿ ಬಿ.ಜೆ.ಪಿ.ಯ ಸರಕಾರವೇ ಇದ್ದರೂ ಇತ್ತೀಚಿನ ಸುಂಟರಗಾಳಿಯಿಂದ ಪೀಡಿತರಾದ ಗುಜರಾತಿನ, ಅದರಲ್ಲೂ ಕಾಂಡ್ಲಾ ಬಂದರು ನಗರದ ಜನಗಳ ಸಂಕಟ ಸಮಯದಲ್ಲಿ ಏನೂ ನೆರವು ದೊರೆಯಲಿಲ್ಲ; ಅವು ಅತ್ಯಂತ ನಿರ್ಲಕ್ಷತನ, ಬೇಜವಾಬ್ದಾರಿತನ ವನ್ನೇ ತೋರಿದವು ಎಂದು ಜನ ತಮ್ಮ ಸಂಕಟಗಳನ್ನು ತೋಡಿಕೊಳ್ಳುತ್ತಿದ್ದಾರೆ.

ಕಚ್ ಮತ್ತು ಕಾಂಡ್ಲಾದಲ್ಲಿ ಪರಿಹಾರ ಕಾರ್ಯ ಆರಂಭವಾದದ್ದೇ ಪ್ರಧಾನ ಮಂತ್ರಿಗಳು ಬಿರುಗಾಳಿ ಪೀಡಿತ ಪ್ರದೇಶಗಳಿಗೆ ಭೇಟಿ ಕೊಡುವ ದಿನದಂದು. ಈ ಬಿರುಗಾಳಿಯಿಂದ ಸುಮಾರು 30000 ಕೋಟಿ ರೂ.ಗಳ ನಷ್ಟವೆಂದು ಅಂದಾಜು ಮಾಡಲಾಗಿದೆ. ಆದರೆ ಸರಕಾರ ಇದನ್ನು 4000 ಕೋಟಿಗೆ ಸೀಮಿತಗೊಳಿಸಲು ಪ್ರಯತ್ನಿಸಿದೆ. ಸರಿಯಾದ ಸಂಖ್ಯೆ ಹೇಳಿದರೆ ಪರಿಹಾರಕ್ಕೆ ಹೆಚ್ಚು ಖರ್ಚು ಮಾಡಬೇಕಾದೀತೆಂಬ ಭಯ ಎಂದು ಜನರು ಹೇಳಿಕೊಳ್ಳುತ್ತಿದ್ದಾರೆ. ಈ 4000 ಕೋಟಿಯಲ್ಲೂ ಕೇಂದ್ರ ಕೊಟ್ಟಿದ್ದು ಕೇವಲ 30 ಕೋಟಿ ರೂ. ಪರಿಹಾರ ಮಾತ್ರ.

ಸತ್ತವರ ಸಂಖ್ಯೆಯ ಬಗ್ಗೆಯೂ ಇದೇ ಚೌಕಾಸಿ ನಡೆದಿದೆ. ಬಿ.ಜೆ.ಪಿ. ರಾಜ್ಯ ಸರಕಾರದ ಒಬ್ಬ ಮಂತ್ರಿಯ ಪ್ರಕಾರ ಸತ್ತವರ ಸಂಖ್ಯೆ ಕೇವಲ 200. ವಾಸ್ತವವಾಗಿ ಇದು 10 ಸಾವಿರವನ್ನು ಮೀರಿದೆ ಎಂದು ನಂತರ ಸರಕಾರವೂ ಒಪ್ಪಿಕೊಳ್ಳಬೇಕಾಯಿತು. ಕೇಂದ್ರ ಗೃಹ ಮಂತ್ರಿಗಳಂತೂ ಭಂಡತನದ ಹೇಳಿಕೆಯನ್ನೇ ನೀಡಿದ್ದಾರೆ - ಕೇವಲ ಕುಟುಂಬದ ಜನರು ಗುರುತಿಸಿದ ಶವಗಳನ್ನಷ್ಟೆ ಲೆಕ್ಕಕ್ಕೆ ತಗೊಳ್ಳಬೇಕಂತೆ. ಕೆಲವೆಡೆ ಇಡೀ ಇಡೀ ಓಣಿಗಳ ಜನರೇ ಬಿರುಗಾಳಿಗೆ ಬಲಿಯಾಗಿದ್ದಾರೆ. ಅಲ್ಲಿ ಅವರನ್ನು ಗುರುತಿಸಲು ಕೂಡಾ ಯಾರೂ ಉಳಿದಿಲ್ಲ. ಇವರೆಲ್ಲಾ ಸತ್ತಿಲ್ಲ ಎಂದು ಲೆಕ್ಕ ತಗೊಳ್ಳಬೇಕು!

ಜನಗಳ ಸಂಕಟ ಈ ರೀತಿ ಒಂದೆಡೆಯಾದರೆ ಬಿ.ಜೆ.ಪಿ. ಮುಖಂಡರು ಇದನ್ನು ಪರಸ್ಪರ ಸೇಡು ತೀರಿಸಿಕೊಳ್ಳಲು ಬಳಸಿದ್ದಾರೆ. ಕೇಂದ್ರದ ಬಿ.ಜೆ.ಪಿ. ಮಂತ್ರಿ ಕಾಶೀರಾಮ್ ರಾಣಾ ಮತ್ತು ರಾಜ್ಯದ ಮುಖ್ಯಮಂತ್ರಿ ಕೇಶುಭಾಯ್ ಪಟೇಲ್ ಇದರ ಮೇಲೆ ಪರಸ್ಪರ ಕಿತ್ತಾಡುತ್ತಿದ್ದದ್ದು ಜನ ಕಾಣಬೇಕಾಯಿತು.

ಬಿ.ಜೆ.ಪಿ.ಗೆ ಬಹಳ ನಿಕಟವಿರುವ, ಅವರ ಒಬ್ಬ ಪ್ರೀತಿಪಾತ್ರ ಅಧಿಕಾರಿಯಂತೂ "ಈ ಕಾಂಡ್ಲಾದ ನೆಲವನ್ನು ಆ ಹೊಲಸು ಬಡಜನ ಆಕ್ರಮಿಸಿಕೊಂಡಿದ್ದರು. ಈಗ ಅದು ಸ್ವಚ್ಛವಾಯಿತು, ಅಭಿವೃದ್ಧಿಗೆ ಬಾಗಿಲು ತೆರೆದಂತಾಯಿತು. ಇದು ಪರೋಕ್ಷವಾಗಿ ಬಂದಿರುವ ವರ" ಎನ್ನುವ ಅಮಾನವೀಯ ಮಟ್ಟಕ್ಕೆ ಇಳಿದಿದ್ದಾನೆ.

ಆತ ಎಂತಹ 'ಅಭಿವೃದ್ಧಿ' ಬಯಸುತ್ತಾನೆ ಎಂಬದೂ ಜನರಿಗೆ ಗೊತ್ತಿಲ್ಲದಿಲ್ಲ. ಮಾಫಿಯಾ ಗ್ಯಾಂಗ್‌ಗಳು ಮತ್ತು ಬಿ.ಜೆ.ಪಿ.ಯಲ್ಲಿನ ಅವರ ರಾಜಕೀಯ ಪೋಷಕರು ಈಗ ಬಂದರು ಪ್ರದೇಶದ ಮೇಲೆ ಆಸೆಗಣ್ಣುಗಳಿಂದ ನೋಡುತ್ತಿದ್ದಾರೆ. ಅದರ ಬೆಲೆ ಕನಿಷ್ಟ 650 ಕೋಟಿ ರೂ.ಗಳಾಗಬಹುದೆಂಬ ಅಂದಾಜು. ಹೆಣಗಳ ರಾಶಿಯನ್ನು ತಿಂದು ತೇಗುವ ರಣಹದ್ದುಗಳಿವರು ಎನ್ನುತ್ತಾರೆ ಸ್ಥಳೀಯ ಜನ.

ಹೋದವೆಲ್ಲಿಗೆ ರಾಮ ಇಟ್ಟಿಗೆಗಳು?

ಈ ಪ್ರಶ್ನೆಯನ್ನು ಕೇಳಿದವರು ಬೇರಾರು ಅಲ್ಲ. ಒಂದೊಮ್ಮೆ ಹಾಗೆ ನೋಡಿದರೆ ಸುಮಾರು 30 ವರ್ಷಗಳಷ್ಟು ದೀರ್ಘಕಾಲ ತಾವು ರಾಮಭಕ್ತರು ಎಂದು ಘೋಷಿಸಿ ಕೊಳ್ಳುವ ಹಿಂದೂ ಕೋಮುವಾದಿ ಶಕ್ತಿ ಗಳೊಂದಿಗೆ ಒಡನಾಡಿದ್ದ ಶಂಕರ ಸಿಂಗ್ ವಘೇಲಾ.

ಗುಜರಾತ್ ರಾಜ್ಯದ ಜನರನ್ನು ಸ್ವಲ್ಪ ಕಾಲ ಭಾರತೀಯ ಜನತಾ ಪಕ್ಷದ ಆಡಳಿತದ ಹಿಡಿತದಿಂದ ತಪ್ಪಿಸಿದ ಶಂಕರ್ ಸಿಂಗ್ ವಘೇಲಾ.

ಇವರು ಸ್ವಲ್ಪ ಕಾಲ ಬಿಜೆಪಿ ಗುಜರಾತ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿದ್ದರು. ಹಿಂದೆ ಈ ಪಕ್ಷದಿಂದ ಸಿಡಿದು ಹೋಗಿ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದರು. ರಾಷ್ಟ್ರೀಯ ಜನತಾ ಪಕ್ಷದ (ಆರ್.ಜೆ.ಪಿ) ಸ್ಥಾಪಕ ಅಧ್ಯಕ್ಷರು.

ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟುವುದಾಗಿ 90 ರ ದಶಕದ ಆರಂಭದಲ್ಲಿ ಭಾರೀ ಸದ್ದು ಗದ್ದಲ ಅಬ್ಬರದ ಪ್ರಚಾರದೊಂದಿಗೆ ದೇಶದ ಪ್ರತಿ ಹಳ್ಳಿಯಿಂದ ಬಿಜೆಪಿ ಸಂಗ್ರಹಿಸುತ್ತಿದ್ದ ರಾಮ ಇಟ್ಟಿಗೆಗಳು ಎಲ್ಲಿಗೆ ಹೋದವು ಎಂಬ ತಮ್ಮ ಪ್ರಶ್ನೆಗೆ ವಘೇಲಾ ಅವರೇ ನೀಡಿರುವ ಉತ್ತರವಿದು.

ಇಟ್ಟಿಗೆ ಸಂಗ್ರಹ ಕಣ್ಣೊರೆಸುವ ಒಂದು ಕ್ರಮ. ದೇಶದ ಮೂಲೆ ಮೂಲೆಯಲ್ಲಿ ಕೋಮು ದ್ವೇಷವನ್ನು ಹಬ್ಬಿಸಿ ಹಳ್ಳಿ ಮುಟ್ಟದಲ್ಲಿ ತನ್ನ (ಬಿಜೆಪಿ) ನೆಲೆಯನ್ನು ಬಲ ಗೊಳಿಸಿಕೊಳ್ಳುವುದು ಬಿಜೆಪಿಯ ನಿಜವಾದ ಉದ್ದೇಶವಾಗಿತ್ತು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನೀವು ರಾಜ್ಯಾದ್ಯಂತದಿಂದ ಸಂಗ್ರಹಿಸಿದ ಇಟ್ಟಿಗೆಗಳು ಎಲ್ಲಿಗೆ ಹೋದವು ಎಂಬ ಸುದ್ದಿಗಾರರ ಪ್ರಶ್ನೆಗೆ ವಘೇಲಾ ಉತ್ತರ:

ಆ ಇಟ್ಟಿಗೆಗಳನ್ನು ಅಯೋಧ್ಯೆಗೆ ಕಳಿಸಲೇ ಇಲ್ಲ . ರಾಜ್ಯ ರಾಜ್ಯಧಾನಿ ಗಾಂಧಿನಗರದ ಹೊರವಲಯದಲ್ಲಿರುವ ಪಂಚ ಮಹಾದೇವ ದೇವಸ್ಥಾನ ಬಳಿ ಅವುಗಳನ್ನು ರಾಶಿ ಹಾಕಲಾಗಿದೆ.

ಅಯೋಧ್ಯೆಯಲ್ಲಿ ವಾಸ್ತವವಾಗಿ ಕಲ್ಲಿನ ಮಂದಿರವನ್ನು ಕಟ್ಟಲು ತಯಾರಿ ನಡೆದಿದೆ. ಇಟ್ಟಿಗೆಗಳನ್ನು ಸಂಗ್ರಹಿಸಿದ್ದು ಅಲ್ಲಿಗೆ ಕಳಿಸಿದ್ದು ಅಲ್ಲವೇ ಅಲ್ಲ. ಜನರು ಇಟ್ಟಿಗೆಗಳನ್ನು ಮರೆತಿ ದ್ದಾರೆ. ಬಿಜೆಪಿ ಕೂಡ ಅದನ್ನು ಮರೆತಿದೆ ಎಂದರು.

ಸುಪ್ರೀಂ ಕೋರ್ಟಿನ ತೀರ್ಪನ್ನು ಸಾರಾಸಗಟು ಉಲ್ಲಂಘಿಸಿ, ಅಗೌರವಿಸಿ ಅಯೋಧ್ಯೆಯಲ್ಲಿ ರಾತ್ರೋರಾತ್ರಿ ದೇವಸ್ಥಾನ ವನ್ನು ಕಟ್ಟಲು ಬಿಜೆಪಿ ಯೋಚಿಸಿತ್ತು ಎಂಬ ಅಂಶವನ್ನು ಜೂನ್ 28 ರಂದು ಅಹಮದಾ ಬಾದಿನಲ್ಲಿ ಸುದ್ದಿಗೋಷ್ಠಿ ಯೊಂದರಲ್ಲಿ ವಘೇಲಾ ಬಹಿರಂಗ ಪಡಿಸಿದರು.

ವಘೇಲಾರ ಟೀಕೆ-ಟಿಪ್ಪಣಿಗಳಿಗೆ ಬಿಜೆಪಿ ಯಿಂದಾಗಲೀ, ವಿಶ್ವಹಿಂದೂ ಪರಿಷತ್ತಿ ನಿಂದಾಗಲೀ ಅಥವಾ ಸಂಘ ಪರಿವಾರದಿಂದ ಯಾವುದೇ ಒಬ್ಬ ನರಪಿಳ್ಳೆಯಿಂದಾಗಲೀ ಪ್ರತಿಕ್ರಿಯೆಯೇ ಬಂದಿಲ್ಲ. ಅಂದರೆ ಮೌನವು ಸಮ್ಮತಿಯ ಲಕ್ಷಣ.....

ಬಿಹಾರದಲ್ಲಿ ಭೂಮಿ ಹೋರಾಟವನ್ನು ದ್ವಿಗುಣಗೊಳಿಸಲು ಸಿದ್ಧತೆ

ಇದು ಪೂರ್ಣಿಯಾದ ಸಿ.ಪಿ.ಐ.(ಎಂ) ಶಾಸಕ ಅಜಿತ್ ಸರ್ಕಾರ್‌ರ ಹೇಯ ಹತ್ಯೆಯ ಹಿಂದಿನ ದಿನ ಅಂದರೆ ಜೂನ್ 13ರಂದು ಪಾಟ್ನಾದಲ್ಲಿ ನಡೆದ ರೈತರ ಮತ್ತು ಕೃಷಿ ಕೂಲಿಗಾರರ ಒಂದು ಸಮಾವೇಶದ ನಿರ್ಧಾರ. ಈಗ ರಾಜ್ಯದ 22 ಜಿಲ್ಲೆಗಳಲ್ಲಿ ಭೂಮಿ ಹೋರಾಟ ನಡೆಯುತ್ತಿದ್ದು ಅದನ್ನು 44 ಜಿಲ್ಲೆಗಳಿಗೆ ವಿಸ್ತರಿಸಲು ಈ ಸಮಾವೇಶ ಕರೆ ನೀಡಿತು. ಸುಮಾರು 300 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಜೂನ್ 26ರೊಳಗೆ ಹೋರಾಟದ ಹೊಸ ಸ್ಥಾನಗಳನ್ನು ಗುರುತಿಸಿ ಅಗಸ್ಟ್ 15 ರಂದು ಭೂಮಾಲಕರ ಕಾನೂನು ಬಾಹಿರ ಹಿಡಿತದಿಂದ ವಿಮೋಚನೆಗೊಳ್ಳುವ ಭೂಮಿತಿ ಮೀರಿದ ಸರ್ಕಾರಿ ಭೂಮಿಯನ್ನು ಹಾಗೂ ಭೂದಾನ ಭೂಮಿಯನ್ನು ಬಡರೈತರಲ್ಲಿ ಹಂಚುವ ಕೆಲಸ ಆರಂಭಿಸಬೇಕು ಎಂದು ಬಿಹಾರ ರಾಜ್ಯ ಕಿಸಾನ್‌ಸಭಾ ಹಾಗೂ ಬಿಹಾರ್ ರಾಜ್ಯ ಕೃಷಿ ಕೂಲಿಕಾರರ ಸಂಘ ಏರ್ಪಡಿಸಿದ್ದ ಈ ಸಮಾವೇಶ ನಿರ್ಧರಿಸಿದೆ. ಪಶ್ಚಿಮ ಬಂಗಾಳದ ಭೂಸುಧಾರಣಾ ಮಂತ್ರಿ ಸೂರ್ಯಕಾಂತ್ ಮಿಶ್ರ ಈ ಸಮಾವೇಶದ ಮುಖ್ಯ ಭಾಷಣಕಾರರಾಗಿದ್ದರು. ಅವರು ಭೂಸುಧಾರಣೆಗೂ ಉತ್ಪಾದಕತೆಗೂ ಇರುವ ನೇರ ಸಂಬಂಧವನ್ನು ಪಶ್ಚಿಮ ಬಂಗಾಳದ ಅನುಭವದ ಹಿನ್ನೆಲೆಯಲ್ಲಿ ವಿವರಿಸಿದರು.

1950ರಲ್ಲಿ ಬಿಹಾರದಲ್ಲಿ ಜಮೀಂದಾರಿ ನಿರ್ಮೂಲನಾ ಕಾಯ್ದೆಯೊಂದಿಗೆ ಭೂಸುಧಾರಣೆಯ ಪ್ರಯತ್ನ ಆರಂಭವಾಯಿತು. ಆದರೆ 1956ರವರೆಗೂ ಇದರ ಜ್ಯಾರಿಯಾಗಲಿಲ್ಲ. ಈ ಕಾನೂನಿನ ಲೋಪಗಳನ್ನು ಬಳಸಿಕೊಂಡು ಜಮೀಂದಾರರು ಸುಮಾರು 30 ಲಕ್ಷ ಎಕ್ರೆ ಜಮೀನಿನಿಂದ ರೈತರನ್ನು ಒಕ್ಕಲೆಬ್ಬಿಸಿ ಅದನ್ನು "ಖುದ್‌ಖಸ್ತ್" ಜಮೀನು ಎಂದು ಕರೆದರು. ಇದರ ವಿರುದ್ಧ ಆರಂಭವಾದದ್ದೇ ಚಾರಿತ್ರಿಕ ಬಖಶ್ತ್ ಆಂದೋಲನ. ಇದರಿಂದಾಗಿಯೇ 1955 ರಲ್ಲಿ ಸರಕಾರ ಒಂದು ಭೂಮಿತಿ ಕಾನೂನು ತರುವ ಪ್ರಯತ್ನ ಆರಂಭಿಸಬೇಕಾಯಿತು. ಇದನ್ನು ಮತ್ತೆ ಆರು ವರ್ಷಗಳ ಕಾಲ ತಡೆದು ಭೂದಾಖಲೆಗಳನ್ನು ತಮಗೆ ಅನುಕೂಲವಾಗುವಂತೆ ಮಾಡಿಕೊಳ್ಳುವಲ್ಲಿ ಭೂಮಾಲಕರು ಯಶಸ್ವಿಯಾದರು. 1973-74ನ್ನು ಭೂಸುಧಾರಣಾ ವರ್ಷವೆಂದು ಸಾರಲಾಗಿತ್ತು. ಆಗ ಸರಕಾರದ ಅಂದಾಜಿನ ಪ್ರಕಾರ 17 ಲಕ್ಷ ಎಕ್ರೆ ಭೂಮಿತಿ ಮೀರಿದ ಹೆಚ್ಚುವರಿ ಜಮೀನು ಇತ್ತು. ಆದರೆ 1990ರವರೆಗೂ ಸರಕಾರದ ವಶಕ್ಕೆ ಬಂದದ್ದು ಕೇವಲ 3.85 ಲಕ್ಷ ಎಕ್ರೆ. ಇದರಲ್ಲಿ ಹಂಚಿದ್ದು ಕೇವಲ 2.62 ಲಕ್ಷ ಎಕ್ರೆ. ಹೀಗೆ ಹಂಚಿದ ಭೂಮಿಯಲ್ಲಿ ಫಲಾನುಭವಿಗಳಿಗೆ ಸಿಕ್ಕಿದ್ದು 50% ಮಾತ್ರ. ಲಾಲೂ-ರಾಬ್ಡಿದೇವಿ ಆಳ್ವಿಕೆಯಲ್ಲಿ ಈ ಚಿತ್ರ ಬದಲಾಗಲಿಲ್ಲ. ಬದಲಿಗೆ ಭೂ ಹೋರಾಟಗಳ ಮೇಲೆ ಹೊಸ-ಹೊಸ ಧಾಳಿ ಬರಲಾರಂಭಿಸಿತು. ಕಾಮ್ರೇಡ್ ಅಜಿತ್ ಸರ್ಕಾರ ಹತ್ಯೆ ಇದರಲ್ಲಿ ಇತ್ತೀಚಿನದು.

ಲೋಕಸಂಚಾರ

ಅಮೇರಿಕದ ದಿಗ್ಬಂಧಕ್ಕೆ ನಿರ್ಲಕ್ಷ : ರಶ್ಯಾದಿಂದ ಎರಡು ಅಣು ರಿಯಾಕ್ಟರುಗಳ ಪೂರೈಕೆಗೆ ಒಪ್ಪಂದ

ಅಮೇರಿಕ ಭಾರತದ ಮೇಲೆ ಅಣ್ವಸ್ತ್ರ ಪರೀಕ್ಷಣೆಯ ನಂತರ ವಿಧಿಸಿರುವ ದಿಗ್ಬಂಧನ ನಿರ್ಲಕ್ಷಿಸಿ ರಶ್ಯಾ ಸಾವಿರ ಮೆಗಾವಾಟ್‌ಗಳ ಎರಡು ಅಣು ರಿಯಾಕ್ಟರುಗಳನ್ನು ಪೂರೈಸಲು ಭಾರತದೊಂದಿಗೆ ಒಪ್ಪಂದ ಮಾಡಿಕೊಂಡಿದೆ. 250 ಕೋಟಿ ಡಾಲರುಗಳ ಈ ಒಪ್ಪಂದಕ್ಕೆ ನವದೆಹಲಿಯಲ್ಲಿ ರಶ್ಯಾದ ಅಣು ಶಕ್ತಿ ಮಂತ್ರಿ ಯೆವಗೆನಿ ಅಡಾಮೊವ್ ಮತ್ತು ಭಾರತದ ಅಣುಶಕ್ತಿ ಕಮಿಶನ್ ಅಧ್ಯಕ್ಷ ಚಿದಂಬರಂ ಸಹಿ ಹಾಕಿದರು. ಈ ಒಪ್ಪಂದದ ಪ್ರಕಾರ ರಶ್ಯಾ ಪೂರೈಸುವ ಅಣು ರಿಯಾಕ್ಟರುಗಳನ್ನು ತಮಿಳುನಾಡಿನ ಕೂಡುಂಕುಲಂನಲ್ಲಿ ಸ್ಥಾಪಿಸಲಾಗುವುದು. ಈ ಒಪ್ಪಂದ ಭಾರತದ ಮೇಲೆ ಪಾಶ್ಚಿಮಾತ್ಯ ದೇಶಗಳು ವಿಧಿಸಿರುವ ಅಲಿಖಿತ ಅಣು ತಂತ್ರಜ್ಞಾನ ದಿಗ್ಬಂಧನವನ್ನು ಮುರಿದಿದೆ.

ಅಮೇರಿಕ ಈ ಒಪ್ಪಂದವನ್ನು ಖಂಡಿಸಿದೆ. ಇದು 1992ರ ಅಣು ಪೂರೈಕೆಗಾರರ ಗುಂಪಿನ ಒಪ್ಪಂದ ಮತ್ತು ಇತ್ತೀಚಿನ ಗುಂಪು-8 (ಜಿ8) ನಿರ್ಣಯವನ್ನು ಉಲ್ಲಂಘಿಸಿದೆ ಎಂದು ಅಮೇರಿಕ ರಶ್ಯಾಕ್ಕೆ ನೆನಪಿಸಿದೆ. ಈ ಒಪ್ಪಂದದ ಬಗ್ಗೆ ಮಾತುಕತೆ, ಈ ಎರಡು ನಿರ್ಣಯಗಳನ್ನು ಬಹಳ ಹಿಂದೆ ನಡೆಸಲಾಗಿತ್ತು. ಅಲ್ಲದೆ ಈ ಎರಡು ಅಣು ರಿಯಾಕ್ಟರುಗಳು ಅಂತರಾಷ್ಟ್ರೀಯ ಅಣು ಶಕ್ತಿ ಕಮಿಶನ್ (ಐ.ಎ.ಇ.ಎ) ನ ಪರೀಕ್ಷೆಗೆ ಒಳಪಟ್ಟಿರುತ್ತದೆ ಎಂದು ರಶ್ಯಾ ಒಪ್ಪಂದವನ್ನು ಸಮರ್ಥಿಸಿಕೊಂಡಿದೆ.

ಇದಲ್ಲದೆ ಭಾರತದ ರಕ್ಷಣಾ ಮಂತ್ರಿಯ ಉನ್ನತ ಮಟ್ಟದ ತಂಡದ ಒಂದು ವಾರದ ಭೇಟಿ ನಂತರ ಮಾಡಿಕೊಳ್ಳಲಾದ ಒಪ್ಪಂದ ಸಹ ಅಮೆರಿಕದ ದಿಗ್ಬಂಧನವನ್ನು ನಿರ್ಲಕ್ಷಿಸಿದೆ. ಇಂಡೋ-ರಶ್ಯಾ ಜಂಟಿ ಕಾರ್ಯತಂಡ SU-30 ಆಧುನಿಕ ಯುದ್ಧ ವಿಮಾನ SU-30 MKI ದ ಮುಂದಿನ ಪೂರೈಕೆ ಬಗ್ಗೆ ಮಾತುಕತೆ ನಡೆಸಿ ಆ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿತು. 1996 ರಲ್ಲಿ ಸಹಿ ಹಾಕಲಾದ ನಲ್ವತ್ತು SU-30 MKI ಯುದ್ಧವಿಮಾನಗಳ ಪೂರೈಕೆ ಬಗೆಗಿನ 6500 ಕೋಟಿ ರೂ.ಗಳ ಒಪ್ಪಂದದ ಜಾರಿಯನ್ನು ಈ ತಂಡ ಪರಿಶೀಲಿಸಿತು. ಈಗಾಗಲೇ 8 ವಿಮಾನಗಳ ಪೂರೈಕೆ ಆಗಿದ್ದು ಸದ್ಯದಲ್ಲೇ ಪೂರೈಸಲಾಗುವ 10 ವಿಮಾನಗಳ ಎಲೆಕ್ಟ್ರಾನಿಕ್ಸ್ ಉಪಕರಣಗಳ ಬಗ್ಗೆ ತಾಂತ್ರಿಕ ಮಾತುಕತೆ ನಡೆದು ನಿರ್ಣಯ ಕೈಗೊಳ್ಳಲಾಯಿತು. ಈ ಒಪ್ಪಂದದ ಪ್ರಕಾರ ನಲ್ವತ್ತು ವಿಮಾನಗಳ ಪೂರೈಕೆ 2001 ರೊಳಗೆ ಆಗುತ್ತದೆ. ಅಮೆರಿಕದ ದಿಗ್ಬಂಧನ G-8 ನಿರ್ಣಯದಿಂದ ಈ ಪೂರೈಕೆಗೆ ಏನೂ ವ್ಯತ್ಯಾಸವಾಗುವುದಿಲ್ಲ ಎಂದು ರಶ್ಯನ್ ತಂಡ ಸ್ಪಷ್ಟಪಡಿಸಿತು.

ವಿಮಾನಗಳ ಪೂರೈಕೆ ಮುಂದುವರಿಸುವ ರಶ್ಯಾದ ನಿರ್ಣಯಗಳನ್ನು ಅಮೇರಿಕ ಖಂಡಿಸಿ 'ದುರದೃಷ್ಟಕರ' ಎಂದಿದೆ. •

ಅಥೆನ್ಸ್‌ನಲ್ಲಿ ಕಮ್ಯುನಿಸ್ಟ್ ಪಕ್ಷಗಳ ಅಂತರಾಷ್ಟ್ರೀಯ ಸಭೆ

ಮೇ 22 ರಿಂದ 24 ರವರೆಗೆ ಗ್ರೀಸ್ ಕಮ್ಯುನಿಸ್ಟ್ ಪಾರ್ಟಿ ಅಥೆನ್ಸ್‌ನಲ್ಲಿ ಕಮ್ಯುನಿಸ್ಟ್ ಪಕ್ಷಗಳ ಅಂತರಾಷ್ಟ್ರೀಯ ಸಭೆಯೊಂದನ್ನು ಏರ್ಪಡಿಸಿತ್ತು. ಕಮ್ಯುನಿಸ್ಟ್ ಮಾನಿಫೆಸ್ಟೋದ 150ನೇ ವಾರ್ಷಿಕೋತ್ಸವದ ಅಂಗವಾಗಿ ಇದನ್ನು ನಡೆಸಲಾಗಿತ್ತು. ಸಭೆಗೆ 'ಪ್ರಸ್ತುತ ಪರಿಸ್ಥಿತಿಯಲ್ಲಿ ಕಮ್ಯುನಿಸ್ಟ್ ಪಕ್ಷಗಳು' ಎಂಬ ವಿಷಯ ನಿಗದಿಪಡಿಸಲಾಗಿತ್ತು. ಈ ವರ್ಷ ಗ್ರೀಕ್ ಕಮ್ಯುನಿಸ್ಟ್ ಪಕ್ಷದ 80ನೇ ವಾರ್ಷಿಕೋತ್ಸವ ಸಹ. ಈ ಸಭೆಯಲ್ಲಿ 50 ದೇಶಗಳಿಂದ ಬಂದ 57 ಕಮ್ಯುನಿಸ್ಟ್ ಮತ್ತು ಕಾರ್ಮಿಕ ವರ್ಗದ ಪಕ್ಷಗಳು ಭಾಗವಹಿಸಿದ್ದವು. ಸಿಪಿಐ(ಎಂ) ಪರವಾಗಿ ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಸಭೆಯಲ್ಲಿ ಭಾಗವಹಿಸಿದ್ದರು.

ಇಂದಿನ ಪರಿಸ್ಥಿತಿ ಬಂಡವಾಳಶಾಹಿ ಬಗ್ಗೆ ಕಮ್ಯುನಿಸ್ಟ್ ಮಾನಿಫೆಸ್ಟೋ ಮತ್ತು ಇತರ ಕೃತಿಗಳಲ್ಲಿ ಮಾರ್ಕ್ಸ್-ಎಂಗೆಲ್ಸ್ ವಿಶ್ಲೇಷಣೆಯನ್ನು ಸಮರ್ಥಿಸುತ್ತದೆ. ಈ ವ್ಯವಸ್ಥೆಯನ್ನು ಕಿತ್ತೊಗೆಯಲು ಮಾನಿಫೆಸ್ಟೋದ ಮನುಷ್ಯನಿಂದ ಮನುಷ್ಯನ ಶೋಷಣೆ ಕಿತ್ತೊಗೆಯುವ ಮೂಲ ಗುರಿಯ ಹಾಗೂ ಇದಕ್ಕಾಗಿ ವಿಶ್ವ ಕಾರ್ಮಿಕರ ಐಕ್ಯತೆಯ ಸಂದೇಶವನ್ನು ಕಾರ್ಮಿಕ ವರ್ಗದ ಬಳಿ ತೆಗೆದುಕೊಂಡು ಹೋಗುವ ತುರ್ತಿನ ಬಗ್ಗೆ ಹಲವು ಪ್ರತಿನಿಧಿಗಳು ಒತ್ತಿ ಹೇಳಿದರು.

ಬಹುರಾಷ್ಟ್ರೀಯ ಬಂಡವಾಳ, ಸಾಮ್ರಾಜ್ಯಶಾಹಿಯ ಮಿಲಿಟರಿ ಬಲ, ಧಾರ್ಮಿಕ ಮೂಲಭೂತವಾದ, ಜನಾಂಗೀಯವಾದದ ಉತ್ಕರ್ಷ ಎದುರಿಸಲು ಕಮ್ಯುನಿಸ್ಟ್ ಪಕ್ಷಗಳ ನಡುವೆ ಪ್ರಾದೇಶಿಕ ಹಾಗೂ ಜಾಗತಿಕ ಮಟ್ಟದಲ್ಲಿ ಜಂಟಿ ಕಾರ್ಯಾಚರಣೆ ಸಂಯೋಜನೆಯ ಅವಶ್ಯಕತೆ ಬಗ್ಗೆ ಹಲವಾರು ಪ್ರತಿನಿಧಿಗಳು ಒತ್ತಿ ಹೇಳಿದರು. ಪ್ರಾದೇಶಿಕ ಹಾಗೂ ಜಾಗತಿಕ ಮಟ್ಟದಲ್ಲಿ ಎಲ್ಲಾ ಪ್ರಗತಿಪರ ಸಾಮ್ರಾಜ್ಯಶಾಹಿ-ವಿರೋಧಿ, ಎಡ ಶಕ್ತಿಗಳನ್ನು ಒಗ್ಗೂಡಿಸುವ ಮಹತ್ವದ ಬಗೆಗೆ ಆಸ್ಥೆ ಪ್ರತಿನಿಧಿಗಳಲ್ಲಿ ಕಂಡು ಬಂತು.

ಬಂಡವಾಳಶಾಹಿ ದಬ್ಬಾಳಿಕೆ ವಿರೋಧಿಸುತ್ತಿರುವ ಕಮ್ಯುನಿಸ್ಟ್ ಪಕ್ಷಗಳು, ಮತ್ತು ಪ್ರಗತಿಪರರ ಜತೆ ಸೌಹಾರ್ದತೆ ಬಗ್ಗೆ ಹಲವು ಕಾರ್ಯಕ್ರಮಗಳನ್ನು ಚರ್ಚಿಸಲಾಯಿತು. ಕ್ಯೂಬಾ, ಉತ್ತರ ಕೋರಿಯಾ, ಪ್ಯಾಲೆಸ್ಟೈನ್ ಮತ್ತು ಇತರ ಜನಗಳು ಸಾಮ್ರಾಜ್ಯಶಾಹಿ ದಿಗ್ಬಂಧನ, ಮಿಲಿಟರಿ ಒತ್ತಡ ಎದುರಿಸುತ್ತಿದ್ದು, ಅವರ ಜತೆ ಸೌಹಾರ್ದತೆ ಬಲಪಡಿಸುವ ವಿಧಾನಗಳ ಬಗೆಗೂ ಚರ್ಚಿಸಲಾಯಿತು. 'ಹೊಸ ನಾಟೋ'ದ ವಿರುದ್ಧ ಪ್ರಚಾರ-ಪ್ರಕ್ಷೋಭೆಯ ಕಾರ್ಯಕ್ರಮ ಮತ್ತು 'ಬಂಡವಾಳ ಹೂಡಿಕೆ ಬಗ್ಗೆ ಬಹುಪಕ್ಷೀಯ ಒಪ್ಪಂದಗಳು' ವಿಷಯದ ಬಗ್ಗೆ ಮುಂದಿನ ಕಮ್ಯುನಿಸ್ಟ್ ಪಕ್ಷಗಳ ವಿಸ್ತೃತ ಸಭೆ ಬಗೆಗೆ ನಿರ್ಣಯ ಕೈಗೊಳ್ಳಲಾಯಿತು.

ಕ್ಲಿಂಟನ್‌ರ ಚೀನಾ ಭೇಟಿ

ಅಮೆರಿಕದ ಅಧ್ಯಕ್ಷ ಕ್ಲಿಂಟನ್ ಚೀನಾಕ್ಕೆ 9 ದಿನಗಳ ಭೇಟಿ ಈಗಾಗಲೇ ಆರಂಭವಾಗಿದೆ. ಕ್ಲಿಂಟನ್‌ರ ಅಧ್ಯಕ್ಷತೆಯಲ್ಲೇ ಈ ಭೇಟಿ, ಯಾವುದೇ ದೇಶಕ್ಕೆ ಅತ್ಯಂತ ದೀರ್ಘ ಭೇಟಿ. ಕ್ಲಿಂಟನ್ನರ ಭೇಟಿಗೆ ನಾಲ್ಕು ಬೋಯಿಂಗ್-747 ವಿಮಾನಗಳು ಉಪಯೋಗವಾಗಲಿದ್ದು, ಸುಮಾರು ಸಾವಿರ ಜನ ಹೋಗಿದ್ದಾರೆ. ಇದರಲ್ಲಿ ಮಂತ್ರಿಗಳು, ಇಲಾಖೆ ಕಾರ್ಯದರ್ಶಿಗಳು, ಸಲಹೆಗಾರರು, ಪಾರ್ಲಿಮೆಂಟ್ ಸದಸ್ಯರು, ಪತ್ರಕರ್ತರು, ಕ್ಯಾಮರಾಮೆನ್‌ಗಳು, ಭದ್ರತಾ ಸಿಬ್ಬಂದಿ ಸೇರಿದ್ದಾರೆ. ಇದಲ್ಲದೆ 60 ಟನ್‌ಗಳಷ್ಟು ಸಂಪರ್ಕ ಉಪಕರಣಗಳು, ಭದ್ರತಾ ಕ್ರಮಕ್ಕೆ ಬೇಕಾದ ಉಪಕರಣಗಳು ಪ್ರತ್ಯೇಕವಾಗಿ ಬಿಜಿಂಗ್‌ಗೆ ಹೋಗಲಿವೆ.

ಅಮೆರಿಕಾದಲ್ಲಿ ವಿರೋಧಿ ಪಕ್ಷ ರಿಪಬ್ಲಿಕನ್ ಪಕ್ಷ ಎಬ್ಬಿಸಿರುವ ಭಾರೀ ವಿವಾದದ ಹಿನ್ನೆಲೆಯಲ್ಲಿ ಹಾಗೂ ಇತ್ತೀಚಿನ ಭಾರತ-ಪಾಕಿಸ್ತಾನ ಅಣ್ವಸ್ತ್ರ ಪರೀಕ್ಷಣೆ ಹಿನ್ನೆಲೆಯಲ್ಲಿ ಇದು ಜಾಗತಿಕ ಮಹತ್ವದ್ದಾಗಲಿದೆ. ಪರಸ್ಪರರನ್ನು ತಮ್ಮ ಅಣ್ವಸ್ತ್ರ ಕ್ಷಿಪಣಿಗಳಿಗೆ ಗುರಿ ಮಾಡದಿರುವ ಒಪ್ಪಂದ, ಈ ಭೇಟಿಯಲ್ಲಿ ನಿರೀಕ್ಷಿತ ಒಪ್ಪಂದಗಳಲ್ಲೊಂದು, ಅಮೆರಿಕದ ರಫ್ತಿಗೆ ಹೆಚ್ಚುತ್ತ ಉತ್ತೇಜನ ನೀಡುವ ಬಗ್ಗೆ ಚೀನಾದ ಕ್ರಮಗಳು, ಭಾರತ-ಪಾಕಿಸ್ತಾನ ಅಣ್ವಸ್ತ್ರ ಪರೀಕ್ಷಣೆಯಿಂದ ಉದ್ಭವಿಸಿರುವ ಪ್ರಾದೇಶಿಕ ಪರಿಸ್ಥಿತಿ-ಇತರ ಚರ್ಚಿತ ವಾಗುವ ವಿಷಯಗಳು. ಅಧ್ಯಕ್ಷ ಕ್ಲಿಂಟನ್ ಚೀನಾದ 'ಮಾನವ ಹಕ್ಕು'ಗಳ ಬಗ್ಗೆ ತರಲೆ ಎಬ್ಬಿಸುವುದಂತೂ ಇದ್ದೇ ಇದೆ.

ಅಮೇರಿಕ 'ತೈವಾನ್'ಗೆ ಯಾವುದೇ ರೀತಿಯ ಮಿಲಿಟರಿ, ರಾಜತಾಂತ್ರಿಕ ಬೆಂಬಲ ಕೊಡದಿರುವ ಬಗ್ಗೆ ಆಶ್ವಾಸನೆ ಕೊಡಬೇಕೆಂದು ಚೀನಾ ಒತ್ತಾಯಿಸಲಿದೆ.

ಚೀನಾದ 'ಮಾನವ ಹಕ್ಕು'ಗಳ ಪರಿಸ್ಥಿತಿ, ಕಳೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಕ್ಲಿಂಟನ್‌ಗೆ ಚೀನಾ ಹಣಕಾಸಿನ ನೆರವು ನೀಡಿದೆ. ಇದಕ್ಕೆ ಪ್ರತಿಯಾಗಿ ಕ್ಲಿಂಟನ್ ಅಮೆರಿಕನ್ ಬಾಹ್ಯಾಕಾಶ ತಂತ್ರ ಜ್ಞಾನ ಕೊಟ್ಟಿದ್ದಾರೆ ಎಂಬ ಬಗ್ಗೆ ಹುಯಿಲೆಬ್ಬಿಸಿ ವಿರೋಧಿ ರಿಪಬ್ಲಿಕನ್ ಪಕ್ಷ ಚೀನಾ ಭೇಟಿ ರದ್ದು ಮಾಡಬೇಕೆಂಬ ಭಾರಿ ಗಲಾಟೆ ಎಬ್ಬಿಸಿತ್ತು. ಅಧ್ಯಕ್ಷ ಕ್ಲಿಂಟನ್ ಅದನ್ನು ನಿರ್ಲಕ್ಷಿಸಿ ಈ ಭೇಟಿಯನ್ನು ಮುಂದುವರಿಸಿದ್ದಾರೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ವರ್ಗ ಹೋರಾಟದ ವೀರ ಯೋಧ

ಕಾಮ್ರೇಡ್ ಅಜಿತ್ ಸರ್ಕಾರ್

ಜೂನ್ 14ರಂದು ಭೂಮಾಲಕರು, ಕ್ರಿಮಿನಲ್‌ಗಳು, ಕೋಮುವಾದಿ ಶಕ್ತಿಗಳು ಹಾಗೂ ಭ್ರಷ್ಟ ಅಧಿಕಾರಶಾಹಿಯ ದುಷ್ಟ ಕೂಟದ ಅಮಾನುಷ ಕೃತ್ಯಕ್ಕೆ ಬಲಿಯಾದ ಕಾಮ್ರೇಡ್ ಅಜಿತ್ ಸರ್ಕಾರ್ 1949ರಲ್ಲಿ ಜನಿಸಿದವರು. ದೇಶದ ವಿಭಜನೆಯ ನಂತರ ಅವರ ತಂದೆ ಜೆ.ಸಿ. ಸರ್ಕಾರ್ ಆಗಿನ ಪೂರ್ವ ಬಂಗಾಳದಿಂದ ಪೂರ್ಣಿಯಾಕ್ಕೆ ವಲಸೆ ಬಂದು ರಾಣಿ ಪತಾರಾ ಎಂಬ ಹಳ್ಳಿಯಲ್ಲಿ ನೆಲೆನಿಂತರು. ಅಜಿತ್ ಇಲ್ಲೇ ಹುಟ್ಟಿ, ಬೆಳೆದರು.

ರಾಷ್ಟ್ರೀಯ ಆಂದೋಲನದಲ್ಲಿ ಸಕ್ರಿಯವಾಗಿದ್ದ ಹಾಗೂ ಗಾಂಧೀಜಿಯ ಅನುಯಾಯಿಗಳಾಗಿದ್ದ ಕುಟುಂಬದಿಂದ ಬಂದ ಕಾಮ್ರೇಡ್ ಅಜಿತ್ ಸರ್ಕಾರ್ ಕೂಡಾ ರಾಜಕೀಯಕ್ಕೆ ಧುಮುಕಿದರು. 1974ರಲ್ಲಿ ಜಯಪ್ರಕಾಶ್ ನಾರಾಯಣ್ ರವರು ಆರಂಭಿಸಿದ ಆಂದೋಲನದಲ್ಲಿ ಪೂರ್ಣಿಯದಲ್ಲಿ ನೇತೃತ್ವದ ಪಾತ್ರ ವಹಿಸಿದರು. ಆದರೆ ಬೇಗನೇ ಅವರಿಗೆ ಭ್ರಮ ನಿರಸನವಾಯಿತು. ತನ್ನ ಜಿಲ್ಲೆಯಲ್ಲಿನ ನಗ್ನ ಪಾಳೆಯಗಾರಿ ದಮನ ಹಾಗೂ ಶೋಷಣೆಯನ್ನು ಕಂಡ ಅವರು ಸಿ.ಪಿ.ಐ. (ಎಂ)ಗೆ ಬಂದರು. ಇಡೀ ಜಿಲ್ಲೆಯಲ್ಲಿ ಓಡಾಡಿ ಯುವಜನರನ್ನು ಸಾಮಾಜಿಕ ಬದಲಾವಣೆಗೆ ಹುರಿದುಂಬಿಸಲಾರಂಭಿಸಿದರು. 1982ರಲ್ಲಿ ಅವರು ಸಿ.ಪಿ.ಐ.(ಎಂ) ರಾಜ್ಯ ಸಮಿತಿಗೆ ಆರಿಸಲ್ಪಟ್ಟರು. ಕೊನೆಯ ವರೆಗೂ ಆ ಸ್ಥಾನದಲ್ಲಿ ಮುಂದುವರೆದರು.

ಪೂರ್ಣಿಯಾದಿಂದ ಅವರು ಮೊದಲ ಬಾರಿಗೆ 1986ರ ವಿಧಾನ ಸಭೆಗೆ ಚುನಾಯಿತರಾದರು. ಅಂದಿನಿಂದ ಕೊನೆಯ ವರೆಗೂ ಈ ಕ್ಷೇತ್ರವನ್ನು ಪ್ರತಿನಿಧಿಸಿದರು. ಬೇಗನೇ ಅವರು ಜನಗಳಿಗಾಗಿ ಯಾವುದೇ ರಾಜಿ ಗಿಳಿಯದ ಹೋರಾಟಗಾರರೆಂದು ಖ್ಯಾತಿ ಪಡೆದರು. ಪೂರ್ಣಿಯ ಜಿಲ್ಲೆಯಲ್ಲಿ ಎಲ್ಲೆಲ್ಲಿ ಜನಗಳ ದಮನ ನಡೆಯುತ್ತಿತ್ತೋ ಅಲ್ಲೆಲ್ಲಾ ಕಾಮ್ರೇಡ್ ಅಜಿತ್ ಸರ್ಕಾರ್ ಹಾಜರಾಗುತ್ತಿದ್ದರು.

ಸಿ.ಪಿ.ಐ(ಎಂ), ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿಕೂಲಿಕಾರರ ಸಂಘ ಇತರ ಎಡಪಕ್ಷಗಳು ಒಗ್ಗೂಡಿ ಒಂದು ಭೂಹೋರಾಟ ಆರಂಭಿಸಲು ನಿರ್ಧರಿಸಿದಾಗ ಕಾಮ್ರೇಡ್ ಸರ್ಕಾರ್ ತನ್ನನ್ನು ಪೂರ್ಣವಾಗಿ ಅದಕ್ಕೆ ಸಮರ್ಪಿಸಿಕೊಂಡರು. ಈ ಹೋರಾಟ ಸುಮಾರು 22 ಸ್ಥಳಗಳಲ್ಲಿ 10 ಸಾವಿರ ಎಕ್ರೆ ಭೂಮಿಯನ್ನು ಕಾನೂನು ಬಾಹಿರ ಭೂಮಾಲಕ ಆಕ್ರಮಣದಿಂದ ಬಿಡುಗಡೆ ಗೊಳಿಸುವಲ್ಲಿ ಯಶಸ್ವಿಯಾಯಿತು. ಈ ಭೂಮಿಯ ಮೇಲೆ ಬಡಜನರು ಸಾವಿರಾರು ಗುಡಿಸಲುಗಳನ್ನು ಹಾಕಿ ಕೊಂಡರು. ತೀವ್ರ ದಮನವನ್ನು ಎದುರಿಸಿದರು. 6-7 ಕಾರ್ಯಕರ್ತರು ಹುತಾತ್ಮರಾದರು. ಕಾಮ್ರೇಡ್ ಸರ್ಕಾರ್ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಜೈಲಿನಲ್ಲಿಡಲಾಯಿತು. ಅವರ ವಿರುದ್ಧ ಅತ್ಯಂತ ಕೆಟ್ಟ ರೀತಿಯಲ್ಲಿ ಅಪಪ್ರಚಾರ ನಡೆಯಿತು. ಆದರೆ ಅವರ ಹುಮ್ಮಸ್ಸನ್ನು ಮುರಿಯಲು ಅವರಿಗಾಗಲಿಲ್ಲ. ಪಾಳೆಯಗಾರಿ ದಮನದ ವಿರುದ್ಧ ಮಾತ್ರವಲ್ಲ, ಸಾಮಾಜಿಕ ಅನ್ಯಾಯದ ವಿರುದ್ಧವೂ, ಲಿಂಗ ಪಕ್ಷಪಾತದ ವಿರುದ್ಧವೂ, ಜಾತಿ ಅತ್ಯಾಚಾರಗಳ ವಿರುದ್ಧವೂ ಹೋರಾಡಿದರು. ಕೋಮು ವಾದಿ ಶಕ್ತಿಗಳ ವಿರುದ್ಧವೂ ಜನಗಳನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಸಿ ಅಲ್ಪ ಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡಲು ಶ್ರಮಿಸಿದರು ತನ್ನ ಜೀವನದುದ್ದಕ್ಕೂ ಕಾಮ್ರೇಡ್ ಅಜಿತ್ ಸರ್ಕಾರ್ ಭೂಮಾಲಕರು ಹಾಗೂ ಅಧಿಕಾರಶಾಹಿಗಳ ಕೃಪಾ ಪೋಷಣೆಯಲ್ಲಿರುವ ಕ್ರಿಮಿನಲ್‌ಗಳ ವಿರುದ್ಧ ಹೋರಾಡಬೇಕಾಯಿತು. ಕಾಮ್ರೇಡ್ ಸರ್ಕಾರ್‌ರವರ ಹತ್ಯೆಯ ಸುದ್ದಿ ಕೇಳಿ ಬೀದಿಗಿಳಿದ ಅಪಾರ ಜನಸ್ತೋಮ, ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ವಿವಿಧ ಸಮಾರಂಭಗಳಲ್ಲಿ ಜನಗಳ ಭಾಗವಹಿಸುವಿಕೆಯನ್ನು ಕಂಡರೆ ವರ್ಗ ಹೋರಾಟದ ಈ ವೀರಯೋಧನನ್ನು ಹತ್ಯೆ ಮಾಡಿದ ಅಪವಿತ್ರ ಕೂಟದ ಬಗ್ಗೆ ಜನಗಳಲ್ಲಿ ಎಂತಹ ತೀವ್ರ ಕೋಪ ಇದೆ ಎಂದು ಸ್ಪಷ್ಟವಾಗುತ್ತದೆ.

ಎನ್.ಟಿ.ಸಿ. ಮಿಲ್ಲುಗಳನ್ನು ಆಧುನೀಕರಿಸಿ ನಡೆಸುವ ವಾಜಪೇಯಿಯವರ ವಚನ ಎಲ್ಲಿ ಹೋಯಿತು?

ಜುಲೈ15: ಸಂಸತ್ತಿನೆದುರು ಎನ್.ಟಿ.ಸಿ. ಕಾರ್ಮಿಕರ ಬೃಹತ್ ಮತಪ್ರದರ್ಶನ

ಹಲವು ಎನ್.ಟಿ.ಸಿ. ಗಿರಣಿಗಳನ್ನು ಮುಚ್ಚಿಬಿಡುವ ಪ್ರಸಕ್ತ ಸರಕಾರದ ಪ್ರಯತ್ನಗಳನ್ನು ಖಂಡಿಸುತ್ತಾ ದೇಶಾದ್ಯಂತ ಇರುವ 125 ಗಿರಣಿಗಳ ಕಾರ್ಮಿಕರು ಇದಕ್ಕೆ ಭಾರೀ ಪ್ರತಿಭಟನೆ ವ್ಯಕ್ತಪಡಿಸಲು ನಿರ್ಧರಿಸಿದ್ದಾರೆ. 1998 ರ ಬಜೆಟ್‌ನಲ್ಲಿ ಎನ್.ಟಿ.ಸಿ. ಗಿರಣಿಗಳ ಪುನರುಜ್ಜೀವನಕ್ಕಾಗಿ ಒಂದು ಪೈಸೆಯನ್ನೂ ಕೊಡದಿರುವುದು ಈ ಸರಕಾರದ ಸಾರ್ವಜನಿಕ ವಲಯ-ವಿರೋಧಿ ನಿಲುವಿನ ಪ್ರತೀಕ. ಮುಂದಿನ 2-3 ತಿಂಗಳಿಗೆ ಕಾರ್ಮಿಕರ ಸಂಬಳ ಕೊಡಲಾಗುವಷ್ಟೇ ಹಣವನ್ನು ಬಜೆಟ್‌ನಲ್ಲಿ ಕೊಡಲಾಗಿದೆ. ಬಿಐಸಿ ಮಿಲ್ಲು ಸುಮಾರಾಗಿ ಈಗ ಮುಚ್ಚಿಯೇ ಬಿಟ್ಟಿದೆ. 30 ಜೂನ್‌ನೊಳಗೆ ಸ್ವಯಂ ನಿವೃತ್ತಿ ಯೋಜನೆಗೆ(ವಿ.ಆರ್.ಎಸ್) - ಅರ್ಜಿ ಹಾಕಬೇಕೆಂದು ಅಲ್ಲಿಯ ಕಾರ್ಮಿಕರೆಲ್ಲರಿಗೆ ಗಡುವು ನೀಡಲಾಗಿದೆ. ಇಲ್ಲಿ 10 ಸಾವಿರ ಹಾಗೂ ಎನ್.ಟಿ.ಸಿ. ಮಿಲ್ಲುಗಳಲ್ಲಿ 2.3 ಲಕ್ಷ ಕಾರ್ಮಿಕರಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ಕಾನಪುರದ ಮತ್ತು ಎನ್.ಟಿ.ಸಿ.ಯ ಗಿರಣಿಗಳನ್ನು ಮುಚ್ಚುವುದಿಲ್ಲ, ಅವನ್ನು ಆಧುನೀಕರಿಸಿ ನಡೆಸಲಾಗುವುದು ಎಂದು ಜನವರಿ 23, 1998 ರಂದು ಅಟಲ್ ಬಿಹಾರಿ ವಾಜಪೇಯಿಯವರು ಖಾನಪುರದ ಫೂಲ್‌ಬಾಗ್‌ನಲ್ಲಿ ಸಾರ್ವಜನಿಕವಾಗಿ ಸಾರಿದ್ದರು. ಆದರೆ ಈಗ ಅಧಿಕಾರಕ್ಕೆ ಬಂದು ಪ್ರಧಾನ ಮಂತ್ರಿಗಳಾದ ಮೇಲೆ ಈ ಬಗ್ಗೆ ಮೌನವಾಗಿದ್ದಾರಷ್ಟೇ ಅಲ್ಲ ತದ್ವಿರುದ್ಧವಾಗಿ ಎನ್.ಟಿ.ಸಿ.ಯು ಅಸಮರ್ಥವೆಂದು ಹೇಳುವ ಗಿರಣಿಗಳನ್ನು ಬಿ.ಐ.ಸಿ. ಗಿರಣಿಯನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆ.

ಜೂನ್ 8 ರಂದು ನವದೆಹಲಿಯಲ್ಲಿ 'ಜವಳಿ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ' ಯ ಬಾವುಟದಡಿ ಸಭೆ ಸೇರಿದ ಕಾನಪುರ, ಇಂದೂರ್, ಅಮೃತಸರ, ಮುಂಬೈ, ಕಲ್ಕತ್ತಾಗಳಿಂದ ಬಂದ ಕಾರ್ಮಿಕರ ಪ್ರತಿನಿಧಿಗಳು ಸಭೆ ಸೇರಿ, ಈ ವಚನಭಂಗವನ್ನು ಪ್ರತಿಭಟಿಸಲು ನಿರ್ಧರಿಸಿದ್ದಾರೆ. ಹಿಂದಿನ ಪುನರುಜ್ಜೀವನ ಯೋಜನೆಗಳನ್ನು ಕಾರ್ಯರೂಪಕ್ಕೆ ತರದೆ ಇವನ್ನು ಮುಚ್ಚೀ ಬಿಡುವ ಸರಕಾರದ ನಿರ್ಣಯದ ಬಗ್ಗೆ ಈ ಸಭೆ ದಿಗ್ಭ್ರಮೆ ಹಾಗೂ ಕೋಪವನ್ನು ವ್ಯಕ್ತಪಡಿಸಿತು. ವಿಶೇಷ ತ್ರಿಪಕ್ಷೀಯ ಸಮಿತಿ ಈ ಗಿರಣಿಗಳನ್ನು ಪುನರುಜ್ಜೀವನ ಗೊಳಿಸಲು ಒಪ್ಪಿತ್ತು. ಏಪ್ರಿಲ್ 1995 ರಲ್ಲಿ ಈ ಯೋಜನೆಗೆ ಕೇಂದ್ರ ಸಂಪುಟದ ಅನುಮೋದನೆಯೂ ದೊರೆತಿತ್ತು. ಹಿಂದಿನ ಸಂಯುಕ್ತ ರಂಗ ಸರ್ಕಾರ ಬಿಐಸಿ ಮಿಲ್ಲನ್ನು ಪುನರುಜ್ಜೀವನಗೊಳಿಸುವ ನಿರ್ಣಯ ಕೈಗೊಂಡಿತ್ತು. ಅದನ್ನೂ ಈ ಸರಕಾರ ಕೈಬಿಟ್ಟಿದೆ.

ಆದ್ದರಿಂದ ಎಐಟಿಯುಸಿ, ಸಿಐಟಿಯು, ಹೆಚ್‌ಎಂಎಸ್, ಇಂಟಕ್ ಹಾಗೂ ಯುಟಿಯುಸಿಗೆ ಸೇರಿದ ಗಿರಣಿ ಕಾರ್ಮಿಕ ಸಂಘಗಳಿರುವ ಜಂಟಿ ಕ್ರಿಯಾ ಸಮಿತಿ ಹೋರಾಟದ ಕಾರ್ಯಕ್ರಮವನ್ನು ರೂಪಿಸಿತು. ಇದರ ಪ್ರಕಾರ ವಿವಿಧ ಜವಳಿ ಕೇಂದ್ರಗಳಲ್ಲಿ ಜಂಟಿ ಚಳುವಳಿ, ಜೂನ್ ತಿಂಗಳಲ್ಲಿ ರಾಜ್ಯ ವಿಧಾನ ಸಭೆಗಳ ಮುಂದೆ ಮತಪ್ರದರ್ಶನ ಹಾಗೂ ಜುಲೈ 15 ರಂದು ಸಂಸತ್ತಿನೆದುರು ಬೃಹತ್ ರ್ಯಾಲಿ ನಡೆಸಲು ನಿರ್ಧರಿಸಲಾಗಿದೆ. ಎನ್.ಟಿ.ಸಿ. ಹಾಗೂ ಬಿಐಸಿ ಗಿರಣಿಗಳ ಪುನರುಜ್ಜೀವನ, ವೇತನ ಮತ್ತು ಇತರ ಬಾಕಿಗಳ ಪಾವತಿ ಈ ಹೋರಾಟದ ಮುಖ್ಯ ಬೇಡಿಕೆಗಳು.

ಜುಲೈ 15 ರ ರ್ಯಾಲಿಗೆ ಸಿದ್ಧತೆಯಾಗಿ ಕಾನಪುರದಲ್ಲಿ ಜೂನ್ 17, 1998 ರಂದು ಎನ್.ಟಿ.ಸಿ., ಬಿಐಸಿ ಗಿರಣಿಗಳ ಕಾರ್ಮಿಕರ ಒಂದು ಸಮಾವೇಶ ನಡೆಯಿತು. ಸಿಐಟಿಯು, ಎಐಟಿಯುಸಿ, ಹೆಚ.ಎಂ.ಎಸ್., ಇಂಟಕ್, ಯು.ಟಿ.ಯು.ಸಿ. ಹಾಗೂ ಬಿಎಂಎಸ್ ನ 500 ಪ್ರತಿನಿಧಿಗಳು ಭಾಗವಹಿಸಿದ ಈ ಸಮಾವೇಶ ಹಲವು ಕಾರ್ಯಕ್ರಮಗಳನ್ನು ಅಂಗೀಕರಿಸಿದರು. ಜುಲೈ 15 ರ ಸಂಸತ್ ಚಲೋ ಮೊದಲು ಜುಲೈ 9 ರಂದು ಲಕ್ನೌನಲ್ಲಿ ರಾಜ್ಯ ಮಟ್ಟದ ಕೇಂದ್ರ ರ್ಯಾಲಿ ನಡೆಸಲು ಸಮಾವೇಶ ನಿರ್ಧರಿಸಿತು.

(ಐಎನ್‌ಎನ್)

'ಗಾಂಧೀ ವರ್ಸಸ್ ಗಾಂಧೀ'
ಯಾವ ಗಾಂಧಿ ವಿರುದ್ಧ ಎಂತಹ ಗಾಂಧಿ?



ವಸಂತ್

ಇತ್ತೀಚೆಗೆ ರಂಗಾಯಣದ ಕಲಾವಿದರು ತಮ್ಮ ಬೇಡಿಕೆಗಳತ್ತ, ಸಾಂಸ್ಕೃತಿಕ ಜವಾಬ್ದಾರಿಗಳ ಬಗ್ಗೆ ಸರ್ಕಾರದ ಪೂರ್ಣ ನಿರ್ಲಕ್ಷದತ್ತ ಗಮನ ಸೆಳೆದ ವಿಶಿಷ್ಟ ಪ್ರತಿಭಟನೆಯಂತೆ ಅವರು ಆಡಿದ ಮೂರು ನಾಟಕಗಳಲ್ಲಿ ಒಂದು ಗಮನ ಸೆಳೆಯಿತು. ಗಾಂಧಿ ವರ್ಸಸ್ ಗಾಂಧಿ ಎಂಬ ಮರಾಠಿ ನಾಟಕದ ಕನ್ನಡ ರೂಪಾಂತರ ಆ ನಾಟಕ. ಗಾಂಧೀಜಿ ಹಿರಿಮಗ ಹರಿಲಾಲ್ ನಾಟಕದ ಇನ್ನೊಬ್ಬ ಗಾಂಧಿ. ಈ ಇಬ್ಬರು ಗಾಂಧಿಗಳ ನಡುವೆ ಘರ್ಷಣೆ ನಾಟಕದ ವಸ್ತು.

ಗಾಂಧೀಜಿಯ ಬದುಕಿನ ಅಜ್ಞಾತ ಮಗ್ಗುಲೊಂದನ್ನು ಶೋಧಿಸುತ್ತದೆ ಈ ನಾಟಕ. ಗಾಂಧೀಜಿ ಹುತಾತ್ಮರಾಗಿ, ಆರು ತಿಂಗಳಲ್ಲೇ ಲೈಂಗಿಕ ರೋಗದಿಂದ ನರಳುತ್ತಾ ಮುಂಬಯಿಯ ಆಸ್ಪತ್ರೆಯೊಂದರಲ್ಲಿ ಸಾಯುತ್ತಿರುವ ಹರಿಲಾಲನ ಫ್ಲಾಷ್‌ಬ್ಯಾಕ್ ರೂಪದಲ್ಲಿದೆ. ಗಾಂಧೀಜಿಯ ಮಗನೆಂದು ಒಂದು ಕಡೆ ಹೆಮ್ಮೆಪಡುತ್ತ ಅದನ್ನು ತನ್ನ ಜೀವನೋಪಾಯಕ್ಕೆ ಬಳಸುತ್ತಾ ಇನ್ನೊಂದು ಕಡೆ ಗಾಂಧೀಜಿಯ ಮೌಲ್ಯಗಳಿಗೆ ವಿರುದ್ಧವಾಗಿ ತನ್ನ ಸ್ವಂತಿಕೆಯ ಹುಡುಕಾಟದಲ್ಲಿ ವಿಚಿತ್ರ ಹಾದಿಗಳನ್ನು ಹಿಡಿಯುತ್ತಾ ವಿಫಲನಾಗಿ ವಿಷಣ್ಣನಾಗಿ ಬದುಕುವ ಬಗ್ಗೆ ನೆನಪಿಸಿ ಕೊಳ್ಳುತ್ತಾ ಹೋಗುತ್ತಾನೆ. ಒಮ್ಮೆ ಈ ಗಾಂಧಿಯ ಮೌಲ್ಯಗಳನ್ನು ಪ್ರಶ್ನಿಸುತ್ತಾ ಇನ್ನೊಮ್ಮೆ ಸ್ವೀಕರಿಸುತ್ತಾ ಮತ್ತೊಮ್ಮೆ ಆ ಗಾಂಧಿಯ (ಹರಿಲಾಲನ) ಮೌಲ್ಯಗಳದ್ದು ಏನು ತಪ್ಪು ಎನ್ನುತ್ತಾ ಆತನ ಬಗ್ಗೆ ಮರುಗುತ್ತಾ, ಈ ಗಾಂಧಿ ಆ ಗಾಂಧಿಯನ್ನು ಸರಿ ದಾರಿಗೆ ತರಬಾರದೇ ಎಂದು ಹಲುಬುವ ಕಸ್ತೂರಬಾ ಈ ಇಬ್ಬರು ಗಾಂಧಿಗಳ ಈ ನಾಟಕದ ಕೇಂದ್ರ ವ್ಯಕ್ತಿ.

ನಾಟಕದ ಹಂದರ

ದಕ್ಷಿಣ ಆಫ್ರಿಕಾದಲ್ಲಿರುವ ತನ್ನ ತಂದೆ ತಾಯಿ ತಮ್ಮಂದಿರನ್ನು ಫಿನಿಕ್ಸ್ ಆಶ್ರಮದಲ್ಲಿ ಸೇರಿಕೊಳ್ಳುವ ಹರಿಲಾಲನನ್ನು ಎದುರುಗೊಳ್ಳಲು ಬಾರದಷ್ಟು ಸಾರ್ವಜನಿಕ ಕೆಲಸದಲ್ಲಿ ಮುಳುಗಿದ್ದಾರೆ ಗಾಂಧೀಜಿ. ಸಕ್ಕರೆ ಇಲ್ಲದ ಗೋಧಿಯ ಕಾಫಿಯ ಆಶ್ರಮದ ನಿಯಮ ಮುರಿದು ಹರಿಲಾಲನಿಗೆ ನಿಜವಾದ ಕಾಫಿ ಕೊಟ್ಟಿದಕ್ಕೆ ಕಸ್ತೂರಬಾಗೆ ಸಂಜೆ ಪ್ರಾರ್ಥನಾ ಸಭೆಯಲ್ಲಿ ಕಾದಿರುತ್ತದೆ ಟೀಕೆ. ಇದರಿಂದ ಆರಂಭವಾಗಿ ತಂದೆಯ ಮೌಲ್ಯಗಳ ಪರಿಚಯ ಆಗುತ್ತಾ ಹೋದಂತೆ ಹರಿಲಾಲ ಕೆಲವೊಮ್ಮೆ ಆ ಮೌಲ್ಯಗಳನ್ನು ಸ್ವೀಕರಿಸುತ್ತಾ, ಆದರೆ ಆ ಬಗ್ಗೆ ಅನುಮಾನ ಪಡುತ್ತಾ ತಂದೆಯ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗುತ್ತಾನೆ. ವರ್ಣಭೇದದ ವಿರುದ್ಧ ಸತ್ಯಾಗ್ರಹದ ಸೇನಾನಿಗಳನ್ನು ತಯಾರಿಸುವ ಆಶ್ರಮದಲ್ಲಿ ವಾಸಿಸುವ ತಾನು ಮತ್ತು ತನ್ನ ಕುಟುಂಬ ತಾವು ಬೋಧಿಸುವ ಮೌಲ್ಯಗಳನ್ನು ಚಾಚು ತಪ್ಪದೆ ಪಾಲಿಸಬೇಕೆಂಬ ಪಟ್ಟು ಹಿಡಿಯುವ ಗಾಂಧೀಜಿಗೂ, ಕಸ್ತೂರಿಬಾ ಹರಿಲಾಲ ರಿಗೂ ಆಗಾಗ ಘರ್ಷಣೆ ಯಾಗುತ್ತದೆ. ಲಂಡನ್ನಿನ ಗಾಂಧೀಜಿ ಅಭಿಮಾನಿಯೊಬ್ಬ ವಿದೇಶ ವ್ಯಾಸಂಗಕ್ಕೆ ಒಬ್ಬ ಹುಡುಗನನ್ನು ಸೂಚಿಸುವಂತೆ ಕೇಳಿದಾಗ ಹರಿಲಾಲನಿಗೆ ಅವಕಾಶ ಕೊಡಲಿಲ್ಲವೆಂದು ತಾಯಿ-ಮಗ ಇಬ್ಬರೂ ರೇಗುತ್ತಾರೆ. ಹರಿಲಾಲ ಮನೆ ಬಿಟ್ಟು ಭಾರತಕ್ಕೆ ವಾಪಸಾಗುತ್ತಾನೆ.

ಗಾಂಧೀಜಿ ಮೌಲ್ಯಗಳನ್ನು ತಿರಸ್ಕರಿಸಿ ಭಾರತಕ್ಕೆ ವಾಪಸಾಗಿ ತನ್ನ ಸ್ವಂತಿಕೆಯ ಹುಡುಕಾಟದಲ್ಲಿ ತೊಡಗುತ್ತಾನೆ. ತಂದೆಯ ದಾರಿಯನ್ನು ತಿರಸ್ಕರಿಸಿದರೂ ಅವರು ತಿಂಗಳಿಗೆ ಕಳಿಸುವ 30 ರೂ ನಿಂದ ಮೆಟ್ರಿಕ್ ಓದಲು ಪ್ರಯತ್ನಿಸಿ, ಕೆಲಸ ಹುಡುಕುತ್ತಾ ಎರಡರಲ್ಲೂ ವಿಫಲನಾಗುತ್ತಾ, ವ್ಯಾಪಾರ ಮಾಡಲು ಹೋಗಿ ಅವ್ಯವಹಾರದಲ್ಲಿ ತೊಡಗುತ್ತಾ, ಸ್ವಂತಿಕೆಯ ಹುಡುಕಾಟದಲ್ಲಿ ಮುಂದುವರೆಯುತ್ತಾನೆ. ತಾನು ವಿಫಲನಾದಾಗಲೆಲ್ಲ ತಂದೆಯ ಮೌಲ್ಯಗಳನ್ನು ದೂಷಿಸುತ್ತಾನೆ. ತನಗೆ ಸರಿಯಾದ ಶಿಕ್ಷಣ ಕೊಡದೆ, ಕೆಲಸ ಕೊಡಿಸದೆ, ವ್ಯವಹಾರಕ್ಕೆ ಸಹಾಯಕವಾಗದೆ ಇರಲು ತಂದೆಯ ವಿಚಿತ್ರ ಮೌಲ್ಯಗಳೇ ಅಡ್ಡಿ ಎನ್ನುತ್ತಾನೆ. ಇದನ್ನು ಜಗತ್ತಿಗೆ ತೋರಿಸಲು ಒಮ್ಮೆ 'ಅಬ್ದುಲ್ಲಾ ಗಾಂಧಿ'ಯಾಗಿ ಮತಾಂತರ ಹೊಂದಿ, ಮತ್ತೊಮ್ಮೆ 'ಹಿಂದೂ ದಲಿತ'ನಾಗಿ ಪುನಃ ವಾಪಸು ಬಂದು ಪಾಡು ಪಡುತ್ತಾನೆ. ಈ ನಡುವೆ ಭಾರತಕ್ಕೆ ಬಂದು ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸುತ್ತಿರುವ ಗಾಂಧೀಜಿ ತನ್ನ ಹೆಸರು ಬಳಸಿ ಅವ್ಯವಹಾರದಲ್ಲಿ ತೊಡಗಿದಾಗ, ಮತಾಂತರವಾದ ಆತನನ್ನು ಸಾರ್ವಜನಿಕವಾಗಿ ಖಂಡಿಸುತ್ತಾರೆ. ಗಾಂಧಿ ವರ್ಸಸ್ ಗಾಂಧಿ ಎರಡು ಪೀಳಿಗೆಗಳ ನಡುವೆ ಅಂತರ -ಘರ್ಷಣೆ, ಸಾರ್ವಜನಿಕ ಸೇವೆಗೆ ಮುಡಿಪು ಮಾಡಿರುವ ವ್ಯಕ್ತಿಯ ಸಾರ್ವಜನಿಕ ಹಾಗೂ ವೈಯಕ್ತಿಕ ಕೌಟುಂಬಿಕ ಬದುಕುಗಳ ನಡುವೆ ತಾಕಲಾಟ, ಗಾಂಧೀಜಿಯ ವೈಯಕ್ತಿಕ ಬದುಕಿನ ಹಾಗೂ ಗಾಂಧೀವಾದದ ಓರೆ ಕೋರೆಗಳು-ಹೀಗೆ ಹಲವು ಮಜಲುಗಳನ್ನು ಶೋಧಿಸುವ ಸಂಕೀರ್ಣ ಸತ್ವಪೂರ್ಣ ನಾಟಕದಂತೆ ಕಾಣುತ್ತದೆ ಮೊದಲ ನೋಟಕ್ಕೆ. ಮೇಲ್ ಪದರದಲ್ಲಿ ಇವೆಲ್ಲವನ್ನು ಮಾಡುತ್ತದೆ. ಆದರೆ ಸೂಕ್ಷ್ಮವಾಗಿ ಪರೀಶೀಲಿಸಿದರೆ ಈ ನಾಟಕದ ಮುಖ್ಯ ಧ್ವನಿ ಬೇರೆ ಎಂಬಂತೆ ಕಾಣುತ್ತದೆ.

ಆ ಗಾಂಧಿ ಈ ಗಾಂಧಿ:

ನಾಟಕದ ಮುಖ್ಯ ಧ್ವನಿ ಗಾಂಧೀಜಿ ಪ್ರತಿನಿಧಿಸಿದ ಮತ್ತು ಕಳೆದ ಹಲವು ದಶಕಗಳಿಂದ ನಮ್ಮ ದೇಶದಲ್ಲಿ ಇಡೀ ಸಮಾಜ ಸ್ವೀಕರಿಸಿದ ಹಲವು ಮೌಲ್ಯಗಳನ್ನು ಟೀಕಿಸಿ, ಲೇವಡಿ ಮಾಡಿ, ತಿರಸ್ಕರಿಸಲು ಅನುವುಮಾಡುತ್ತದೆ. ಆ ಗಾಂಧಿಯ ಮೌಲ್ಯಗಳನ್ನು ತಿರಸ್ಕರಿಸಿ ಈ ಗಾಂಧಿಯ ಮೌಲ್ಯಗಳನ್ನು ಅಂಗೀಕರಿಸುವಂತೆ ಮೆಲು ದನಿಯಲ್ಲಿ ಕೇಳುತ್ತದೆ. ಆ ಮೌಲ್ಯಗಳಾದರೂ ಯಾವುವು? ಸಾರ್ವಜನಿಕ ಹಿತಾಸಕ್ತಿಯನ್ನು ವೈಯಕ್ತಿಕ - ಕುಟುಂಬದ ಹಿತಾಸಕ್ತಿಗಿಂತ ಹೆಚ್ಚಿನದ್ದು ಎಂದು ಕಾಣುವುದು ಮತ್ತು ಅದಕ್ಕಾಗಿ ಯಾವುದೇ ತ್ಯಾಗಮಾಡಲು ತಯಾರಿರುವುದು, ತಾನು ನಂಬಿರುವ ಮೌಲ್ಯಗಳನ್ನು ಸಿದ್ಧಾಂತಗಳನ್ನು ಸಾರ್ವಜನಿಕರಿಗೆ ಪ್ರಚಾರ ಮಾಡುವ ಮೊದಲು ಕುಟುಂಬದ ಸದಸ್ಯರು ಸ್ವೀಕರಿಸುವಂತೆ ಪ್ರಯತ್ನಿಸುವುದು, ಸಾರ್ವಜನಿಕ ಸೇವೆಯ ಪ್ರತಿಫಲವನ್ನು ತನಗೆ-ಕುಟುಂಬಕ್ಕೆ ಸ್ವೀಕರಿಸದಿರುವುದು. ಈ ಗಾಂಧಿಯ ವೈಫಲ್ಯಕ್ಕೂ ಆ ಗಾಂಧಿಯನ್ನೇ ಈ ನಾಟಕ ದೂಷಿಸುತ್ತದೆ.

ಗಾಂಧೀಜಿ ಸ್ವಾತಂತ್ರ ಹೋರಾಟದಲ್ಲಿ ಬಳಸಿದ ಉಪವಾಸ ಮತ್ತು ಸತ್ಯಾಗ್ರಹ ಅಸ್ತ್ರಗಳನ್ನು ಈ ನಾಟಕ ತನ್ನ ಮೌಲ್ಯಗಳನ್ನು ಕುಟುಂಬದ ಮೇಲೆ (ಮತ್ತು ಸಮಾಜದ ಮೇಲೆ ಸಹ) ಹೊರಿಸಲು ಬಳಸಿದ ಪಾಳೆಯಗಾರಿ ಅಸ್ತ್ರಗಳಂತೆ ಬಿಂಬಿಸುತ್ತದೆ. ಗಾಂಧೀಜಿಯ ಮೌಲ್ಯಗಳನ್ನು ಇಂದೂ ಎತ್ತಿ ಹಿಡಿಯುವವರನ್ನು ಹಟಮಾರಿ ಮುದುಕರಂತೆ ಕಾಣುತ್ತದೆ,

ಸ್ವಾತಂತ್ರ್ಯ ಹೋರಾಟದ ಹಾಗೂ ನಂತರದ ಹಲವು ದಶಕಗಳಲ್ಲಿ ಒಪ್ಪಿತ ವಾಗಿದ್ದ ಸ್ವಾವಲಂಬನೆ, ಸಾರ್ವಜನಿಕ ಒಳಿತಿಗೆ ಪ್ರಾಶಸ್ತ್ಯದ ಮೌಲ್ಯಗಳನ್ನು ಬಿಟ್ಟು ಖಾಸಗೀಕರಣ, ಜಾಗತೀಕರಣ, ಸರಕು ಭೋಗವಾದದ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರತಿಗಾಮಿ ನಾಟಕ ಇದು. ಹರಿಲಾಲ ಮತ್ತು ಕಸ್ತೂರಬಾರ ಸಮಸ್ಯೆ ಗಳು ಇಲ್ಲಿ ನಿಮಿತ್ತ ಮಾತ್ರ. ಆದ್ದರಿಂದ ಗಾಂಧೀಜಿ, ಹರಿಲಾಲ ಕಸ್ತೂರಬಾರ ಸಂಬಂಧಗಳು ಹಾಗೂ ಮೌಲ್ಯಗಳ ಘರ್ಷಣೆ ವಾಸ್ತವವಾಗಿ ಹಾಗಿದ್ದವೆ ಎನ್ನುವುದು ಮುಖ್ಯವಾಗುವುದಿಲ್ಲ. ಕಮ್ಯುನಿಸಂನ ಪತನದ ನಂತರ 'ಸಿದ್ಧಾಂತದ ಕೊನೆ', ಖಾಸಗಿ ಆಸ್ತಿ, ಮಾರುಕಟ್ಟೆಯೊಂದೇ ಸತ್ಯ ಉಳಿದಿದ್ದೆಲ್ಲ ಮಿಥ್ಯೆ ಎನ್ನುವ ವಾತಾವರಣದಲ್ಲಿ ಇದು ಪಥ್ಯವೆನ್ನಿಸುತ್ತದೆ. ಅದೇ ಈ ನಾಟಕ ಮಹಾರಾಷ್ಟ್ರದಲ್ಲಿ ಜನಪ್ರಿಯವಾಗಲು ಕಾರಣ.

ಇದರರ್ಥ ಗಾಂಧೀಜಿಯ ಮೌಲ್ಯಗಳನ್ನು ಟೀಕಿಸಬಾರದು, ಪ್ರಶ್ನಿಸಬಾರದಂತಲ್ಲ. ಆದರೆ ಯಾವ ಮೌಲ್ಯಗಳನ್ನು ಟೀಕಿಸಲಾಗುತ್ತಿದೆ, ಯಾವ ಬದಲಿ ಮೌಲ್ಯಗಳನ್ನು ಮುಂದಿಡಲಾಗುತ್ತಿದೆ ಎಂಬುದು ಪ್ರಶ್ನೆ.

ನಾಟಕದ ಮುಖ್ಯ ಧ್ವನಿ ಇದಲ್ಲ ಎಂಬುದು ಯಾರಿಗಾದರೂ ಸಂಶಯ ಇದ್ದರೆ ನಾಟಕಕ್ಕೆ ಪ್ರೇಕ್ಷಕರ ಪ್ರತಿಕ್ರಿಯೆ ನೋಡಬೇಕಷ್ಟೆ. ನೈತಿಕ ಮೌಲ್ಯಗಳು, ಸಾರ್ವಜನಿಕ ಸೇವೆ, ಸತ್ಯಾಗ್ರಹದ ಲೇವಡಿ ಪ್ರೇಕ್ಷಕರ ಭಾರಿ ಚಪ್ಪಾಳೆಗಿಟ್ಟಿಸಿತ್ತು. 'ನಿನ್ನ - ನಿನ್ನ ಕುಂಟುಂಬ ಮೊದಲು ನೋಡಿಕೊ, ಆ ಮೇಲೆ ಸಮಾಜ ಉದ್ದಾರ ಮಾಡುವೆಯಂತೆ' ಎಂಬ ಸಾಮಾನ್ಯ ಧೋರಣೆಯನ್ನು ಪುಷ್ಟಿಗೊಳಿಸುತ್ತದೆ ಈ ನಾಟಕ.

ಆ ಗಾಂಧಿ ಮತ್ತು ಈ ಗಾಂಧಿ (ಹರಿಲಾಲ, ಇಂದಿರಾ, ರಾಜೀವ, ಸೋನಿಯಾ)ಯ ಮೌಲ್ಯಗಳ ನಡುವೆ ನಾಟಕದ ಕಸ್ತೂರಬಾರಂತೆ ತಾಕಲಾಟದಲ್ಲಿರುವ ಹಲವರನ್ನು ಅದು ಈ ಗಾಂಧಿಯತ್ತ ಸರಿಸುತ್ತದೆ. ಆ ಗಾಂಧಿಯ ಮೌಲ್ಯಗಳಲ್ಲಿ ಗಟ್ಟಿ ನಂಬಿಕೆ ಇರುವವರನ್ನು ಕನಿಷ್ಟ ಕಸ್ತೂರಬಾ ಸ್ಥಿತಿಗೆ ತಂದಿರಿಸುತ್ತದೆ. ಆ ರೀತಿ ಸಂದೇಹ ಹುಟ್ಟದಿದ್ದರೆ ನಿಮ್ಮನ್ನು ಹಟಮಾರಿ ಮುದುಕ ಎಂದು ಲೇವಡಿ ಮಾಡುತ್ತದೆ. ಈ ಗಾಂಧಿಯ ಬಳಿ ಈಗಾಗಲೇ ಇದ್ದರೆ ಶಾಭಾಶ್ ಎನ್ನುತ್ತದೆ.

ರಂಗಸಜ್ಜಿಕೆ, ಅಭಿನಯ ನಿರ್ದೇಶನ ಒಟ್ಟಾರೆ ಪ್ರದರ್ಶನದಲ್ಲಿ ರಂಗಾಯಣ ತನ್ನ ಎಂದಿನ ಅಚ್ಚುಕಟ್ಟುತನ ತೋರಿಸಿದೆ.

ಅಣಕ

ಶರತ್ ಚಂದ್ರ

ಆಧುನಿಕ ರಾಮರಾಜ್ಯದಲ್ಲಿ ಆಧುನಿಕ ಭರತರು...

ಇತ್ತೀಚಿಗೆ ಮಾಜಿ ಸಚಿವ ರೇವಣ್ಣನವರು ಎಲ್ಲೋ ಸಮಾರಂಭಕ್ಕೆ ಹೋಗಿ ವೇದಿಕೆ ಮೇಲೆ ಹತ್ತುವಾಗ ಚಪ್ಪಲಿ ಬಿಟ್ಟು, ಭಾಷಣ ಮಾಡಿ ಬರುವಾಗ ಅದು ಮಾಯವಾಗಿತ್ತಂತೆ. ಎಷ್ಟು ಹುಡುಕಿದರೂ ಸಿಗದೆ, ರೇವಣ್ಣನವರು ಪಾಪ ಶ್ರೀರಾಮನಂತೆ ಬರಿಗಾಲಿನಲ್ಲಿ ಹೋಗಬೇಕಾಯಿತಂತೆ! ಶ್ರೀರಾಮನಂತೆ ಯಾಕೆ ಎಂದಿರಾ? ತ್ರೇತಾಯುಗದಲ್ಲಿ ಶ್ರೀರಾಮ ಪಾದುಕೆ ಹಾಕಿಕೊಂಡು ವನವಾಸಕ್ಕೆ ಹೊರಟು ನಿಂತಾಗ, ಭರತ ಶ್ರೀರಾಮ ಪ್ರತಿನಿಧಿಯಾಗಿ ಅವರ ಪಾದುಕೆಗಳನ್ನು ತೆಗೆದುಕೊಂಡು ಸಿಂಹಾಸನದಲ್ಲಿ ಇಡಲಾಗಿ, ಶ್ರೀರಾಮ ಬರಿಗಾಲಲ್ಲೇ ಹೋಗಬೇಕಾಗಿತ್ತಲ್ಲ.

ರೇವಣ್ಣನವರ ಪಾದುಕೆಗಳನ್ನು ಒಯ್ದ ಈ ಆಧುನಿಕ ಭರತರು ಯಾರಿರಬಹುದು? ಈ ಆಧುನಿಕ ಭರತನಾಗಲಿ, ಪಾದುಕೆಗಳಾಗಲೀ ಸಿಗಲೇ ಇಲ್ಲವಂತೆ. ಮಾಜಿ ಸಚಿವ ಹಾಗೂ ಮಾಜಿ ಪ್ರಧಾನಿಗಳ ಪುತ್ರನ ಪಾದುಕೆ ಒಯ್ದು ಸಾಹಸ ಮಾಡಲು, ಏನೋ ಬಲವಾದ ಕಾರಣವಿರಬೇಕು. ರೇವಣ್ಣನವರ ಸಚಿವ ಖಾತೆಗೆ ಏಟು ಹಾಕುತ್ತಿರುವವರು ಯಾರಾದರೂ ಪಟೇಲರ ಬಳಿ ನಮಗೆ ರೇವಣ್ಣನವರ ಮತ್ತು ಅವರಪ್ಪನ ಆಶೀರ್ವಾದ ಇದೆ ಎಂದು ತೋರಿಸಲು ಪಾದುಕೆ ಒಯ್ದಿರಬಹುದೇ? ಪಟೇಲರ ಮಂತ್ರಿ ಮಂಡಲ ಪುನರ್ರಚನೆಗೂ ಇದಕ್ಕೂ ಏನಾದರು ಸಂಬಂಧವಿದೆಯೆ ಎಂದು ರಾಜಕೀಯ ವೀಕ್ಷಕರು ಗುಮಾನಿ ಪಟ್ಟಿದ್ದಾರಂತೆ.

ಈ ಸುದ್ದಿ ಕೇಳಿ ಪಟೇಲರು ಹುಷಾರಾಗಿದ್ದಾರಂತೆ. ಅವರು ಹೋದಲ್ಲೆಲ್ಲಾ ಅವರ ಪಾದುಕೆಗಳನ್ನು ಜೋಪಾನವಾಗಿ ಕಾಯಲು ವಿಶೇಷ ದಳ ನೇಮಿಸಿದ್ದಾರಂತೆ. ಸಿದ್ರಾಮಯ್ಯನವರು ಇದಕ್ಕಾಗಿ ತೀವ್ರ ಪ್ರತಿಭಟಿಸಿದ್ದಾರಂತೆ. ಈ ಸುದ್ದಿ ಕೇಳಿ ಕಿಡಿಕಿಡಿಯಾಗಿ ಹೆಗಡೆಯವರು, ತನ್ನ ಪಾದುಕೆಯನ್ನು ಕದ್ದೊಯ್ದು ಪಟೇಲರು ಆಳುತ್ತಿದ್ದಾರೆ, ಈಗ ರಾಮನಾದ ತಾನು ವಾಪಸು ಬಂದಿದ್ದೇನೆ, ಪಾದುಕೆ ಮತ್ತು ಸಿಂಹಾಸನ ವಾಪಸು ಕೊಡಬೇಕು ಎಂದು ಹೇಳಿದ್ದಾರಂತೆ. 'ರೀ ಹೆಗಡೆ! ಈಗ ನೀವೇ ತಂದಿರುವ ಆಧುನಿಕ ರಾಮರಾಜ್ಯದಲ್ಲಿ ಸಿಂಹಾಸನದಲ್ಲಿ ಕೂತವರೇ ರಾಮರು. ರಾಮನನ್ನು ವನವಾಸಕ್ಕೆ ಕಳಿಸಲು ಕಾಯುತ್ತಿರುವವರು ಭರತರು. ನೀವೇ ಭರತ. ನಾನಲ್ಲ' ಎಂದು ಫೋನ್ ಮಾಡಿ ಪಟೇಲರು ಗದರಿದ್ದಾರಂತೆ. ಧೈರ್ಯವಿದ್ದರೆ ನನ್ನ ಪಾದುಕೆ ಒಯ್ಯಿರಿ ನೋಡೋಣ ಎಂದು ಸವಾಲು ಹಾಕಿದ್ದಾರಂತೆ.

ಈಗಾಗಲೇ ಸಿಂಹಾಸನದಲ್ಲಿ ಕುಳಿತವರ ಪಾದುಕೆ ಕದ್ದು ಒಯ್ದು, ರಾಮನ ಪಾದುಕೆ ನಮ್ಮ ಬಳಿ ಇದೆ, ಆದ್ದರಿಂದ ಈ ರಾಮನನ್ನು ವನವಾಸಕ್ಕೆ ಕಳಿಸಿ, ಅಂತ ಭರತನ ಕಲಿಯುಗದ ಅವತಾರಗಳಾದ ಲಲಿತ-ಮಮತಾ-ಸಮತಾ ಕಲಿಯುಗದ ರಾಮ ವಾಜಪೇಯಿಯವರ ಮೇಲೆ ರೋಫು ಹಾಕುತ್ತಿದ್ದಾರಂತೆ. ತಮ್ಮ ಪಾದುಕೆ ಕಾಯಲು 'ರಾ' ದ ವಿಶೇಷ ದಳ ನೇಮಿಸಿರುವ ವಾಜಪೇಯಿಯವರು ನಿಮ್ಮ ಮಾತು ಕೇಳಿದರೆ ನಾರಾಯಣನ್‌ರವರು ನನ್ನನ್ನು ವನವಾಸಕ್ಕೆ ಕಳಿಸಿದರೆ ಎಂದು ತಮ್ಮ ಪಾಡು ಹೇಳಿಕೊಂಡರಂತೆ.

ಆಧುನಿಕ ರಾಮರಾಜ್ಯದಲ್ಲಿ ಆಧುನಿಕ ಭರತರ ಹಾವಳಿ ಹೆಚ್ಚಿದೆ. ನಿಮ್ಮ ಪಾದುಕೆಗಳ ಬಗ್ಗೆ ಹುಶಾರ್!

ಇದು ನಿಮಗೆ ತಿಳಿದಿರಲಿ

"ಅಗತ್ಯ ಆರ್ಥಿಕ ಮೂಲರಚನೆಗಳಿಲ್ಲದೆ ಬಾಂಬಿನ ಬಗ್ಗೆ ಮಾತುಗಳೆಲ್ಲಾ ಕೇವಲ ಒಣ ಅಬ್ಬರ. ಯಾವುದಾದರೂ ಸರಕಾರ ಮೊದಲು ದೇಶದ ಎಲ್ಲಾ ಜನರಿಗೆ ಆಹಾರ, ಬಟ್ಟೆ, ವಸತಿ, ಶುದ್ಧ ಕುಡಿಯುವ ನೀರು, ಶಿಕ್ಷಣ ಮತ್ತು ಮಾನವ ಯೋಗ್ಯ ಜೀವನ ನಡೆಸುವ ಅವಕಾಶವನ್ನು ಕಲ್ಪಿಸದೆ ಬರೀ ಬಾಂಬಿನ ಬಗ್ಗೆ ಗಂಭೀರ ಚರ್ಚೆ ನಡೆಸುವುದಾದರೆ ಅಂತಹ ಸರ್ಕಾರವನ್ನು ಕ್ರಿಮಿನಲ್ ಎಂದು ಕರೆಯಬೇಕಾಗುತ್ತದೆ"

ಇದು 1974ರಲ್ಲಿ ಪೋಖ್ರಾನ್ ನಲ್ಲಿ ಮೊದಲ ಬಾರಿಗೆ ಅಣು ಸಾಧನದ ಸ್ಫೋಟ ನಡೆಸಿ ಪರೀಕ್ಷಣೆ ನಡೆಸಿದಾಗ ಒಬ್ಬ 'ಸಮರಧೀರ' ಮುಖಂಡರ ಪ್ರತಿಕ್ರಿಯೆ. ಆಗ ಅವರು ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟದಿಂದಾಗಿ ತಿಹಾರ್ ಜೈಲಿನಲ್ಲಿದ್ದರು. ಹೌದು, ಅವರು ಈಗಿನ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್. ಅವರದೇ ಮಾತು ಗಳಲ್ಲಿ ಹೇಳವುದಾದರೆ ಅಂತಹ 'ಕ್ರಿಮಿನಲ್ ಸರಕಾರ'ದ ಒಬ್ಬ ಪ್ರಮುಖ ಮಂತ್ರಿ! ಏಕೆಂದರೆ ಭಾರತದ ಪ್ರತಿಯೊಬ್ಬ ನಾಗರಿಕನಿಗೆ ಈಗ ಅನ್ನ, ಬಟ್ಟೆ, ವಸತಿ ಸಿಕ್ಕಿದೆ ಯೆಂದು ಅವರೂ ನಂಬಿರಲಿ ಕ್ಕಿಲ್ಲವಲ್ಲ!

ಸರ್ಕಾರದ ನಿಷ್ಕ್ರಿಯತೆ ಒಂದೆಡೆ............

ಪುಟ 1 ರಿಂದ

ಮೂಗುದಾರ ಹಿಡಿಯುವವರೊಬ್ಬರಾದರೆ ಆಡಳಿತ ನಡೆಯುವುದಾದರೂ ಹೇಗೆ? ಇನ್ನು ಒಂದೂವರೆ ವರ್ಷದಲ್ಲಿ ಚುನಾವಣೆಯನ್ನೆದುರಿಸಬೇಕಾಗಿರುವ ಜನತಾದಳ ಸರಕಾರ ಇಂಥ ದಾರುಣ ಪರಿಸ್ಥಿತಿಯಲ್ಲಿದೆ.

ಸರಕಾರದ ನಿಷ್ಕ್ರಿಯತೆ ಒಂದೆಡೆಯಾದರೆ, ಮುಂಗಾರು ಮಳೆಯ ಪ್ರಕೋಪ ಮತ್ತೊಂದೆಡೆ ಕಾಣಬರುತ್ತಿದೆ. ಸರಕಾರದಲ್ಲಿಯ ಗೊಂದಲ, ನೆರೆ ಹಾವಳಿಗೆ, ಮುಂಗಾರು ಪ್ರಕೋಪಕ್ಕೆ ತುತ್ತಾಗಿ ಸರ್ವಸ್ವವನ್ನು ಕಳಕೊಂಡು ಸಂಕಷ್ಟದಲ್ಲಿದ್ದವರಿಗೆ ಶಾಪವಾಗಿ ಪರಿಣಮಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ಸರಕಾರದ್ದಾಗಿದೆ. ತಮ್ಮ ಆಂತರಿಕ ಸಮಸ್ಯೆಗಳಲ್ಲಿ ಸಿಲುಕಿಕೊಂಡಿರುವ, ಮುಳುಗೇಳುತ್ತಿರುವ ಮುಖ್ಯಮಂತ್ರಿಗಳು, ಹಾನಿಗೊಳಗಾಗಿರುವ, ಇನ್ನು ಮುಂದೆ ಹಾನಿಗೊಳಗಾಗುವ ಜನರ ಪರಿಸ್ಥಿತಿಯತ್ತ ಗಮನ ಹರಿಸುವುದು ಅತ್ಯವಶ್ಯ ಮತ್ತು ತುರ್ತು ಪರಿಹಾರಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತಿರುವಾಗಲೇ ಕೇಂದ್ರದಿಂದ ಪರಿಹಾರ ಕೇಳುವುದು ಅತ್ಯಗತ್ಯವೆಂದು ಹೇಳಬಯಸುತ್ತೇವೆ.

ವಾರದ ವ್ಯಂಗ್ಯ ಚಿತ್ರ

ವಾಜಪೇಯಿ ಸರಕಾರ ನೂರು ದಿನಗಳನ್ನು ಪೂರೈಸಿದ ಸಂದರ್ಭದಲ್ಲಿ 'ದಿ ಹಿಂದು'ನಲ್ಲಿ ಸುರೇಂದ್ರನ್ ವ್ಯಂಗ್ಯ



Reg. No. 17015/64 KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27